ಸದ್ವೃತ್ತಾನುಷ್ಠಾನಂ.

ಇದು

ಸದ್ವೃತರತ್ನಾವಳಿಯ ಉಪೋದ್ಘಾತರೂಪವು

ಪೂರ್ವಭಾಗವು.

(೨೧-೫-೦೭ ರಲ್ಲಿ) ಮೈಸೂರು ಸದ್ವಿದ್ಯಾಶಾಲೆಯಲ್ಲಿಯು; (೧೧-೭-೦೭ರಲ್ಲಿ)
ಬೆಂಗಳೂರು ಪಠನಭವನದಲ್ಲಿ ಶ್ರೀ ಶ್ರೀ ಶೃಂಗಗಿರಿಸ್ವಾಮಿ ಸನ್ನಿಧಿ
ಯಲ್ಲಿಯೂ; ಗ. ವೈ. ಕೃಷ್ಣಾಚಾರ್ಯರು ಹೇಳಿದ
ಉಪನ್ಯಾಸಾಂಶಗಳಿಂದ ಸೇರಿ

ತ್ರೈವರ್ಣಿಕಬಾಲಕ ಜನೋಪಯೋಗಾರ್ಥವಾಗಿ ಪ್ರಕಟಿಸಲ್ಪಟ್ಟಿದೆ.

SADVRUTHANUSHTANAM,--Part I.

An Introduction to Sadvrutha Ratnavali.

Lectures delivered in "Sadvidyamandira," Mysore, on 21-5-1907, and in "Patan Bhavan" Bangalore, in the Presence of His Holiness the Sringagiri Swamiji, on the 11th July 1907,

BY

G. V. KRISHNACHARYAR,

Pandit, Central College : & Author of "Dhatu Ratnavali," etc.

BANGALORE :
THE STANDARD PRESS.
1907.

ಬೆಲೆ ೪ ಆಣೆ.] [PRICE 4 AS.

ಸದ್ವೃತ್ತಾನುಷ್ಠಾನದ ವಿಷಯಾನುಕ್ರಮವು.

ಸದ್ವೃತ್ತಾನುಷ್ಠಾನದ ಶುದ್ಧಪತ್ರಿಕೆ.

ಪುಟ	ಬಂತಿ	ಸಾಧು.	ಪುಟ	ಬಂತಿ	ಸಾಧು.
1	15	ದಿಶಂಚ್ಛ	40	14	ಸ್ವಸ್ತ್ವಬಲಾರೋಗ್ಯ
2	18	ಮದ್ಭಕ್ತಿಂ	41	12	ತೋರುತ್ತೆ
6	19	ಮಾನಸಕರ್ಮಗಳು	42	5	ನೋಡಿರಿ
7	11	ಕಾರ್ಯಗಳು. ಇದರಿಂದಲೇ ಧರ್ಮವೃದ್ಧಿಯಾಗುವುದು	42	26	ಮುಟ್ಟದೆ
7	12	ನಿಷಿದ್ಧ	43	16	ಯೋಗಾಭ್ಯಾಸ
7	16	ಗುಣಕಾರ್ಯಗಳು. ಈ ರಜಸ್ತಮಃಕಾರ್ಯಗಳಿಂದಲೇ ಅಧರ್ಮವೃದ್ಧಿಯಾಗುವುದು	44	2	ಪರ್ಯವಸಾಯಿ
9	20	ಪ್ರಜ್ಞಾಪರಾಧವೇ	44	2	ವುಳ್ಳವರಾಗ
10	13	ಸಂಧ್ಯಾದಿ	44	5	ತಿದ್ದಿ
11	7	ವೇದಾಭ್ಯಾಸೋ	44	26	ಸ್ವಾಭಾವಿಕ,
13	11	ಅತಿಶಯೋಕ್ತಿ	44	27	ಎಂಬೀ
13	26	ಸ್ತ್ರಿಯಮ್ರುದ್ವಹೇ	45	2	ಪ್ರವರ್ತಿಸು
15	18	ಬಾಯಾರಿದವನಲ್ಲವೆ	46	12	ವರ್ಗಕ್ಕೆಲ್ಲಾ
16	22	ನಮ್ಮಲ್ಲಿಗೆ	46	30	ಬುದ್ಧಿಗೆಡಿಸಿ
16	27	ನಿಂರ್ಬಂಧ	47	4	ಆ ವೇದನೆಗಳಿಗೆ
17	5	ಕಲಿಯುದಿದ್ದವರೂ	47	12	(ಅಮರಿಕಖಂಡ)
18	9	ಸಚ್ಛಾಸ್ತ್ರ	47	27	ಅಚಿಂತ್ಯಾದ್ಭುತ
20	12	ಮಾಡತಕ್ಕವನು	48	5	ಸಂಭವಾಮ್ಯಾತ್ಮಮಾಯಯಾ
24	22	ಹೀನಃ	48	15	ನಮ್ಮಲ್ಲಿ
24	25	ಶತ್ರುಃ	48	20	ಶ್ರುತಿಃಸ್ಮೃತಿರ್ಮಮೈವಾ
29	22	ವಿಶೇಷಾಚ್ಚ	49	13	ಇದು ಶೀತ
30	8	ದಾರುಮಯವಾದ	50	12	ಅಸಾತ್ಮ್ಯಮಿತಿ
31	19	ಜ್ಞಾನಿಭ್ಯೋ	51	20	ನಿತ್ಯಕರ್ಮ
33	1	ವಯಸ್ಸುಳ್ಳ	52	15	ಚಿಕಿತ್ಸಕಾಃ
33	5	ವರ್ಚಸ್ಸು	53	1	ಯೋಯಮಿಚ್ಛೇ
34	7	ಭಿಕ್ಷ	55	26	ಅಜ್ಞಾನ,
35	19	ಶುದ್ಧ್ಯಾಚಮಣ	56	3	ರಾರೋಗ್ಯಾದಿ
38	10	ಬ್ರಾಹ್ಮಣನು	56	9	ಸದ್ವಿದ್ವಜ್ಜನವಂ
40	2	ಸೌಮ್ಯಮನಃ	56	14	ದೋಷೋಽಸೌ
			56	17	ಯಾವುದು? ಎಷ್ಟುಬಗೆ?
			56	20	ತಿಳಿಸಲ್ಪಡುವುವು.

ಶ್ರೀರಾಮೋವಿಜಯತೇ.

ಸದ್ವೃತ್ತಾನುಷ್ಠಾನಂ.

ಯಸ್ಯಾಗ್ನಿ ರಾಸ್ಯಂ ದ್ಯೌರ್ಮೂರ್ಧಾ ಖಂ ನಾಭಿಶ್ಚರಣೌ ಕ್ಷಿತಿಃ॥
ಸೂರ್ಯ ಶ್ಚಕ್ಷು ರ್ದಿಶಃ ಶ್ರೋತ್ರೇ ತಸ್ಮೈ ಲೋಕಾತ್ಮನೇ ನಮಃ॥

ಲೋಕದಲ್ಲಿ ಪ್ರಾಣಿಗಳ ಪ್ರವರ್ತನಗಳೆಲ್ಲವೂ ಸುಖಾರ್ಥವಾಗಿವೆಯಲ್ಲದೆ ಎಲ್ಲಿಯೂ ಯಾರಿಗೂ "ನನಗೆ ದುಃಖ ವಿರಲಿ" ಎಂಬ (ಭಾವಿಸುಖಾಭಿಲಾಷಶೂನ್ಯವೂ ಆದ) ಪ್ರವೃತ್ತಿಯೆಲ್ಲಿಯೂ ಕಾಣಬರಲಿಲ್ಲ. ಆದರೂ ಮರ್ತ್ಯರೆಲ್ಲರಿಂದಲೂ ಆಧಿವ್ಯಾಧಿರೂಪ ತಾಪತ್ರಯಾಪರಪರ್ಯಾಯವಾದ ಐಹಿಕ ದುಃಖವು ಅನುಭವಿಸಲ್ಪಡುತ್ತಲೇ ಇರುವುದು.

ಶ್ಲೋ॥ ಕರ್ಮಾಣ್ಯಾರಭಮಾಣಾನಾಂ ದುಃಖಹತ್ಯೈ ಸುಖಾಯಚ॥
ಪಶ್ಯೇತ್ಪಾಕವಿಪರ್ಯಾಸಂ ಮಿಥುನೀಚಾರಿಣಾಂ ನೃಣಾಂ॥

ಎಂದು ಭಾಗವತೈಕಾದಶ ಸ್ಕಂಧದಲ್ಲಿ ಪ್ರವೃತ್ತಿಧರ್ಮಪರರಾದ ಮನುಷ್ಯರಿಗೆ ದುಃಖಸ್ಪೃಷ್ಟವಲ್ಲದ ಶುದ್ಧಸುಖವು ದುರ್ಲಭವೆಂದು ಸೂಚಿತವಾಗಿದೆ. ಹಾಗೆಯೇ ಮಹಾಭಾರತದ ಶಾಂತಿಪರ್ವದಲ್ಲಿ ಮನುಬೃಹಸ್ಪತಿ ಸಂವಾದದೊಳಗೆ:—

ಶ್ಲೋ॥ ಇಷ್ಟಂ ಚ ಮೇ ಸ್ಯಾದಿತರಚ್ಚ ನ ಸ್ಯಾತ್
ಏತ ತ್ಕೃತೇ ಕರ್ಮವಿಧಿಃ ಪ್ರವೃತ್ತಃ ॥
ಇಷ್ಟಂ ತ್ವನಿಷ್ಟಂ ಚ ನ ಮಾಂ ಭಜೇತೇ
ತ್ಯೇತತ್ಕೃತೇ ಜ್ಞಾನವಿಧಿಃ ಪ್ರವೃತ್ತಃ ॥

ಎಂದು 'ನನಗೆ ಯಾವಾಗಲೂ ಅನುಕೂಲವಾದ ಸುಖವೇ ಇರಬೇಕು. ಪ್ರತಿಕೂಲವಾದ ದುಃಖವೇ ಬರಕೂಡದು' ಎಂಬುದಕ್ಕೋಸ್ಕರವೇ ಕರ್ಮವಿಧಾನವು ಪ್ರವೃತ್ತವಾಗಿದೆ. "ನನಗೆ ಆ ಸುಖವೂ ಬೇಡ ಈ ದುಃಖವೂ ಬೇಡ" ಎಂಬ ನಿವೃತ್ತಿ ಮಾರ್ಗಕ್ಕೋಸ್ಕರವೇ ಜ್ಞಾನವಿಧಾನವು ಏರ್ಪಟ್ಟಿದೆ. ಪ್ರಕೃತದಲ್ಲಿ ಸುಖೇಚ್ಛೆಯಿಂದ ಕರ್ಮಮಾರ್ಗದಲ್ಲಿ ಪ್ರವರ್ತಿಸಿದ ಮಾನವನು ಸಮನಸ್ಕೇಂದ್ರಿಯ ಯುಕ್ತವಾದ ಶರೀರವೇ ಸುಖಕ್ಕೂ ದುಃಖಕ್ಕೂ ಆಶ್ರಯವಾಗಿರುವುದರಿಂದ ಮನಸ್ಸಿನಿಂದ ಮಾಡಿದ ಕರ್ಮದ ಶುಭಾಶುಭಫಲಗಳನ್ನು ಮನೋಮೂಲಕವಾಗಿಯು, ವಾಕ್ಕಿನಿಂದ ಮಾಡಿದುದನ್ನು ವಾಙ್ಮೂಲಕ

ವಾಗಿಯು, ಶರೀರದಿಂದ ಮಾಡಿದ ಕರ್ಮಫಲವನ್ನು ಶರೀರದಿಂದೆಯೂ ಅನು ಭವಿಸುತ್ತಾನೆ. ಕರ್ತೃವಿಲ್ಲದೆ ಕರ್ಮವುಂಟೆ? ತಾನು ಹಿಂದೆ ಮಾಡಿದ್ದರೆ ಅದರ ಫಲವಂ ತಾನೇ ಮುಂದೆ ಹೊಂದಬೇಕು. ಬಾಲ್ಯದಲ್ಲಿ ದೇಹೇಂದ್ರಿ ಯಗಳಿಗೆ ವಿರೋಧಾಚರಣೆಯಂ ಮಾಡಿದ್ದರೆ ಅದು ತತ್ಪರಿಪಾಕ ಕಾಲದಲ್ಲಿ (ಮುದಿತನದಲ್ಲಿ ಅಥವಾ ಮುಂದಿನ ಹುಟ್ಟಿನಲ್ಲಿ) ಆಯಾ ದೇಹೇಂದ್ರಿಯ ಭಾಗ ಗಳಂ ಕೆಡಿಸಿ ದೇಹಿಗೆ ದುಃಖವಂ ಕೊಡುತ್ತದೆ ಆದರಲ್ಲಿಯೂ ಕಾಲುತಾಕಿ ದರೆ ಕೈ ನೋಯುವುದು, ಕೈ ಮುರಿದರೆ ಕಿವಿ ನೋಯುವುದೆಂಬುದಿಲ್ಲ. ಯಾವ ಅವಯವಕ್ಕೆ ಅಪಚಾರವಾದರೆ ಆ ಭಾಗವೇ ಕೆಡುವುದೆಂಬುದೇ ಅನುಭವ ಸಿದ್ಧವು. ಬೇವಿನ ಬೀಜವಂ ನಟ್ಟು ಮಾವಿನ ಬೆಳೆ ಬೇಕೆಂದರೆ ಬಾರದು. ಭೂಮಿಯಲ್ಲಿ ಬೇಸಾಯಗಾರನು ತಾನು ಎಂತಹ ಎಂತಹ ಬೆಳೆಯನ್ನು ಬೆಳೆ ಯುವನೋ ಅಂತಹುದನ್ನೇ ಅವನು ಅನುಭವಿಸಬೇಕು. ರಾಗಿಯಂಬಿತ್ತಿ ನೆಲ್ಲುಬೇಕೆಂದರೆ ಬಾರದಷ್ಟೆ? ಹಾಗೆಯೆ ಫಲಾರ್ಥಿಯಾದವನು ಸತ್ತ್ವಾದಿ ಗುಣಯುಕ್ತನಾಗಿ ಹೇಗೆಹೇಗೆ ಕರ್ಮಗಳನ್ನು ಮಾಡುವನೋ ಹಾಗೆಹಾಗೆ ಶುಭಾಶುಭರೂಪವಾದ ತತ್ತತ್ಕರ್ಮ ಫಲಗಳನ್ನು ಅನುಭವಿಸಿಯೇ ತೀರಬೇಕು ಎಂದು ಹೇಳಿರುವುದರಿಂದ ಸುಖದುಃಖಗಳು ಸತ್ತ್ವಾದಿಗುಣಯೋಗಾನುಗುಣ ವಾಗಿ ಸಂಭವಿಸುವುವು.—ಭಾಗವತ ಏಕಾದಶ ಸ್ಕಂಧದಲ್ಲಿ:—

ಶ್ಲೋ॥ ಸತ್ತ್ವಂ ರಜ ಸ್ತಮ ಇತಿ ಗುಣಾ ಬುದ್ಧೇ ರ್ನ ಚಾತ್ಮನಃ।
ಸತ್ತ್ವಾದ್ಧರ್ಮೋ ಭವೇ ಚ್ಛುದ್ಧಾ ತ್ಪುಂ ಸೋ ಮದ ಕ್ತಿ ಲಕ್ಷಣಃ॥
ಧರ್ಮೋ ರಜಸ್ತಮೋ ಹನ್ಯಾತ್ಸ_ತ್ವವೃತ್ತಿ ರನುತ್ತಮಾ।
ಆಶು ನಶ್ಯತಿ ತನ್ಮೂಲೋ ಹ್ಯಧರ್ಮ ಉಭಯೇ ಹತೆ॥

ಸತ್ತ್ವ ರಜಸ್ಸು ತಮಸ್ಸು ಎಂಬ ತ್ರಿಗುಣಗಳು ಬುದ್ಧಿಗೆ ಸೇರಿವೆ, ಆತ್ಮನಿಗಲ್ಲ. ಅವುಗಳಲ್ಲಿ ಶುದ್ಧಸತ್ತ್ವದಿಂದ ಪರಮಾತ್ಮಭಜನರೂಪವಾದ ಧರ್ಮ ವುಂಟಾಗು ವುದು. ಆ ಧರ್ಮವು ಪ್ರವೃದ್ಧವಾಗಿ ರಜಸ್ತಮಸ್ಸುಗಳನ್ನು ನಾಶಮಾಡುವುದು. ಆ ರಜಸ್ತಮಸ್ಸುಗಳು ನಷ್ಟವಾದರೆ ತನ್ಮೂಲವಾದ ಅಧರ್ಮವೂ ಧ್ವಂಸ ವಾಗುವುದೆಂದು ಹೇಳಿದೆ.

ಭಾ॥ ಶಾಂತಿಪರ್ವದಲ್ಲಿ "ಇಹಲೋಕ ಪರಲೋಕಗಳಲ್ಲಿ ವಸ್ತುಪ್ರವೃ ತ್ತಿಗಳೆಲ್ಲವೂ ಸುಖಾರ್ಥವಾಗಿಯೇ ಹೇಳಲ್ಪಟ್ಟಿವೆ. ಆ ತ್ರಿವರ್ಗಫಲಗಳಲ್ಲಿ ಸುಖವನ್ನು ಮೀರಿದ ಮತ್ತೊಂದು ಮಹಾಫಲವು ಬೇರೆ ಯಾವುದೂ ಇಲ್ಲ. ಸತ್ಯ, ಧರ್ಮ, ಪ್ರಕಾಶ, ಎಂಬಿವು ಮೂರು ಸುಖಕ್ಕೆ ಸೇರಿವೆ. ಅನೃತ, ಅಧರ್ಮ ತಮಸ್ಸು, ಎಂಬಿವು ಮೂರು ದುಃಖಕ್ಕೆ ಸೇರಿವೆ. ಸ್ವರ್ಗವನ್ನು ಪ್ರಕಾಶವೆಂದು, ನರಕವನ್ನು ತಮಸ್ಸೆಂದು ಹೇಳುತ್ತಾರೆ. ಆ ಸತ್ಯಾನೃತಗಳೆರಡೂ ಮಿಶ್ರ

ಹಿಾದುದು ಈಗ ನಾವು ವಾಸಮಾಡುತ್ತಿರುವ ಈ ಭೂಲೋಕವೆ. ಇದು ತ್ರಾಸಿನಂತೆ ಸುಖದುಃಖಗಳನ್ನು ಅಳತೆಮಾಡಿ ತೋರಿಸುವುದು. ಸತ್ಯ ಧರ್ಮಾದಿ ಸತ್ತ್ವಗುಣವು ಹೆಚ್ಚಿದರೆ ಮನುಷ್ಯನನ್ನು ಉನ್ನತಸ್ಥಿತಿಗೆ ತರುವುದು. ಅಸತ್ಯಾಧರ್ಮಾದಿ ರಜಸ್ತಮೋಗುಣಕಾರ್ಯಗಳು ಹೆಚ್ಚುತ್ತಬಂದರೆ ನರನನ್ನು ನೀಚಸ್ಥಿತಿಗೆ ತರುವುದು.ಅದರಿಂದ ಇದೇ ಮಧ್ಯಮಲೋಕವು. ಸತ್ಯವು ಪ್ರಕಾಶಕ್ಕೆ ಸದೃಶವು. ಸತ್ಯದಿಂದಲೇ ಲೋಕವು ಧರಿಸಲ್ಪಟ್ಟಿರುವುದು. ಸತ್ಯದಿಂದಲೇ ಸ್ವರ್ಗವನ್ನು ಹೊಂದಬೇಕು. ಅನೃತವು ತಮೋರೂಪವು. ಅದ ರಿಂದಲೇ ಜನವು ಕೆಳಗೊಯ್ಯಲ್ಪಡುತ್ತಾರೆ. ತಮೋಗುಣಯುಕ್ತವಾದ ಜನವು ಪ್ರಕಾಶವನ್ನು (ಸತ್ಯವನ್ನು) ಕಾಣದು.

ಅವುಗಳಲ್ಲಿ ಯಾವುದು ಸತ್ಯವೋ ಅದು ಧರ್ಮವು, ಯಾವುದು ಧರ್ಮವೋ ಅದು ಪ್ರಕಾಶವು, ಯಾವುದು ಪ್ರಕಾಶವೋ ಅದು ಸುಖವು. ಯಾವುದು ಅನೃತವೋ ಅದು ಅಧರ್ಮವು, ಯಾವುದು ಅಧರ್ಮವೋ ಅದು ತಮಸ್ಸು, ಯಾವುದು ತಮಸ್ಸೊ ಅದೇ ದುಃಖವು.

ಹೀಗೆ ಶಾರೀರಮಾನಸ ದುಃಖಗಳಿಂದಲೂ, ಭಾವಿದುಃಖಕರವಾದ ಸುಖಗಳಿಂದಲೂ ಕೂಡಿರುವೀಲೋಕ ಸೃಷ್ಟಿಯನ್ನು ಚೆನ್ನಾಗಿ ಪರೀಕ್ಷಿಸುತ್ತ ಬರುವ ವಿದ್ವಾಂಸರು ಮೋಹಪಡರು. ಅದರಿಂದ ಪ್ರಾಣಿಗಳಿಗೆ ಇಹದ ಲ್ಲಿಯೂ ಪರದಲ್ಲಿಯೂ ಪ್ರಾಪ್ತವಾಗುವ ಸುಖವು ಅನಿತ್ಯವೆಂದೇ ತಿಳಿದು ವಿವೇಕಿಯಾದವನು ಯಾವಾಗಲೂ ದುಃಖಧ್ವಂಸಾರ್ಥವೇ ಯತ್ನಿಸಬೇಕು.

ಅನೃತದಿಂದಲ್ಲವೆ ತಮಸ್ಸುಂಟಾದುದು. ತಮೋಗ್ರಸ್ತರೇ ಅಧರ್ಮವ ನ್ನನುವರ್ತಿಸುತ್ತ ಬಂದು, ಕ್ರೋಧ ಲೋಭ ಹಿಂಸಾದಿಗಳಿಂದ ಕೂಡಿದವರಾಗಿ ಧರ್ಮವನ್ನು ಬಿಟ್ಟುಬಿಡುವರು. ಅಂತಹವರು ಇಹದಲ್ಲಿ ಪರದಲ್ಲಿಕೂಡ ಸುಖ ವನ್ನು ಹೊಂದಲಾರರು. ಬಗೆಬಗೆಯಾದ ಬೇನೆ, ಸಂಕಟ, ತಾಪ, ಇತ್ಯಾದಿ ಗಳಿಂದ ಪೀಡಿತರಾಗುತ್ತಾರೆ. ಇಲ್ಲವೆ ಬಂದಿ, ಕೊಳೆ, ಕಟ್ಟು, ಭಾರ, ಹಿಂಸೆ, ಹಸಿವು, ನೀರಡಿಕೆ, ಮುಂತಾದವುಗಳಿಂದಾಗಲಿ ; ಮಳೆ, ಗಾಳಿ, ಮಂಜು, ಬಿಸಿಲು, ಬೆಂಕಿ, ಮೊದಲಾದವುಗಳಿಂದುಂಟಾದ ಶಾರೀರಪೀಡಾದಿಗಳಿಂ ದಾಗಲಿ; ತಪ್ತರಾಗುತ್ತಾರೆ. ಹಣ, ನೆಂಟರು, ಮನೆ, ಮಡದಿ, ಮಕ್ಕಳು, ಮೊದಲಾದುವನ್ನು ಕಳೆದುಕೊಂಡು ಪ್ರಿಯವಿಯೋಗಕೃತವಾದ ಮಾನಸ ಶೋಕಗಳಿಂದಾಗಲಿ; ಅಂಗವೈಕಲ್ಯ, ಮುದಿತನ, ಮರಣಗಳಿಂದಾಗಲಿ; ಕ್ಲೇಶ ಪಡುತ್ತಾರೆ. ಆದುದರಿಂದ ಯಾವನು ಈ ಶಾರೀರಮಾನಸ ದುಃಖಗಳಿಂದ ತಪ್ಪಿಸಿಕೊಳ್ಳುವನೋ ಅವನೇ ಸುಖವಂ ತಿಳಿದವನು" ಎಂದು ಭಾರತವು ಸಾರುತ್ತಿದೆ. ಅದಂತಿರಲಿ.

ಪ್ರಕೃತ ಸತ್ಯಾನೃತಮೂಲವಾದ, ಬೆಳಕು ಕತ್ತಲೆಯಂತಿರುವ, ಸುಖ ದುಃಖಗಳಿಗೆ ಧರ್ಮಾಧರ್ಮರೂಪವಾದ ಶುಭಾಶುಭ ಕರ್ಮಗಳೇ ಕಾರಣಗಳು. ಆ ಶುಭಾಶುಭಕರ್ಮಕ್ಕೆ ಸತ್ವಾದಿಗುಣಯೋಗವು ನಿಮಿತ್ತವು, ಆ ಗುಣಗಳು ಬುದ್ಧಿಗೆ ಪ್ರವರ್ತಕಗಳೂ ಸಹಕಾರಿಗಳೂ ಅಗಿವೆ. ಅದರಿಂದ ಮನುಷ್ಯನು ಯಾವಾಗಲು ಬುದ್ಧಿಶುದ್ಧಿಯನ್ನೇ ಸರ್ವಪ್ರಕಾರದಿಂದಲೂ ಬಯಸುತ್ತಲೇ ಇರ ಬೇಕು. ಅದಕ್ಕೋಸ್ಕರವೇ ಪ್ರಮಾದಬಾರದಂತೆ ಜಾಗರೂಕನಾಗಿ ಸದಾ ಸ್ವಧರ್ಮತತ್ಪರನಾಗಿಯೇ ನಿತ್ಯವೂ ತ್ರಿಕಾಲದಲ್ಲಯೂ ಗಾಯತ್ರೀಮಂತ್ರ ಪ್ರತಿ ಪಾದ್ಯವಾದ ಆದಿತ್ಯಾಂತರ್ಗತ ಸರ್ವಶ್ರೇಷ್ಠ ಸರ್ವ ಪ್ರಕಾಶಕವಾದ ತೇಜಸ್ಸನ್ನು ಧ್ಯಾನಿಸುತ್ತ ನಮಗೆ ಅದು ಯಾವಾಗಲೂ ಸನ್ಮಾರ್ಗದಲ್ಲಿ ಬುದ್ಧಿಯಂ ಪ್ರೇರಿಸ ಲೆಂದು ಪ್ರಾರ್ಥನೆ ಮಾಡಿಕೊಳ್ಳುತ್ತಲೇ ಇರಬೇಕೆಂದು ಮುಖ್ಯಾಭಿ ಪ್ರಾಯವು.

ಶ್ಲೋ॥ ಸುಖಾರ್ಥಾಃ ಸರ್ವಭೂತಾನಾಂ ಮತಾಃ ಸರ್ವಾಃ ಪ್ರವೃತ್ತಯಃ।
ಸುಖಂಚ ನ ವಿನಾ ಧರ್ಮಾತ್ ತಸ್ಮಾದ್ಧರ್ಮ ಪರೋ ಭವೇತ್ ॥

“ಸರ್ವಭೂತಗಳ ಪ್ರವೃತ್ತಿಯೂ ಸುಖಾರ್ಥವೇ. ಆ ಸುಖವಾದರೋ ಧರ್ಮ ಹೊರತು ಲಭಿಸದು. ಆದುದರಿಂದ ಸದಾ ಧರ್ಮಪರನಾಗಿರಬೇಕು ನರನು” ಎಂದು ವಾಗ್ಭಟ್ಟನು ಹೇಳಿರುವನು.

ಗೀತೆಯಲ್ಲಿ ಭಗವಂತನಿಂದ ಸುಖದುಃಖ ವಿವೇಚನೆ ಹೀಗೆ ಮಾಡ ಲ್ಪಟ್ಟಿದೆ.

ಶ್ಲೋ॥ ಸತ್ತ್ವಂ ರಜಸ್ತಮ ಇತಿ ಗುಣಾಃ ಪ್ರಕೃತಿಸಂಭವಾಃ।
ನಿಬಧ್ನಂತಿ ಮಹಾಬಾಹೋ ದೇಹೇ ದೇಹಿನ ಮವ್ಯಯಂ॥
ತತ್ರ ಸತ್ವಂ ನಿರ್ಮಲತ್ವಾತ್ಪ್ರಕಾಶಕಮನಾಮಯಂ।
ಸುಖಸಂಗೇನ ಬಧ್ನಾತಿ ಜ್ಞಾನಸಂಗೇನಚಾನಘ ॥
ರಜೋರಾಗಾತ್ಮಕಂ ವಿದ್ಧಿ ತೃಷ್ಣಾ ಸಂಗ ಸಮುದ್ಭವಂ।
ತಮಸ್ತ್ವಜ್ಞಾನಜಂ ವಿದ್ಧಿ ಮೋಹನಂ ಸರ್ವದೇಹಿನಾಂ॥
ಸತ್ತ್ವಂ ಸುಖೇ ಸಂಜಯತಿ ರಜಃ ಕರ್ಮಣಿ ಭಾರತ।
ಜ್ಞಾನಮಾವೃತ್ಯತು ತಮಃ ಪ್ರಮಾದೇ ಸಂಜಯತ್ಯುತ ॥

ಜಡಪ್ರಕೃತಿ (ಸ್ವಭಾವ) ಯಿಂದ ಉತ್ಪನ್ನವಾದ ತ್ರಿಗುಣ (ಹಗ್ಗ) ಗಳು ದೇಹಿ ಯಾದ ಜೀವನನ್ನು ಬಂಧಿಸುತ್ತವೆ. ಅದರಲ್ಲಿ ಸತ್ತ್ವವು ನಿರ್ಮಲ, ಶುದ್ಧ (ದೋಷವಿಲ್ಲದುದು) ವಾದುದರಿಂದ ಆರೋಗ್ಯವನ್ನೂ, ಜ್ಞಾನವನ್ನೂ ಉಂಟು ಮಾಡುವುದರಿಂದ ಸುಖಸಂಗದಿಂದಲೂ, ಜ್ಞಾನಸಂಗದಿಂದಲೂ, ನರನಂ ಬಂಧಿ

ಸುತ್ತದೆ. ಸುರರಿಗೂ ಬಂಧಕವು. ಆದರೂ ಇದೀಗ ಮನುಷ್ಯರಿಂದ ಅಪೇಕ್ಷಣೀಯವಾಗಿದೆ. ರಜೋಗುಣವು ಕಾಮಾತ್ಮಕವಾದುದರಿಂದ ಇದು ನನಗೆ ಬೇಕೆಂಬಾಶೆಯನ್ನು, ವಸ್ತುಗಳಲ್ಲಿ ಅತ್ಯಾಸಕ್ತಿಯನ್ನು, ಹುಟ್ಟಿಸಿ ಕರ್ಮಸಂಬಂಧದಿಂದ ಮಾನವರನ್ನು ಮರುಳು ಮಾಡಿಬಿಡುತ್ತದೆ. ತಮೋಗುಣವಾದರೋ ಅಜ್ಞಾನಾತ್ಮಕವಾದುದರಿಂದ ದೇಹಿಗಳಿಗೆಲ್ಲರಿಗೂ ಮೋಹಕವಾಗಿ ಪ್ರಮಾದ, ಆಲಸ್ಯ, ನಿದ್ರೆ ಇವುಗಳಿಂದ ಬಾಧಿಸುತ್ತದೆ. ಆದುದರಿಂದ ಸತ್ತ್ವವು ಪ್ರಾಣಿಯನ್ನು ಸುಖಸಾಧಕ ಧರ್ಮದಲ್ಲಿ ಪ್ರವೃತ್ತಿಗೊಳಿಸುತ್ತದೆ. ರಜೋಗುಣವು ಸುಖದುಃಖ ಮಿಶ್ರವಾದ ಕರ್ಮದಲ್ಲಿ ಇಳಿಸುತ್ತದೆ. ತಮೋಗುಣವು ತಿಳಿವಳಿಕೆಯನ್ನು ಮುಚ್ಚಿ ಪ್ರಮಾದದಲ್ಲಿ, ಅಧರ್ಮಸಾಧಕವಾದ ಆಲಸ್ಯಾದಿಗಳಲ್ಲಿ ಪ್ರವರ್ತನೆ ಮಾಡಿಸುತ್ತದೆ.

ಆದುದರಿಂದ (೧) ಧರ್ಮಸಾಧಕವಾದ ಪುಣ್ಯಕರ್ಮಕ್ಕೆ ನಿರ್ಮಲವಾದ ದುಃಖಮಿಶ್ರವಲ್ಲದ ಶುದ್ಧಸಾತ್ವಿಕಸುಖವು ಫಲವು; (೨) ರಾಜಸವಾದ ಮಿಶ್ರ ಕರ್ಮಕ್ಕೆ ದುಃಖಮಿಶ್ರಸುಖವು ಫಲವು; (೩) ತಾಮಸವಾದ ಅಶುಭಕರ್ಮಕ್ಕೆ ಅಜ್ಞಾನದುಃಖವೇ ಫಲವು; ಎಂದು ಸುಖದುಃಖ ವಿಭಜನೆಯಂಮಾಡಿ ಮರಳಿಯು ಸರ್ವಾಪೇಕ್ಷಣೀಯವಾದ ಸುಖವನ್ನು ಮೂರು ವಿಧವಾಗಿ ವಿಭಾಗಿಸಿ ಕಳಿದಾರೆ.

ಶ್ಲೋ॥ ಯತ್ತದಗ್ರೇ ವಿಷಮಿವ ಪರಿಣಾಮೇ ಽಮೃತೋಪಮಂ।
ತತ್ಸುಖಂ ಸಾತ್ವಿಕಂಪ್ರೋಕ್ತ ಮಾತ್ಮಕರ್ಮ ಪ್ರಸಾದಜಂ ॥೧॥

(೧) ಯಾವುದು ಆದಿಯಲ್ಲಿ ಪ್ರಯಾಸಸಾಧ್ಯವಾಗಿರುವುದರಿಂದ ವಿಷದಂತೆ ತೋರುವುದೋ, ಬರುತಬರುತ ವಿಪಾಕದಲ್ಲಿ (ಕೊನೆಗೆ) ಅಮೃತದಂತೆ ಏರ್ಪಡುವುದೋ, ಆ ಸುಖವು ಆತ್ಮವಿಷಯಕ ಬುದ್ಧಿನೈರ್ಮಲ್ಯದಿಂದುಂಟಾದುದಾಗಿ ಸಾತ್ವಿಕ ಸುಖವೆನಿಸುವುದು. ಇದರಿಂದ ಜೀವನು ದೇವತ್ವವಂ ಪಡೆದು ಊರ್ಧ್ವಗತಿಯನ್ನೆಯ್ದುವನು.

ಶ್ಲೋ॥ ವಿಷಯೇಂದ್ರಿಯಸಂಯೋಗಾ ದ್ಯತ್ತದಗ್ರೇ ಽಮೃತೋಪಮಂ।
ಪರಿಣಾಮೇ ವಿಷಮಿವ ತತ್ಸುಖಂ ರಾಜಸಂ ಸ್ಮೃತಂ ॥೨॥

(೨) ಶಬ್ದಾದಿವಿಷಯಗಳಿಗೂ ಶ್ರೋತ್ರಾದೀಂದ್ರಿಯಗಳಿಗೂ ಸಂಯೋಗದಿಂದ ಆದಿಯಲ್ಲಿ ಯಾವಸುಖವು ವಿಷಯಾನುಭವದಿಂದುಂಟಾಗಿ ಅಮೃತದಂತೆ ತೋರಬಂದು ಬರುತ ಬರುತ ವಿಪಾಕದಲ್ಲಿ ವಿಷದಂತೆ ದುಃಖಕರವಾಗುವುದೋ ಅದು ರಾಜಸಸುಖವು. ಇದರಿಂದ ಜೀವನಿಗೆ ಮೃತ್ಯುಲೋಕ ಗತಿಯಾಗುವುದು.

ಶ್ಲೋ॥ ಯದಗ್ರೇ ಚಾನುಬಂಧೇ ಚ ಸುಖಂ ಮೋಹನ ಮಾತ್ಮನಃ।
ನಿದ್ರಾಲಸ್ಯ ಪ್ರಮಾದೋತ್ಥಂ ತತ್ತಾಮಸ ಮುದಾಹೃತಂ ॥೩॥

(೩) ಯಾವಸುಖವು ಆದಿಯಲ್ಲಿಯೂ ಅಂತದಲ್ಲಿಯೂ ತನಗೆ ಮೋಹಕವಾಗಿ ಪರವಶವಾಗಿಸುವುದೋ ಅದು ಸದಾ ನಿದ್ದೆ, ಶರೀರಮಾಂದ್ಯ, ಅಧರ್ಮಬುದ್ಧಿ, ಅಪಸ್ಮೃತಿ, ಇತ್ಯಾದಿಗಳನ್ನುಂಟು ಮಾಡುವುದರಿಂದ ತಾಮಸಸುಖವು. ಇದು ನೀಚಗುಣವಾದುದರಿಂದ ಜೀವನನ್ನು ಕೆಳಗೊಯ್ಯುವುದು.

ಹೀಗೆ ಗುಣಸಂಬಂಧದಿಂದ ಬುದ್ಧಿ ಪ್ರವರ್ತಿಸುವಾಗ ಪ್ರಾಣಿಗಳು ಸುಖೇಚ್ಛೆಯಿಂದ ಮಾಡುತ್ತಿರುವ ಶುಭಾಶುಭ ಸರ್ವಕರ್ಮಗಳೂ ಮನಸ್ಸು, ವಾಕ್ಕು, ದೇಹ, ಈ ತ್ರಿಕರಣಗಳನ್ನು ಬಿಟ್ಟು ನಡೆಯಿಸಲ್ಕೆ ಅವಕಾಶವಿಲ್ಲದುದರಿಂದ ಈ ವಿಷಯದಲ್ಲಿ ಮನು ಹೇಳಿರುವ ಮಾತನ್ನು ಮನದಲ್ಲಿರಿಸಿ ಆ ಮನೋವಾಗ್ದೇಹಗಳು ದಾರಿತಪ್ಪದಂತೆ ನೋಡಿಕೊಳ್ಳುವುದು ನರನ ಕರ್ತವ್ಯವಾಗಿದೆ. ಅದೆಂತೆಂದರೆ:—

ಶ್ಲೋ॥ ಪರದ್ರವ್ಯೇಷ್ವಭಿಧ್ಯಾನಂ ಮನಸಾನಿಷ್ಟಚಿಂತನಂ।
ವಿತಥಾ ಭಿನಿವೇಶಶ್ಚ ತ್ರಿವಿಧಂ ಕರ್ಮ ಮಾನಸಂ ॥೧॥

ಪರಧನವು ನನಗೆ ಹೇಗೆ ಬಂದೀತೆಂಬ ಚಿಂತೆ; ಪರಪೀಡಾಕರಾಲೋಚನೆ; ಪರಲೋಕವೆಲ್ಲಿಹ? ದೇಹವೇ ಆತ್ಮ; ಎಂಬೀಮೂರು ಮಾನಸವಾದ ಅಶುಭಕರ್ಮಗಳು. ಇವಕ್ಕೆ ವಿರುದ್ಧವಾದುವು ಯದೃಚ್ಛಾಲಾಭಸಂತೋಷ, ಅನಿಷಿದ್ಧಪರಿಗ್ರಹ, ಆಸ್ತಿಕ್ಯಬುದ್ಧಿ, ಇವು ಮೂರು ಶುಭದಾಯಕಗಳಾದ ಮಾನಸಕರ್ಮಗಳು.

ಶ್ಲೋ॥ ಪಾರುಷ್ಯ ಮನೃತಂಚೈವ ಪೈಶುನ್ಯಂ ಚಾಪಿ ಸರ್ವಶಃ।
ಅಸಂಬದ್ಧಪ್ರಲಾಪಶ್ಚ ವಾಙ್ಮಯಂ ಸ್ಯಾಚ್ಚತುರ್ವಿಧಂ॥೨॥

ಇತರರಿಗೆ ಅಪ್ರಿಯವಾದ ನಿಷ್ಠುರವಚನ; ಹುಸಿಹೇಳುವುದು; ಹಿಂದೆ ದೂಷಿಸುವುದು (ಚಾಡಿಹೇಳುವದು); ಸತ್ಯವಾಗಿದ್ದರೂ ಸಂಗತಿಯಿಲ್ಲದೆ ನಿಷ್ಪ್ರಯೋಜನವಾಗಿ ಅರಸು ನಾಡು ಮಂದಿಗಳ ವರ್ಣನೆಮಾಡುವುದು; ಈ ನಾಲ್ಕು ವಾಚಿಕಗಳಾದ ಅಶುಭಕರ್ಮಗಳು. ಇವಕ್ಕೆ ವಿಪರೀತವಾದ ಪ್ರಿಯ; ಸತ್ಯ; ಪರಗುಣ ಕೀರ್ತನ; ವೇದಶಾಸ್ತ್ರಪ್ರವಚನ; ಈ ನಾಲ್ಕು ವಾಚಿಕ ಶುಭಕರ್ಮಗಳು.

ಶ್ಲೋ॥ ಅದತ್ತಾನಾ ಮುಪಾದಾನಂ ಹಿಂಸಾಚೈವಾ ವಿಧಾನತಃ।
ಪರದಾರೋ ಪಸೇವಾಚ ಶಾರೀರಂ ತ್ರಿವಿಧಂ ಸ್ಮೃತಂ ॥೩॥

ತನಗೆ ಕೊಡದೆ ಇರುವುದನ್ನು ಅನ್ಯಾಯದಿಂದ ತಾನೇ ತೆಗೆದುಕೊಳ್ಳುವುದು; ಶಾಸ್ತ್ರವಿಧಿಯಿಂ ವಿನಾ ತನ್ನ ಒಡಲನ್ನು ಬೆಳೆಸುವುದಕ್ಕಾಗಿಯೇ ಜೀವಹಿಂಸೆ

ಮಾಡುವುದು; ಪರದಾರಗಮನ; ಇವುಮೂರು ಕಾಯಿಕವಾದ ಅಶುಭಕರ್ಮಗಳು. ಇವಕ್ಕೆ ಬದಲಾಗಿ ದಾನಕ್ರಿಯಾದಿಗಳಿಂದ ಬಂದ ವಸ್ತುವನ್ನೇ ಪರಿಗ್ರಹಿಸುವುದು; ಯಾವಪ್ರಾಣಿಯನ್ನೂ ಹಿಂಸಿಸದಿರುವುದು; ಸ್ವಭಾರ್ಯೆಯನ್ನು ಬಿಡದೆ ಭರಿಸುವುದು; ಇವು ಮೂರು ಶಾರೀರ ಶುಭಕರ್ಮಗಳು.

ಹೀಗೆ ತ್ರಿವಿಧವಾದ ಮನೋವಾಗ್ದೇಹಜಗಳಾದ ಕರ್ಮಗಳನ್ನು ಹೇಳಿ ಗುಣಭೇದದಿಂದಲೂ ಸುಖದುಃಖಗಳಿಗೆ ಧರ್ಮಾಧರ್ಮಗಳು ಹೇತುಗಳೆಂದು ಮನುಸ್ಮೃತಿಯಲ್ಲಿ ನಿರೂಪಿಸಲ್ಪಟ್ಟಿದೆ. ಹೇಗೆಂದರೆ:—

ವೇದಾಭ್ಯಾಸ, ತಪಸ್ಸು, ಶೌಚ, (ಮೃತ್ತಿಕೆ ನೀರು ಗಳಿಂದ ದೇಹಶುದ್ಧಿ); ಇಂದ್ರಿಯಗಳನ್ನು ವಿಷಯಗಳದೆಶೆಯಿಂದ ತಡೆಯುವುದು, ದಾನಧರ್ಮಾದ್ಯನುಷ್ಠಾನ, ಅಧ್ಯಾತ್ಮಚಿಂತೆ, ಇವೆಲ್ಲವೂ ಸತ್ತ್ವಗುಣ ಕಾರ್ಯಗಳು.

ಫಲಾರ್ಥವಾಗಿ ಕರ್ಮಾನುಷ್ಠಾನ, ಅಧೈರ್ಯ, ನಿಷಿದ್ಧಕರ್ಮಾಚರಣ, ಯಾವಾಗಲೂ ಶಬ್ದಾದಿವಿಷಯಭೋಗ; ಇವು ರಾಜಸಗುಣಕಾರ್ಯಗಳು.

ಲೋಭ (ಅಧಿಕಧನಾಶೆ) ನಿದ್ರಾಳುತ್ವ, ಕಾರ್ಪಣ್ಯ, ಪಿಸುಣತನ, ನಾಸ್ತಿಕ್ಯ, ಆಚಾರಲೋಪ, ಯಾಚನಶೀಲತ್ವ, ಧರ್ಮಾದಿಗಳಲ್ಲಿ ಅವಧಾನವಿಲ್ಲದಿರುವುದು, ಇವು ತಾಮಸಗುಣಕಾರ್ಯಗಳು.

ಹೀಗೆ ಹೇಳಿದುದರಿಂದ ಧರ್ಮಾರ್ಥಕಾಮಗಳೆಂಬ ತ್ರಿವರ್ಗವು ಕ್ರಮವಾಗಿ ಸತ್ತ್ವರಜಸ್ತಮೋ ಗುಣಗಳಿಗೆ ಲಕ್ಷಣಗಳಾಗಿರುವುದರಿಂದ ರಾಜಸತಾಮಸಗಳಾದ ಅರ್ಥಕಾಮಗಳು ಅಧರ್ಮವನ್ನೂ ಅಜ್ಞಾನವನ್ನೂ ವೃದ್ಧಿಮಾಡಿ ದುಃಖಾವಹಗಳಾಗುವುವೆಂದು; ಸಾತ್ವಿಕವಾದ ಧರ್ಮವು ಜ್ಞಾನಪ್ರದವಾದುದರಿಂದ ಸುಖಹೇತುವೆಂದು ಸಿದ್ಧವು.

ಆದುದರಿಂದ ಇಹದಲ್ಲಿಯೂ ಪರದಲ್ಲಿಯೂ ಶ್ರೇಯಸ್ಸನ್ನು ಬಯಸುವವನು ಸತ್ತ್ವಶುದ್ಧಿಕರಗಳಾದ ಅಧ್ಯಯನ, ತಪಸ್ಸು, ಆತ್ಮಜ್ಞಾನ, ಇಂದ್ರಿಯನಿರೋಧ, ಅಹಿಂಸೆ, ಗುರುಸೇವೆ, ಈ ಆರು ಕರ್ಮಗಳಲ್ಲಿ ನಿರಂತರವೂ ನಿರತನಾಗಿರಬೇಕೆಂದು ಮನು ತಾತ್ಪರ್ಯವು.

ಶ್ಲೋ॥ "ವೇದಾಭ್ಯಾಸ ಸ್ತಪೋಜ್ಞಾನ ಮಿಂದ್ರಿಯಾಣಾಂ ಚ ಸಂಯಮಃ।
ಅಹಿಂಸಾ ಗುರುಸೇವಾ ಚ ನಿಃಶ್ರೇಯಸಕರಂ ಪರಂ॥" ಮನು.

ಹಾಗೆಯೇ ಆಯುರ್ವೇದದಲ್ಲಿಯು ಆತ್ರೇಯಮಹರ್ಷಿಯು ಪ್ರಷ್ಟಾರನಾದ ಅಗ್ನಿವೇಶನಂಕುರಿತು ಅಶುಭಕ್ಕೆ ಅಧರ್ಮವೇ ಮೂಲವೆಂದು ಹೇಳುತ್ತ

ಪೂರ್ವಯುಗಗಳಲ್ಲಿ ಕೂಡ ಅಧರ್ಮಕೊರತು ಅಶುಭವಾದ ದುಃಖಕ್ಕೆ ಉತ್ಪತ್ತಿ ಕಾರಣವು ಬೇರೆ ಇಲ್ಲ. "ಪುರುಷಾಃ ಸರ್ವಸಿದ್ಧಾರ್ಥಾಶ್ಚತುರ್ವರ್ಷ ಶತಾಯುಷಃ" ಎಂದು ಮೊದಲು (ಕೃತಯುಗದಲ್ಲಿ) ಸರ್ವರೂ ಸಿದ್ಧಪುರುಷರೆನಿಸಿದ್ದರು. ಅವರು ದುಃಖವನ್ನೇ ಅರಿಯರು. ತ್ರೇತೆಯಲ್ಲಿ ವಸ್ತುಗಳನ್ನು ಬಹುವಾಗೆ ಬಳಸುತ್ತ ಬರುವುದರಿಂದ ಲೋಭವು, ಲೋಭದಿಂದ ದ್ರೋಹವು, ದ್ರೋಹ ದಿಂದ ಅನೃತವು, ಅನೃತ ವಚನದಿಂದ ಕಾಮಕ್ರೋಧ ದ್ವೇಷಮಾನಾದಿಗಳು, ಭಯ ತಾಪ ಶೋಕ ಚಿತ್ತೋದ್ವೇಗಾದಿಗಳು ಪ್ರವೃತ್ತವಾದುವು. ಅದರಿಂದ ಧರ್ಮದ ಪಾದಾಂಶವು ಅಂತರ್ಧಾನವಾಯಿತು. ಅದರಿಂದ ಪೃಥಿವ್ಯಾದಿಗಳ ಲ್ಲಿಯು ಗುಣಪಾದಾಂಶವು ನಷ್ಟವಾಯಿತು.

ಅದರಿಂದ ಸಸ್ಯಾದಿಗಳಲ್ಲಿದ್ದ ಸ್ನೇಹ, ವೈಮಲ್ಯ, ರುಚಿ, ಶಕ್ತಿ, ರಸ, ವಿಪಾಕಪ್ರಭಾವ, ಅವುಗಳಲ್ಲೆಲ್ಲಾ ಪಾದಭಾಗವೇ ಹೋಯ್ತು. ಅದರಿಂದ ಆಗಿನ ಪ್ರಜಾಶರೀರಗಳು ಕೂಡ ಪಾದಾಂಶಕಡಮೆಯಾಗುತ್ತಿರುವ ಆಹಾರ ವಿಹಾರ ಮುಂತಾದವುಗಳಿಂದ ಮೊದಲಿನಂತಿರದೆ ಶೀತೋಷ್ಣಬಾಧೆಗೆ ಒಳ ಪಟ್ಟು ಮೊದಲು ಜ್ವರಾದಿ ವ್ಯಾಧಿಗಳಿಂದ ಆಕ್ರಮಿಸಲ್ಪಟ್ಟುವು. ಬಳಿಕ ಕ್ರಮವಾಗಿ ಆ ಪ್ರಜೆಗಳು ಆಯುಸ್ಸಿನಿಂದ ಹೀನರಾದರು.

ಶ್ಲೋ॥ ಯುಗೇಯುಗೇ ಧರ್ಮಪಾದಃ ಕ್ರಮೇಣಾನೇನ ಹೀಯತೆ।
ಗುಣಪಾದಶ್ಚ ಭೂತಾನಾ ಮೇವಂ ಲೋಕಃ ಪ್ರವರ್ತತೆ॥

ಪ್ರತಿಯುಗದಲ್ಲಿಯು ಈ ಕ್ರಮದಿಂದ ಧರ್ಮದ ಪಾದಾಂಶವು ಕಡಮೆಯಾಗುತ್ತ ಬರುವುದು. ಆದರಿಂದ ಪೃಥಿವ್ಯಾದಿ ಗುಣಗಳ ಪಾದಾಂಶವು ಕ್ಷೀಣಿಸುತ್ತ ಬರುವುದು. ಲೋಕಪ್ರವರ್ತನವು ಹೀಗೆಯೇ ಸರಿ.

ವಾಯೂದಕಾದಿಗಳಿಗೆ ಯಾವಗುಣಹಾನಿ ಸಂಭವಿಸುವುದೋ ಅದಕ್ಕೆ ಮೂಲವು ಅಧರ್ಮವೇ. ಅಧರ್ಮಕ್ಕೆ ಮೂಲವು ಅಸತ್ಕರ್ಮವು ಪೂರ್ವಕೃತ ವಾದುದು. ಅಧರ್ಮ, ಅಸತ್ಕರ್ಮ, ಅವೆರಡಕ್ಕೂ ಪ್ರಜ್ಞಾಪರಾಧವೇ ಹೇತುವು.

"ಯಾವಾಗ ದೇಶನಗರಗ್ರಾಮಾದಿಗಳಲ್ಲಿ ಪ್ರಧಾನಪುರುಷರು ಧರ್ಮ ವನ್ನು ಮೀರಿ ಅಧರ್ಮದಿಂದ ಪ್ರಜೆಗಳನ್ನು ಪ್ರವರ್ತನೆಗೊಳಿಸುವರೋ ಆಗ ಅವ ರನ್ನು ಆಶ್ರಯಿಸಿದ್ದ ಗ್ರಾಮೀಣರು, ವರ್ತಕರು, ನಾಗರಿಕರು, ನಾಡಿಗರು ಮೊದಲಾದವರು ಆ ಅಧರ್ಮವನ್ನೇ ಅಭಿವೃದ್ಧಿಮಾಡುವರು. ಬಳಿಕ ಆ ಅಧರ್ಮವು ಹೆಚ್ಚುತ್ತಿ ಬಂದು ಧರ್ಮವನ್ನು ಮರೆಮಾಡಿಬಿಡುತ್ತದೆ. ಹಾಗೆ ಧರ್ಮವನ್ನೂ ದೇವತೆಗಳನ್ನೂ ತ್ಯಜಿಸಿದ್ದ ಅಧರ್ಮ ಪ್ರಧಾನರಾದ ಆ ಜನಗ ಳನ್ನು ಋತುಗಳು ಬಾಧಿಸುತ್ತವೆ. ಅದರಿಂದ ಕಾಲಕಾಲಕ್ಕೆ ಮಳೆ ಬಾರದು.

ಬಂದರೂ ವಿಪರೀತವಾಗುವುದು. ಒಳ್ಳೆಯಗಾಳಿಯೂ ಬೀಸದು. ನೆಲಗಳೂ ಕೆಡುತ್ತವೆ. ನೀರೂ ಶೋಷಿಸುತ್ತದೆ. ಗಿಡ ಬಳ್ಳಿ ಮೂಲಿಕೆಗಳೂ ಮೊದಲಿದ್ದ ತಂತಮ್ಮ ನೈಜಗುಣವನ್ನು ಬಿಟ್ಟು ವಿಕಾರವನ್ನು ಹೊಂದುತ್ತವೆ. ಬಳಿಕ ಜನಪದಗಳು ಸ್ಪರ್ಶದೋಷದಿಂದಲೂ ಆಹಾರದೋಷದಿಂದಲೂ ನಾಶವಾಗುತ್ತವೆ.

ಹಾಗೆಯೇ ಅಭಿಶಾಪಕ್ಕೂ (ಮಿಥ್ಯಾಪವಾದ, ಬೈಗಳು) ಅಧರ್ಮವೇ ಕಾರಣವು. ಯಾರು ಧರ್ಮವನ್ನೆ ಮಾಡದವರೋ, ಧರ್ಮದಲ್ಲಿದ್ದು ದುಸ್ಸಂಗಾದಿಗಳಿಂದಲೋ, ನಾಸ್ತಿಕ್ಯದಿಂದಲೋ, ತದ್ಧರ್ಮತ್ಯಾಗಮಾಡಿದವರೋ ಅಂತಹವರು ಗುರು ವೃದ್ಧ ಸಿದ್ಧ ಮುನಿಪೂಜ್ಯರನ್ನು ಅವಮಾನಪಡಿಸಿ ಅಹಿತಗಳನ್ನಾಚರಿಸುತ್ತಾರೆ. ಬಳಿಕ ಅವರು ಆ ಗುರುವೃದ್ಧಾದಿಗಳಿಂದ ಶಪಿಸಲ್ಪಟ್ಟು ಸುಟ್ಟು ಬೂದಿಯಾಗುತ್ತಾರೆ.

ಇನ್ನು ಯುದ್ಧಾದಿಗಳಿಂದಾಗುವ ದೇಶನಾಶಕ್ಕೂ ಅಧರ್ಮವೇ ಕಾರಣವು. ಯಾರು ಅತಿಲೋಭ, ಬಹುಕ್ರೋಧ, ಅತಿಮಾನರಾಗದ್ವೇಷಾದಿಗಳುಳ್ಳವರೋ ಅಂತಹವರು ದುರ್ಬಲರಾದ ಸಾಧುಗಳನ್ನು ತಿರಸ್ಕರಿಸಿ ಸ್ವಜನ ಪರಜನವೆನ್ನದೆ ಶಸ್ತ್ರಾದ್ಯಾಯುಧಗಳಿಂದ ಒಬ್ಬರಿಗೊಬ್ಬರು ಹೊಡೆದಾಡುತ್ತಾರೆ. ತಾವು ಅನ್ಯರಿಂದಾದರು ಹೊಡೆಯಿಸಿಕೊಳ್ಳುವರು. ಅನ್ಯರನ್ನಾದರು ಹೊಡೆಯುವರು. ಇಲ್ಲವೆ ರಕ್ಷೋಗಣದಿಂದಾಗಲಿ, ವಿವಿಧಭೂತಸಂಘದಿಂದಾಗಲಿ, ಪೀಡಿಸಿಕೊಳ್ಳುತ್ತಾರೆ. ಹೀಗೆ ಅಧರ್ಮಾಚರಣ ಧರ್ಮತ್ಯಾಗ ದೇವತಾಪಚಾರಗಳಿಂದ, ಜನಗಳು ಕೆಡುತ್ತಾರೆ. ಆದುದರಿಂದ ಇಂತಹ ಎಲ್ಲಾ ದೋಷಗಳಿಗೂ ಪ್ರಜ್ಞಾಪರಾಧವೇಕಾರಣವು."

ಆದರಿಂದ ಪ್ರವೃತ್ತಿಧರ್ಮ ಪರರಾದವರು ಕಾಮ ಕ್ರೊಧ ಲೋಭಾದಿಗಳಿಂದ ಬುದ್ಧಿಹೀನರಾಗಿ ತ್ರಿವರ್ಗವನ್ನು (ಧರ್ಮ, ಅರ್ಥ, ಕಾಮ) ಅಮಾರ್ಗದಿಂದ ಸ್ವೇಚ್ಛೆಯಾಗೆ ಅನುಭವಿಸುತ್ತ, ಸರ್ವರೂ ಸ್ವಧರ್ಮವಂ ಬಿಟ್ಟು ಪಂಥರಾತ್ರಿ ಶಯಣ ಮಾಡುವುದರಿಂದಲೂ, ದುಸ್ಸಂಗ, ಪ್ರಮಾದ, ಅಲಸ್ಯ, ಅಜ್ಞಾನ, ನಾಸ್ತಿಕ್ಯಾದಿಗಳಿಂದಲೂ ಅಶುಭರೂಪ ಬಹು ದುಃಖಾಕರವಾದ ಪಾಪರೋಗ ಜರಾಮರಣಾದ್ಯುಪದ್ರವಗಳನ್ನು, ಅಲ್ಪಾಯುಸ್ಸನ್ನು, ಅನುಭವಿಸುತ್ತಿದ್ದಾರೆಂಬೀ ವಿಷಯವು ಸರ್ವಾನುಭವಸಿದ್ಧವಾದುದೆಂದು ಸರ್ವ ಶಾಸ್ತ್ರಪುರಾಣೇತಿಹಾಸ ಗ್ರಂಥಗಳಲ್ಲಿಯೂ ಉದಾಹರಿಸಲ್ಪಟ್ಟಿರುವುದರಿಂದ ನಾನು ವಿವೇಚಿಸತಕ್ಕುದೇನಿದೆ? ಆದರೂ ದ್ವಿಜಕುಮಾರರ ಪ್ರವರ್ತನವು ವಿಪರೀತವಾಗಿ ಈಗಲೇ ಕಲ್ಪಾಂತವನ್ನು ಸೂಚಿಸುತ್ತಿರುವುದರಿಂದ ಭೀತನಾಗಿ ಆರ್ಯರ ಸನ್ನಿಧಿಯಲ್ಲಿ ಸ್ವಲ್ಪವಾಗೆ ಸೂಚಿಸಲು ಪ್ರವರ್ತಿಸಿರುವೆನು.

ಇದುವರೆಗೆ ಭೂಸುರನೆನಿಸಿದ್ದ ಬ್ರಾಹ್ಮಣನು ಅಧರ್ಮಕ್ಕೇತುವಾದ ಅಂತಹ ಪ್ರಜ್ಞಾಪರಾಧಕ್ಕೆ ಒಳಗಾಗದೆ ಸದಾ ಜಾಗರೂಕನಾಗಿ "ವೇದಾಭ್ಯಾಸ, ತಪಸ್ಸು, ಬ್ರಹ್ಮಜ್ಞಾನ, ಬ್ರಹ್ಮಚರ್ಯ, ಗುರುಸೇವೆ, ಅಹಿಂಸೆ" ಈ ಷಟ್ಕರ್ಮಗಳಲ್ಲಿ ಯಾವಾಗಲೂ ನಿರತನಾಗಿ ಬುದ್ಧಿಶಕ್ತಿಯನ್ನು ವೃದ್ಧಿಪಡಿಸಿಕೊಳ್ಳುತ್ತ ಸ್ವವರ್ಣಾಶ್ರಮೋಚಿತ ಕರ್ಮದಿಂದ ನಿರಪಾಯಶುದ್ಧ ಸಾತ್ವಿಕಸುಖವಂ ಪಡೆದಿದ್ದನು. ಅದೀಗಳೆಷ್ಟೋ ಕಾಲದಿಂದ ಮರೆತು ಕೈತಪ್ಪಿ ಹೋಗಿದೆ. ಆ ಮಹೀಸುರನಾಮವನ್ನು ಮರಳಿಯೂ ಸಾಧಿಸಿಕೊಂಡು ಸ್ವಾಧೀನದಲ್ಲಿ ಇರಿಸಿಕೊಳ್ಳುವುದು ಬ್ರಾಹ್ಮಣನಧರ್ಮವು. ಕೇವಲೈಹಿಕ ವಿಷಯಾಸಕ್ತನಾದ ಪಾಮರನಂತೆ ಲಬ್ಧವರ್ಣನಾದ ಬ್ರಾಹ್ಮಣನಿರಬಹುದೇ? ಉನ್ಮತ್ತನಂತೆ ಸ್ವವರ್ಣಾಭಿಮಾನವೂ ಇಲ್ಲದೆ ಕರ್ಮವನ್ನೂ ಬಿಟ್ಟು ಹೀಗೆ ವಿರಕ್ತನಾಗಿ ಉಪೇಕ್ಷೆಯಿಂದಿರುವುದು ಉಚಿತವೇ? ವಿರಕ್ತಿಯಿಂದಲ್ಲ. ಅಸಾಮರ್ಥ್ಯ, ಅನುಪಪತ್ತಿ. ಸರಿ, ನೂರು, ಸಾವಿರ, ವೆಚ್ಚಿಸಿ ಉಪನಯನ ಮಹೋತ್ಸವವನ್ನು ವಿಜೃಂಭಿಸಲು ಉಪಪತ್ತಿಯುಂಟು. ಶೌಚಾಚಾರ ಸ್ನಾನ ಸಂಧ್ಯಾದಿ ನಿಯಮಗಳನ್ನು ಬಾಲಕನಿಗೆ ಕಲಿಸುವುದಕ್ಕೆ ಉಪಪತ್ತಿ ಇಲ್ಲದಿರುವುದೆ? ಅನುಪಪತ್ತಿ ಯೆಂದಲ್ಲ. ಇನ್ನೇನು? ಅಶ್ರದ್ಧೆ, ಅನ್ಯಥಾಜ್ಞಾನ, ಅದೂ ಅಲ್ಲ. ನಾವು ಉದ್ದೇಶಿಸಿದಂತೆ „ ಈ ಪಾಪಿ ಕಲಿಯು ಸತ್ಕರ್ಮವಾದುದರಿಂದ ಸಾಗಲೀಯುವುದಿಲ್ಲ" ಎನ್ನಬಹುದು. ಆದರೆ ‹ ಅನಿಷ್ಟಕ್ಕೆ ಅಂಗಾರಕ ಗುರಿ' ಯೆಂಬಂತೆ ತಾನು ತಪ್ಪಿಸಿಕೊಳ್ಳುವುದಕ್ಕಾಗಿ ಕೇಳುವ ಯುಕ್ತಿ ಯಿದೋದು ಎಂದು ತೋರುತ್ತದೆ. ಅಥವಾ ಅದೂ ಅಲ್ಲ.

„ ಪ್ರಯೋಜನ ಮನುದ್ದಿಶ್ಯ ನ ಮನ್ದೋಪಿ ಪ್ರವರ್ತತೇ"

ಎಂದು ಮೊದಲು ಯಾರು ಯಾವಕೆಲಸಮಾಡತೊಡಗಿದರೂ ಫಲವನ್ನು ಮನದಲ್ಲಿ ಉದ್ದೇಶಿಸಿಕೊಳ್ಳದೆ ಪ್ರಾರಂಭಿಸರೆಂಬುದಿದೆಲ್ಲರಿಗೂ ತಿಳಿದ ವಿಷಯವೇ ಸರಿ. ಆದರೆ ಆರಂಭವೇನೋ ಸರ್ವವಿಷಯದಲ್ಲಿಯೂ ಸದುದ್ದೇಶದಿಂದೆಯೇ ನಡೆಯುತ್ತಿರುವುದು. ಪರ್ಯವಸಾನಮಾತ್ರ ನೋಡಿದರೆ ಪ್ರಾಯಿಕವಾಗಿ ವಿಪರೀತವಾಗಿಯೆ ತೋರಬರುತ್ತಿದೆ. ಇದೊಂದು ಸರ್ವಾನುಭವಸಿದ್ಧ ವಿಷಯವು. ಅದೇಕೆಂದರೆ:- ಆರಂಭಕಾಲದಲ್ಲಿದ್ದ ಉತ್ಕಟವಾದ ಉತ್ಸಾಹಯತ್ನಾದಿಗಳು ನಡುವೆ ನಡುವೆ ಅನೇಕ ವಿಘ್ನಗಳಿಂದ ತಡೆಯಲ್ಪಡುತ್ತವೆ. ಕಾಲಾನುಗುಣವಾಗಿ ತತ್ತದಾನುಕೂಲ್ಯಗಳು ತಪ್ಪಿಹೋಗುತ್ತವೆ. ಮತ್ತೆ ಕೆಲವುಕಡೆ ಅನೇಕ ನೀಚೋಚ್ಚ ವಿಷಯಾಂತರ ವ್ಯಾಪೃತಿಯಿಂದ ಮೊದಲಿನ ಉದ್ದೇಶವು ಬದಲಾಯಿಸುವುದುಂಟು. ಇನ್ನೂ ಕೆಲವೆಡೆಯಲ್ಲಿ ಮದವಣಿಗನನ್ನೇ ಮರೆ

ಹುಟಿಟ್ಟು ಮದುವೆಯು ಮೆರವಣಿಗೆ ಹೊರಡುವಂತೆ ಉದ್ದಿಷ್ಟಫಲಾಂಶ ವನ್ನು ಪೂರ್ತಿಯಾಗಿ ಮರೆತು ಹೋಗಿರುವುದುಕೂಡ ಕಾಣಬಂದಿವೆ. ಇನ್ನು ಜ್ಞಾನಾರ್ಥವಾದ ವಿದ್ಯಾವಿಚಾರವೆಂತೂ ವಿಪರೀತವಾಗಿಯೇ ಪರಿಣಮಿಸುವಂತೆ ತೋರುತ್ತಿದೆ. ಎಂತೆಂದರೆ:—ಮನುಸ್ಮೃತಿಯಲ್ಲಿ—

ಶ್ಲೋ॥ ವೇದಃ ಕೃತ್ಸ್ನೋಽಧಿಗನ್ತವ್ಯಃ ಸರಹಸ್ಯೋ ದ್ವಿಜನ್ಮನಾ।
ವೇದಮೇವ ಸದಾಭ್ಯಸ್ಯೇತ್ತಪಸ್ತಪ್ಸ್ಯನ್ ದ್ವಿಜೋತ್ತಮಃ॥
ವೇದಭ್ಯಾಸೋ ಹಿ ವಿಪ್ರಸ್ಯ ತಪಃ ಪರ ಮಿಹೋಚ್ಯತೇ॥
ಯೋಽನಧೀತ್ಯ ದ್ವಿಜೋವೇದ ಮನ್ಯತ್ರ ಕುರುತೇ ಶ್ರಮಂ।
ಸಜೀವನ್ನೇವ ಶೂದ್ರತ್ವ ಮಾಶು ಗಚ್ಛತಿ ಸಾನ್ವಯಃ॥

(ಉಪನಿಷತ್ಸಹಿತವಾದ ವೇದವೆಲ್ಲವೂ ವಿಪ್ರನಿಂದ ಹೊಂದಲ್ಪಡತಕ್ಕುದು; ಬ್ರಾಹ್ಮಣಶ್ರೇಷ್ಠನು ತಪಸ್ಸುಮಾಡುತ್ತ ಯಾವಾಗಲು ವೇದವನ್ನೇ ಕಲಿಯಬೇಕು. ವೇದಾಭ್ಯಾಸವೇ ಬ್ರಾಹ್ಮಣಗೆ ತಪಸ್ಸು. ಯಾವ ಬ್ರಾಹ್ಮಣನು ವೇದವನ್ನು ಬಿಟ್ಟು ಬೇರೇವಿಷಯದಲ್ಲಿ ಶ್ರಮಿಸುವನೋ ಅವನು ಬದುಕಿರುವಾಗಲೇ ಬೇಗನೆ ತನ್ನ ಕುಲದೊಡನೆ ಶೂದ್ರತ್ವವನ್ನು ಪಡೆಯುವನು.) ಹೀಗೆ ಜ್ಞಾನಾರ್ಥ ಪ್ರವೃತ್ತವಾದ ವೇದದಲ್ಲಿ ಏಕದೇಶವನ್ನಾದರೂ ಕಲಿಯದೆ, ತದಂಗ ಗಳಾದ ಶಿಕ್ಷಾವ್ಯಾಕರಣಾದಿಗಳನ್ನಾದರೂ ತದುಪಸ್ಕಾರಕಗಳನ್ನಾಗಿ ಮಾಡಿಕೊಳ್ಳದೆ, ಆ ಸಾಂಗವೇದಭಾಗಕ್ಕೇ ಜಲಾಂಜಲಿ ಕೊಟ್ಟು ದೌರ್ಬ್ರಾಹ್ಮಣ್ಯವನ್ನು ಸಂಪಾದಿಸಿಕೊಂಡು ಯೆಷ್ಟೊ ತಲೆಗಳು ಕಳೆದು ಅನೇಕ ಶತಾಬ್ದಗಳೋ ಸಹಸ್ರಾಬ್ದಗಳೋ ಸಂದು ಹೋದುವು ಸರಿಯಷ್ಟೆ. "ಗತಂ ನ ಶೋಚಯೇ ತ್ಪ್ರಾಜ್ಞಃ" ಅದನ್ನು ಈಗ ಚಿಂತಿಸಿ ಫಲವೇನು? ಅದರ ಮಾತಂತಿರಲಿ.

ಪ್ರಕೃತದಲ್ಲಿ ಕಲಿಯುತ್ತಿರುವ ನಮ್ಮ ವಿದ್ಯೆಗಳಲ್ಲಿ ಶಾಸ್ತ್ರಪ್ರವಚನಾದಿಗಳು ಕೂಡ ಖಂಡಾಂತರದವರ ಲೌಕಿಕ ವಿದ್ಯೆಗಳಂತೆಯಾದರೂ ಫಲಪರ್ಯವಸಾಯಿಯಾಗದೆ ಇರುವುದು ಶೋಚನೀಯವಾಗಿದೆ. ವ್ಯಾಕರಣದಲ್ಲಿ "ರಕ್ಷೋಹಾಗಮಲಘ್ವಸಂದೇಹಾಃ ಪ್ರಯೋಜನಂ" ಎಂದು ಫಲ ಹೇಳಿದ್ದಾರೆ. ಈಗ ಸ್ವರ, ವೈದಿಕ ಪ್ರಕರಣವನ್ನೇ ಓದದೆ ಬಿಡುವುದರಿಂದ ಆ ಫಲವನ್ನುಪಯೋಗಿಸಕೊಳ್ಳದಿದ್ದರೂ ವಾದಾರ್ಥವಾಗಿ ವ್ಯಾಸಂಗ ಮಾಡುತ್ತಿರುವ ವೇದಾಂತಕ್ಕಾದರೂ ಉಪಯೋಗಿಸಬಹುದಾಗಿದೆ. ಅದೂ ಇಲ್ಲದೆ ಕಲಿತಿರುವುದು ವ್ಯಾಕರಣ, ನಾನು ಬಾಯಿಂದ ಹೇಳುವುದು ಅಪಶಬ್ದ. ಇದು ನನ್ನ ಅನುಭವವು. ಹೀಗೆಯೇ ತರ್ಕಶಾಸ್ತ್ರವಂ ಕಲಿತಿರುವುದು,

ಕಾರ್ಯಕಾರಣಭಾವ ಆಧಾರಾಧೇಯಭಾವಾದಿಗಳಲ್ಲಿ ನ್ಯಾಯ್ಯಾಂಶವೇ ಬಿಟ್ಟು ಹೋಗುವುದು; ಗಣಿತಶಾಸ್ತ್ರ ಕಲಿತಿರುವುದು, ಹಣ್ಣು ಕಾಯಿ ಕೊಂಡುಕೊಳ್ಳುವಾಗಲೂ ಅಂಗಡಿಯವನಿಗೆ ಮೋಸ ಹೋಗುವುದು; ವೈದ್ಯನಾಗಿರುವುದು, ನಿತ್ಯರೋಗವಂ ಅನುಭವಿಸುವುದು; ದೈವಜ್ಞನಾಗಿ ಜೀವಿಸುತ್ತ ಎಲ್ಲರಿಗೂ ಜಾತಕಪ್ರಶ್ನೆಗಳಿಂದ ಫಲಸಿದ್ಧಿ ಯೆನ್ನುತ್ತಾ ತನ್ನ ಕುಟುಂಬದ ಆಯುರಾರೋಗ್ಯ ಲಾಭನಷ್ಟಗಳೇ ತನಗೆ ಗೊತ್ತಿಲ್ಲದೆ ನಡೆಯುವುದು; ಪುರಾಣ ಹೇಳುವುದು ಪಲಾಂಡು ಭಕ್ಷಣವಂ ತಾನು ಬಿಡದಿರುವುದು; ಯೋಗಮಂತ್ರಶಾಸ್ತ್ರಜ್ಞರು ಅನುಷ್ಠಾತೃಗಳು ಎಂದು ವ್ಯವಹಾರವಿರುವುದು, ಅಯಿದನೆಯ ಮದುವೆಗೆ ಕನ್ಯಾವಿಚಾರ ಮಾಡುತ್ತಿರುವುದು; ತತ್ತ್ವಶಾಸ್ತ್ರಪಾರಂಗತರಾಗಿರುವುದು, ಸೀಸದಪಾತ್ರೆಗೆ ನೀರು ಹುಯ್ಯದೆ ಬೆಂಕಿಯಲ್ಲಿರಿಸಿ ನೀರಿಗೆ ಹೋಗಿಬಂದು ನೋಡಿ ಪಾತ್ರೆಯೆಲ್ಲಿ? ಎಂದು ವಿಚಾರಿಸುವುದು; "ವಿಪದಿಧೈರ್ಯಂ" ಇತ್ಯಾದಿ ವೇದಾಂತವನ್ನು ಲೋಕನೀತಿಗಳನ್ನೂ ಬೋಧಿಸುವುದು, ತಾನು ಮಡಕೆಯೊಡೆಯಿತಲ್ಲಾ ಕಂಬಳಿಯಂ ಕಳೆದುಕೊಂಡೆನಲ್ಲಾ ಇನ್ನೇನುಗತಿಯೆಂದು ಚಿಂತಿಸುತ್ತ ಕುಳಿತುಕೊಳ್ಳುವುದು; ಧರ್ಮಶಾಸ್ತ್ರಗಳೆಲ್ಲಾ ವಾಚೋವಿಧೇಯಗಳು, ಸ್ನಾನಸಂಧ್ಯಾದಿ ಸದಾಚಾರವೆಂತೂ ತಪ್ಪುವುದೇ ಇಲ್ಲ. ಆಸ್ಪತ್ರೆಯ ಓಗರು, ಹುಳಿ, ಕಹಿ, ನೀರುಗಳನ್ನು ಕುಡಿಯುವುದು ಕೂಡ ತಪ್ಪುವುದೇ ಇಲ್ಲ. ಹೀಗೆ ಈಗಿನ ವಿದ್ಯಾವಿಷಯವು ವಿಪರೀತವೆಂದು ಎಲ್ಲರಿಗೂ ವಿದಿತವೇ ಇದೆ.

ಅರ್ಥವಿಷಯಕಾನುಷ್ಠಾನದಲ್ಲಿ "ಆಪದರ್ಥೇ ಧನಂ ರಕ್ಷೇತ್" ಎಂದು ಆಪತ್ಪರಿಹಾರಕ್ಕೆ ಧನವೇ ಸಾಧನವೆಂದುದ್ದೇಶಿಸಿ, ತನಗೆ ಸಾಕ್ಷಾದಾಪತ್ತಿಗೆ ಹೇತುವನ್ನಾಗಿ ಮಾಡಿಕೊಂಡಿದ್ದಾರೆ. ಕೆಲವರು ಮಾಡಿಕೊಳ್ಳುತ್ತಲೂ ಇರುವರು. ಗೃಹವು ಭೋಗ್ಯವಸ್ತುಗಳಿಂದ ಕೂಡಿ ಪುತ್ರಪೌತ್ರಾದಿ ಪಾರಂಪರ್ಯವಾಸಕ್ಕೆಂದುದ್ದೇಶಿಸಿ "ಗೃಹಾಂತಾ ದ್ರವ್ಯಸಂಘಾತಾಃ" ಎಂದು ಗೃಹಾರಂಭಕ್ಕೋಸ್ಕರ ಮೊದಲು ತನ್ನಲ್ಲಿದ್ದ ಧನವನ್ನು ಉಪಯೋಗಿಸಿದುದಲ್ಲದೆ ಸಾಲವನ್ನೂ ಮಾಡಿ ವಿನಿಯೋಗಿಸಿ ಕಡೆಗೆ ಜೀವನಕ್ಕೆ ಇಲ್ಲದೆ ಆ ಮನೆಯನ್ನೇ ಅರಕ್ಕೆ ಮೂರಾಗಿ ವಿಕ್ರಯಿಸುತ್ತಿರುವುದು ಅನುಭವದಲ್ಲಿಯೇ ಇದೆ.

ಕಾಮವು ಇಂದ್ರಿಯಪ್ರೀಣನಾರ್ಥವೆಂದು ಆರಬ್ಧವಾಗಿ ಆ ಯಿಂದ್ರಿಯ ನಾಶಮಾತ್ರವಲ್ಲದೆ ತದಧಿಷ್ಠಾನ ದೇಹನಾಶಕ್ಕೇ ಕಾರಣವಾಗಿದೆ. ಉದಾ: ಆಹಾರವು ಆಯುರಾರೋಗ್ಯಾರ್ಥವೆಂದು ಹೇಳುತ್ತ ಹೇರಳವಾಗಿ ರೋಗಗಳ ಬೆಳೆಯನ್ನೇ ದೇಹದಲ್ಲಿ ಸ್ಥಾಪಿಸುವುದು. ವಿಹಾರವು ಹಾಗೆಯೇ ಮಾನಸೋಲ್ಲಾಸ, ಆರೋಗ್ಯ, ದೇಹಲಾಘವ, ಬಲ, ಆಯುಸ್ಸು, ಇವುಗಳ

ಅಭಿವೃದ್ಧ್ಯರ್ಥವೆಂದಾರಂಭಮಾಡಿ ನಿತ್ಯವೂ ಅನುಷ್ಠಿಸುತ್ತಾ ಬರುವಾಗ "ಸಮರ್ಥ, ಚತುರ," ಎಂದೆನಿಸಿಕೊಳ್ಳುವ ಕೀರ್ತಿಗೆ ಒಳಪಟ್ಟು, ಕಡೆಗೆ ಉದ್ದಿಷ್ಟಕ್ಕೆ ವಿಪರೀತವಾಗಿ ವಾತಮೂತ್ರಪುರೀಷಾದಿ ವೇಗಧಾರಣಾದಿಗಳಿಂದಲೂ, ಧಾವನೋತ್ಪತನಾಭಿಪತನ ಛೇದನ ಭೇದನಾದಿ ಸ್ಸಾಹಸಗಳಿಂದಲೂ, ಕ್ಷಯಿಸಿ; ದೀರ್ಘರೋಗಾನುಭವದಿಂದ ದೀರ್ಘನಿದ್ರಿತನಾಗುತ್ತಿರುವುದು ಸಮಕ್ಷ ಕಾಣಬರುತ್ತಿದೆಯಲ್ಲವೆ?

ಧರ್ಮವಾದರೋ ಚತುಷ್ಪಾದ್ವೃಷವೆನಿಸಿದ್ದುದು ಈಗ ಏಕಪಾದ್ವೃಷಭವೆನಿಸಿ ಬಡವಾಗಿ ಗಮನಶಕ್ತಿಯೇ ತಪ್ಪಿಹೋಗಿ ಕಾಡಿಗೆ ಹೋಗುವುದಕ್ಕೂ ಕೈಯಲ್ಲಾಗದೆ ಪರಮೇಶ್ವರನೇ ಗತಿಯೆಂದು ಶಿವನೆದುರಿಗೆ ಬರುವಾಗ ಆವೊಂದು ಕಾಲೂ ಮುರಿದು ಬಿದ್ದು ಸದಾ ನಿದ್ದೆ ಹೋಗುತ್ತಿದೆ. ಇದೇನು ಅತಿಶಯೋಕ್ತಿ ಅಲ್ಲ ನೋಡೋಣವಾಗಲಿ :—

"ಜನ್ಮನಾ ಜಾಯತೇ ಶೂದ್ರಃ ಕರ್ಮಣಾ ಜಾಯತೇದ್ವಿಜಃ" ಎಂದು ಮಗನನ್ನು ದ್ವಿಜನಂ ಮಾಡಬೇಕೆಂದು ಯತ್ನಿಸಿ ನೂರಾರು ರೂಪಾಯಿ ಸಾಲಮಾಡಿ ವಾದ್ಯ, ಮೆರವಣಿಗೆ, ಬಾಣ, ಬತ್ತಿ, ಬಿರುಸು, ಬೇಕಾದ ತಿಂಡಿ ತೀರ್ಥಾದಿಗಳಿಂದ ಸಮೃದ್ಧಿಯಾಗಿ ಸರ್ವರಿಗೂ ಉತ್ಸವವಂ ಮಾಡಿಸುವ ಪದ್ಧತಿ ಯೇರ್ಪಟ್ಟದೆ. ಉಂಡವರ್ಗೆ ತಿಂಡಿಯೇ ಲಾಭ, ಪುರೋಹಿತರ್ಗೆ ಪಣ ಲಾಭ, ಪಿತೃವಿಗೆ ಋಣಲಾಭ, ಅಗ್ನಿಯೆಂಬುದು ಫೈರ್ಬ್ಯಾಕ್ಸಿನಲ್ಲಿಯೇ ನಿರಂತರ ಧಾರ್ಯವಾಗಿದೆ. ಆಸನ ಕುರ್ಚಿಯಮೇಲೆ, ಪ್ರಾಣಾಯಾಮ ನೀರಲ್ಲಿ ಮುಳುಗುವಾಗಲೇ, ಹೀಗೆ ವಟುವಿಗೆ ಉಪನಯನ, ಉಪನಯನ ಎಂದು ಬಾಯಿಂದ ಹೇಳುತ್ತಾ ಮನೆಯಿಂದ ಅಪನಯನ ಮಾಡಿಸಿ ಏ, ಬೀ, ಸಿ, ಡಿ, ಯೆಂಬ ವೇದಾಧ್ಯಯನಕ್ಕಾಗಿ ಹಾಸ್ಟಲ್ ಹೋಟಲ್ ಎಂಬ ಗುರುಕುಲ ವಾಸ ಮಾಡಿಸುವುದೇ ಮಹಾಧರ್ಮವಾಗಿದೆ. ಅಲ್ಲಿ ವಟುವಿಗೆ ಕಾಫಿ, ಟೀ, ತ್ರಿವಾರ ಭೋಜನ, ಯೌವನ ಭಾಷಣಾದಿಗಳೇ ಬ್ರಹ್ಮಚರ್ಯ. ಧೂಮಾಗ್ನಿ ಕಾರ್ಯವೆ ಅಗ್ನಿಕಾರ್ಯ, ನಶ್ಯಭಿಕ್ಷವೇ ಭಿಕ್ಷ, ದ್ರಾಕ್ಷಾರಸ ಸೇವೆಯೆ ಗುರು ಸೇವೆ, ಇತ್ಯಾದಿಗಳು ಪ್ರಥಮಾಶ್ರಮ ಧರ್ಮವಾದುವು. ಗಾರ್ಹಸ್ಥ್ಯವೆಂತೂ ಗೊತ್ತೇ ಯಿದೆ. "ಧರ್ಮಪ್ರಜಾ ಸಂ ಪತ್ತ್ಯರ್ಥಂ ಸ್ತ್ರಿಯಮುದ್ವಹೇ" ಎಂದು ಸಂಕಲ್ಪವನ್ನು ಬಾಯಿಂದ ಹೇಳಿಸುತ್ತಾ "ಆವಾಭ್ಯಾಂ ಕರ್ಮಾಣಿ ಕರ್ತವ್ಯಾನಿ; ಧರ್ಮೇಚ, ಅರ್ಥೇಚ, ಕಾಮೇಚ, ನಾತಿಚರಾಮಿ" ಇತ್ಯಾದಿ ಪ್ರತಿಜ್ಞೆಗಳನ್ನು ಮಾಡಿಸುತ್ತಾ ಅದರರ್ಥವನ್ನು ವಧೂವರರಿಗೆ ತಿಳಿಸದೆ ಪುರೋಹಿತರು ಮೋಸಮಾಡುವುದರಿಂದ ತದರ್ಥಕ್ಕೆ ವಿಪರೀತವಾದ ರೋಗ

ಪಾಪಾದ್ಯಧರ್ಮಕ್ಕೂ ಅಲ್ಪಾಯುಸ್ಸಂತಾನಕ್ಕೂ ಸ್ತ್ರೀಪುರುಷರಿಬ್ಬರೂ ಗುರಿಯಾಗಿ ಸುಖಕ್ಕೆ ಬದಲಾಗಿ ದುಃಖಭಾಗಿಗಳಾಗುತ್ತಿದ್ದಾರೆ.

ಇತ್ಯಾದಿ ವಿಚಾರದಿಂದ ಆರಂಭೋದ್ದೇಶಕ್ಕೆ ವಿರುದ್ಧವಾದ ಫಲವು ನಮಗೆ ಪ್ರಾಪ್ತವಾಗುತ್ತಿದೆ ಯೆಂದು ಗೊತ್ತಾಯಿತಷ್ಟೆ. ಆದುದರಿಂದ ಉದ್ದೇಶಿಸಿದಂತೆ ತತ್ತತ್ಫಲಗಳನ್ನು ಸರಿಯಾಗಿ ಪಡೆಯಬೇಕಾದರೆ ಉತ್ತಮ ಗುರೂಪದೇಶದಿಂದ ಶಿಕ್ಷಿತನಾಗಿ ಮದವ್ಯಸನಾದಿಗಳಿಗೆ ಅವಕಾಶ ಕೊಡದೆ ಅಪ್ರಮತ್ತನೆನಿಸಿ ಸದಾ ಫಲಪರ್ಯವಸಾನದಲ್ಲಿ ದೃಷ್ಟಿಯಿಟ್ಟು, ಯಥೋಚಿತ ಪ್ರವೃತ್ತಿಯುಕ್ತನಾಗಿ, ತಾನು ಪ್ರಾರಂಭಿಸಿದ ಕಾರ್ಯವನ್ನು ಅನುಷ್ಠಾನ ಪರ್ಯವಸಾಯಿಯನ್ನಾಗಿ ಮಾಡಿಕೊಂಡು ತತ್ತದುಕ್ತ ಫಲವನ್ನು ಹೊಂದುವುದೇ ವಿವೇಕಿಯ ಲಕ್ಷಣವು. ಈ ಪ್ರಕಾರ ಉದ್ದಿಷ್ಟ ಫಲವನ್ನೇ ಹೊಂದಲೆಳಸುವನು ತತ್ತತ್ಕರ್ಮಗಳಿಗೆ ಕ್ಲೃಪ್ತವಾದ ಕಾಲವನ್ನು ವ್ಯರ್ಥ ಮಾಡದೆ ಬಹುಜಾಗರೂಕನಾಗಿದ್ದು ತತ್ತತ್ಕ್ರಿಯಾರಹಸ್ಯವಂ ತಿಳಿದು, ಅವುಗಳಲ್ಲಿ ಸರ್ವದಾ ಪ್ರಯತ್ನಶೀಲನಾಗಿದ್ದ ಹೊರತು ಆ ಫಲಗಳು ಲಭಿಸವು ಎಂಬುದು ಸಿದ್ಧಾಂತವು.

ಈಗಿನ ಬಾಲಕರಿಗೆ ನಾನಾ ಜನಪದ ಜನಗಳ ಸಹವಾಸದಿಂದಲೂ, ನಾನಾ ಧರ್ಮಾಚಾರ ಸಾಂಕರ್ಯದಿಂದಲೂ, ಸ್ವಧರ್ಮವಿದು, ಪರಧರ್ಮವಿದು, ಇದು ಉತ್ತಾರಕವು, ಇದು ಮಾರಕವು, ಇದು ಕರ್ತವ್ಯವು, ಇದಕರ್ತವ್ಯವು, ಎಂಬ ವಿವೇಕ ವುದಯಿಸುವುದು ಅತಿದುಸ್ತರವಾಗಿದೆ. ನಮ್ಮ ದೇಶದ ಜನಕ್ಕೆ ಸುಖಸಾಧಕವಾಗಿದ್ದ ವಿಷಯಗಳೆಲ್ಲವೂ ಮಲಿನವಾದುವು. ಅವಕ್ಕೆ ಬದಲಾಗಿ ಹೊಸತಾದ ವಿಚಿತ್ರವಿಷಯಗಳು ಪ್ರಾಪ್ತವಾಗಿವೆ. ಉದಾ:—ನಳಿಕಾಜಲ, ಅಗ್ನಿಕಾಷ್ಠ, ಫೋನೋ ಭಾಷೆ, ಫೋಟೋ ರೂಪ, ಸೋಡಾ, ಲೆಮನೇಡ್, ಸುರಟು, ಸೀಕ್ರೆಟ್, ಕಾಫಿ, ಟೀ, ಕೋಕೋ, ಶಿಖಾಛೇದ, ಮುಖಕ್ಷೌರ, ದ್ರಾಕ್ಷಾರಸಪಾನ, ಸಾರಮೇಯಸ್ನೇಹ, ಲಾಲಾಸ್ಪರ್ಶ, ಅನ್ಯ ಪಿತ್ರಾದ್ಯಾಜ್ಞೋಲ್ಲಂಘನ, ನಾಸ್ತಿಕ್ಯ, ಹೋಟಲ್, ಅಸ್ಪಿಟಲ್, ರೈಲು, ಮಿಲ್ಲಿನ್ಸ್ ಫುಡ್ ಮುಂತಾದ ಬಗೆಬಗೆ ಆಹಾರಗಳು ಮಾಂಸರಸಾದ್ಯೌಷಧಾನುಪಾನಾದಿಗಳು, ಫ್ಯಾನ್ಸಿಗುಡ್ಸು, ಕೆರುಸಿರ್ಯ ಆಯಿಲ್, ಕ್ಯಾಂಡಲ್, ಧೂಮಪತ್ರ, ವಿಚಿತ್ರ ಶಾಕಪಾಕಗಳು, ಅಲ್ಲೂಮಿನಿಯಂ. ಟಿನ್, ಜರ್ಮನ್‌ಸಿಲ್ವರ್, ಇತ್ಯಾದಿಪಾತ್ರ, ಇನ್ನೂ ವಿಚಿತ್ರಪದಾರ್ಥ, ಉಡಿಗೆ ತೊಡಿಗೆಗಳು, ಅನ್ನಪಾನ ವಿಧಿಕ್ರಮಗಳು, ಹಬ್ಬ, ಶ್ರಾದ್ಧಮುಂತಾದ ವಿಶೇಷಗಳೆಲ್ಲವೂ ಪೂರ್ವದಲ್ಲಿದ್ದ ಪದ್ಧತಿಗೆ ಆದೇಶವಾಗಿರುವುದರಿಂದ ಇನ್ನು ಮುಂದಿನವರಿಗೆ

ಈಗಿನ ಈ ಯಾಚಾರವ್ಯವಹಾಗಳೇ ಸತ್ಸಂಪ್ರದಾಯಕ್ಕೆ ಮೇಲುಬಂತಿಯಾಗಿ ಸೇರುತ್ತಾ ಬರುವುದು ಸಹಜವೇ ಸರಿ.

ಹಾಗೆಯೆ ಆರ್ಯಧರ್ಮಗಳೆಲ್ಲವೂ ಮಾಲಿನ್ಯವನ್ನು ಹೊಂದಿ, ತತ್ಸ್ಥಾನದಲ್ಲಿ ತತ್ಸದೃಶವಾದ ಪಾಶ್ಚಾತ್ಯ ಧರ್ಮಗಳು ಬಂದು ಸೇರುತ್ತ ಬರುವುದರಿಂದ ಪ್ರಾಚೀನಾಚಾರಗಳೆಲ್ಲವೂ ನಾಮಮಾತ್ರಾ ವಶಿಷ್ಟಗಳಾಗಿ ಅಪಹಸನೀಯಗಳಾಗಿವೆ. ಆದರೆ ಈ ನಾಮದಿಂದಲ್ಲವೆ ಇತರರು ನಮ್ಮನ್ನು ಅಪಹಾಸಮಾಡುವುದು? ಆದರಿಂದ ಆನಾಮವೂ ಹೋದರೆ ಅಪಹಾಸ್ಯ ವಿಷಯವೇ ಇಲ್ಲದೆ ಚೆನ್ನಾಗಿದ್ದೀತೆಂದು ತೋರುತ್ತದೆ. ಆದಕ್ಕಿನ್ನೂ ಸ್ವಲ್ಪಕಾಲ ಬೇಕಾದೀತು. ಆದರಿಂದ ಆ ವುಳಿದಿರುವ ನಾಮವನ್ನು ಇನ್ನೂ ಕೆಲವುಕಾಲ ಉಳಿಸಿಕೊಂಡಿರಬೇಕೆಂಬ ಇಚ್ಛೆಯಿದ್ದರೆ ಆ ನಾಮಕ್ಕೆ ರೂಪ ಕ್ರಿಯೆಗಳನ್ನು ಯಥೋಚಿತವಾಗಿ ಉಂಟುಮಾಡಿ ಈಗಿನ ಕಾಲಕ್ಕೆ "ಈ ನಾಮ ರೂಪ ಕ್ರಿಯೆಗಳಿಂದ ಇರುವುದು ಈ ಧರ್ಮವೆಂದು" ಒಂದಾಕಾರವನ್ನೇರ್ಪಡಿಸಿ ಕಾಲು ಮುರಿದುಕೊಂಡು ಬಿದ್ದಿರುವ ಧರ್ಮವನ್ನು ಎಬ್ಬಿಸಿ ಕಟ್ಟುಗಳಂ ಕಟ್ಟಿ ನಿಲ್ಲಿಸಿ ಇನ್ನೂ ಕೆಲವು ಕಾಲ ಜೀವಿಸಿ ಇರುವಂತೆ ಮಾಡುವುದು ಧರ್ಮಜ್ಞ ಸಮಯುವನ್ನೂ ವೇದವನ್ನೂ ಬಲ್ಲ ದಯಾಳುಗಳ ಧರ್ಮವು. ಅಷ್ಟೇಹೊರತು ಆ ಬಿದ್ದಿರುವ ಧರ್ಮವೃಷವು ಸದ್ಯಕ್ಕೆ ತಾನಾಗಿಯೇ ಎದ್ದು ನಿಂತುಕೊಳ್ಳಲಾರದೆಂಬುದು ನಿಶ್ಚಿತವಿಷಯವು.

ಅಯ್ಯಾ ಬಾಯಾರಿದನಲ್ಲವೆ ನೀರುಕುಡಿಯಬೇಕು? ಧರ್ಮರಹಸ್ಯ ಆದರ ಸುಖ ಬೇಕಾದವನು ಅವಶ್ಯಂ ವಿಚಾರಿಸಿ ಹುಡುಕಿಕೊಂಡು ಬಂದು ತಿಳಿದು ಕೊಳ್ಳುತ್ತಾನೆ. ಈಗ ನಾವೇತಕ್ಕಷ್ಟು ಶ್ರಮ ತೆಗೆದು ಕೊಳ್ಳಬೇಕು? ಎಂದೆನಲಾಗದು. ಇದು ಹಿಂದಿನಕಾಲದ ಮಾತು. ಆಗ ಇಷ್ಟು ವಿಷಯ ವ್ಯಾಪೃತತ್ವವು ಜನಕ್ಕೆ ಇರಲಿಲ್ಲ. ಜ್ಞಾನ, ಕರ್ಮ, ವಿದ್ಯೆ, ಎಂಬಿವೆಲ್ಲವೂ ಪ್ರಥಮ (ಬ್ರಾಹ್ಮಣ) ವರ್ಣದವರದೇ ಆಗಿದ್ದಿತು. ಈಗ ಸರ್ವವರ್ಣದವರಲ್ಲಿಯೂ ವಿದ್ಯಾವಂತರೂ ಜ್ಞಾನಿಗಳೂ ಕರ್ಮಿಗಳೂ ಏರ್ಪಟ್ಟಿರುವರಷ್ಟೆ. ಹೀಗಿರಲು ನಾವು ಪೂರ್ವದಂತೆ ಎಲ್ಲರಿಂದಲೂ ಹೆಚ್ಚೆನಿಸಿಕೊಳಬೇಕಾದರೆ ವಿದ್ಯಾತಪಸ್ಸುಗಳನ್ನು ಹೆಚ್ಚಿಸಿಕೊಳ್ಳುವುದೇ ನ್ಯಾಯವಾಗಿರುವಾಗ ಕಾಲಾನುಸರಣವನ್ನು ಮಾಡದೆ, ಇರುವಬ್ರಾಹ್ಮಣ್ಯವನ್ನೂ ಕಳೆದು ಕೊಳ್ಳುವುದು ಯುಕ್ತವಾದೀತೆ ? ಆಲೋಚಿಸಿರಿ.

ನಮ್ಮ ಹಿರಿಯರ ಕಾಲದಲ್ಲಿದ್ದ ಗುರುಕುಲವಾಸದ ಮರ್ಯಾದಾಕ್ರಮವು ಬಹುಶ್ರಮಕರವಾದುದು. "ಸಮಿತ್ಪಾಣಿಃ ಶ್ರೋತ್ರಿಯಂ ಬ್ರಹ್ಮನಿಷ್ಠಂ

ಎಂದು ಗುರು ಗೃಹದಲ್ಲಿ ಸೌದೆ ನೀರು ಹೊತ್ತು ಚಾಕರಿಮಾಡಿ ಅವರ ಅನುಗ್ರಹವಂಪಡೆಯಬೇಕಾಗಿತ್ತು. ಆದರೆ ಆಕಾಲದಲ್ಲಿ ಬ್ರಾಹ್ಮಣರು ತಮ್ಮಲ್ಲಿ ಓದಲು ಬಂದವನ ಕುಲ ಗೋತ್ರ ಶೀಲಸ್ವಭಾವಗಳಂ ತಿಳಿದುಕೊಳ್ಳದೆ ಧರ್ಮರಹಸ್ಯವನ್ನೂ ಬ್ರಾಹ್ಮಣಕರ್ಮರಹಸ್ಯವನ್ನೂ ಒಂದುವರ್ಷವಾದರೂ ತಮ್ಮಲ್ಲಿ ಇರದವಗೆ ಹೇಳಬಾರದೆಂದು. "ನಾಸಂವತ್ಸರವಾಸಿನೇ ಪ್ರಬ್ರೂಯಾತ್" ಎಂದು ನಿಷೇಧವಿರುವುದರಿಂದ ಸರ್ವಸಾಧಾರಣವಾಗಿ ಎಲ್ಲರಿಗೂ ಹೇಳಲಿಕ್ಕೆ ಇಲ್ಲದೆ ಆ ರಹಸ್ಯವನ್ನು ರಹಸ್ಯವಾಗಿಯೇ ಬಚ್ಚಿಟ್ಟು ಬಚ್ಚಿಟ್ಟು ಫಲಾಂಶಗಳನ್ನಾದರೂ ಸ್ಪಷ್ಟಪಡಿಸದೆ "ಜೀರ್ಣಮಂಗೇ ಸುಭಾಷಿತಂ" ಎಂದು ಜೀರ್ಣವಾಗಿಸಿದರು. ವರ್ತಕನು ಲೋಭದಿಂದ ಪದಾರ್ಥವನ್ನು ಪಾತ್ರದಲ್ಲಿ ವಿನಿಯೋಗಿಸದೆ ಭವಿಷ್ಯಲ್ಲಾಭ ದೃಷ್ಟಿಯಿಂದ ಬಚ್ಚಿಡಲು ಕಾಲವಶದಿಂದ ಆ ವಸ್ತುವೇ ಮುಗ್ಗಿ ಹುಳಿತು ಮೊದಲಿಗೇ ಮೋಸಬರುವಂತೆ ನಮ್ಮ ಬ್ರಹ್ಮಕರ್ಮರೂಪಾರ್ಯಧರ್ಮದ ಮೂಲವೇ ನಿರ್ಮೂಲವಾಗುವ ಹೊತ್ತು ಬಂದಿದೆಯೆಂಬ ವಿಷಯದಲ್ಲಿ ನಾನು ಹೆಚ್ಚು ಹೇಳಲವಶ್ಯವಿಲ್ಲ. ಇದೆಲ್ಲರಿಗೂ ವಿದಿತವಿಷಯವೇ. ಆದುದರಿಂದ ಈಗಲಾದರೂ ಆ ಬ್ರಹ್ಮಕರ್ಮರಹಸ್ಯಗಳಂ ವಿಚಾರಿಸಿ ತತ್ತದಧಿಕಾರಿಗಳಿಗೆ ಬೋಧಿಸಿ ಅವರಿಂದ ಅದನ್ನು ಹೇಗಾದರೂ ಅನುಷ್ಠಾನ ಮಾಡಿಸಲು ತಕ್ಕ ಯತ್ನವಂ ಮಾಡದಿದ್ದರೆ ನಮ್ಮ ಬಾಲಕರೇ ಇನ್ನೂ ಭ್ರಷ್ಟರೂ ಪತಿತರೂ ಆಗುವರೆಂಬೀ ವಿಷಯದಲ್ಲಿ ಸ್ವಲ್ಪವೂ ಸಂದೇಹವಿಲ್ಲ. ಇನ್ನುಮೇಲೆ ದ್ವಿಜಕುಮಾರರು ಗುರುಗಳಿರುವ ಎಡೆಗಳಂ ಹುಡುಕಿಕೊಂಡು ಬಂದು ಚಿರಕಾಲ ಶುಶ್ರೂಷಿಸಿ ಅವರಿಂದ ಉಪದಿಷ್ಟರಾಗಿ ಭಕ್ತಿಶ್ರದ್ಧೆಗಳಿಂದ ವಿಹಿತಕರ್ಮಾನುಷ್ಠಾನವಂ ಮಾಡುವರೆಂಬಾಶೆಯನ್ನು ಬಿಟ್ಟುಬಿಡಬೇಕೆಂದೇ ತೋರುತ್ತದೆ. ಅದೇಶಕ್ಕೆಂದರೆ:—

ಅವರು ನಮ್ಮಲ್ಲಿಗೆ ಬರುವುದಿಲ್ಲ. ಅವರಿಗೆ ತೃಪ್ತಿಕರವಾಗಿ ಸನ್ಯಾಯವಾದ ಸದುತ್ತರವನ್ನು ಸರ್ವಕರ್ಮಕ್ಕೂ ಶ್ರದ್ಧೇಯವಾದ ಹೇತುಗಳನ್ನೂ ತೋರಿಸಿ ನಾವು ಹೇಳುವುದಿಲ್ಲ. ಇದರಮೇಲೆ ನಮ್ಮ ಕರ್ಮಕ್ಕೆ ವಿರುದ್ಧವಾಗಿಯೇ ಖಂಡಾಂತರದವರು ಸ್ವೀಯವಿಷಯಗಳ ಸೌಲಭ್ಯಾದ್ಯಂಶಗಳನ್ನು ಹೊಗಳುತ್ತ, ಐಹಿಕ ವಿಷಯೋಪಭೋಗದ ಸೌಕರ್ಯಗಳನ್ನು ತೋರಿಸುತ್ತ, ನಮ್ಮಲ್ಲಿರುವ ನಿರ್ಬಂಧಗಳನ್ನು ನಿಷ್ಪ್ರಯೋಜನಗಳೆಂದು ದೂಷಿಸುತ್ತ, ಸ್ವಜಾತಿಮತಗಳಲ್ಲಿರುವ ಸೌಕರ್ಯಾದಿಗುಣಗಳಿಂದ ಈ ಬಾಲರ ಬುದ್ಧಿಯನ್ನು ಆ ಕಡೆಗೆ ಆಕರ್ಷಿಸುತ್ತಿರುವಾಗ ಇವರು ನಮ್ಮನ್ನು ಬಿಟ್ಟು ಹೋಗದೇ ಇರುವರೇ? ಅಥವಾ ಇದ್ದರು, ನಮ್ಮ ಪ್ರಾಚೀನವಿಷಯಗಳನ್ನು ನಂಬುವರೋ? ಹಾಗೆ ನಂಬಿಸಲಿಕ್ಕೆ ಅವರೇನು ಚಿಕ್ಕ ಎಳೆಮಕ್ಕಳೆ? ಅವರು ನಂಬಬೇಡ,

ಹೋದರೆಹೋಗಲಿ, ಅಂತಹವರು ಇದ್ದೇನುಫಲ? ಎಂದು ಉಪೇಕ್ಷಿಸಿದರೆ ನಾವೀಗ ಮುಮೂರ್ಷುಗಳು. ಮುಂದಿನವರೆಲ್ಲರೂ ಪಾಶ್ಚಾತ್ಯಾಚಾರತತ್ಪರರು. ಈಗ ಆ ಭಾಷೆಯನ್ನು ಕಲಿಯದಿದ್ದರೆ ಪಶುವಿನಂತೆ ಮೂಕಪ್ರಾಯರಾಗಿರ ಬೇಕಾಗುತ್ತದೆ. ಆದುದರಿಂದ ಕಲಿಯುದಿದ್ದರೆ ಯತ್ನವಿಲ್ಲ. ಜೀವಿಸುವುದೇ ದುಸ್ತರವಾಗುತ್ತದೆ. ಕೆಲವರು ಅದನ್ನು ಕಲಿಯದಿದ್ದರೂ ಕಲಿತವರ ಸಂಸರ್ಗದಿಂದ 'ಯದ್ಯದಾಚರತಿ ಶ್ರೇಷ್ಠಃ' ಎಂದು ತದೀಯಾಚಾರಾನು ಷ್ಠಾನ ಮಾಡುವರಲ್ಲದೆ ಈ ಶ್ರಮಕರವಾದ ವರ್ಣಾಶ್ರಮಾಚಾರ ವಿಚಾರಕ್ಕೆ ಬರುವರು ಯಾರು? ಹಾಗೆ ಬಂದವರಿಗಾದರೂ ಧರ್ಮ ಸೂಕ್ಷ್ಮರಹಸ್ಯ ಗಳಂ ತಿಳಿಸುವ ತಪಸ್ವಿಗಳೆಲ್ಲಿ ಸಿದ್ಧರಾಗಿರುವರು? ವ್ಯಾಸಾದಿಗಳೇ ಚಿರಂ ಜೀವಿಗಳಾಗಿ ಅಲ್ಲಲ್ಲಿರುತ್ತಾರೆಂದು ನಂಬಿರುವ ಎಂದರೆ, ಅವರು ತಪೋಧನ ರಾದುದರಿಂದ ಈ ಪಾಪಿಕಲಿ ಸಂಬಂಧವನ್ನು ತಪ್ಪಿಸಿಕೊಂಡು ನಿಶ್ಚಿಂತರಾಗಿ ರುವರು. ಅಂತಹವರು ನಮ್ಮ ಪ್ರಾರ್ಥನೆಯೇ ಇಲ್ಲದೆ ನಮಗೆ ಹಿತೋಪದೇಶ ಮಾಡಲು ಬರುವರೇ? ಆದರಿಂದ ಆ ವ್ಯಾಸಾದಿ ಮಹರ್ಷಿಗಳಿಗೆ ಮೊರೆಯಿಡ ಲಾದರೂ ಕೊಂಚಮಟ್ಟಿಗೆ ಅರ್ಹತೆಯನ್ನು ಪಡೆದು ಕೊಳ್ಳುವುದೇ ಯುಕ್ತಿ ಯುಕ್ತವಾಗಿರುವುದು ಎಂದು ತೋರಿ ಮಹನೀಯರಂ ಮರೆಹೊಂದಲು ಪ್ರವರ್ತಿಸಿರುವೆನು.

ಇದುವರೆಗೆ ಮುನಿಗಳ ಕಾಲಕ್ಕೆ ಮರ್ಕಟನ್ಯಾಯವಿತ್ತು. ಈಗ ನಮ್ಮ ಈ ಹುಡುಗರ ಕ್ಷೇಮಕ್ಕೋಸ್ಕರ ನಾವು ಮಾರ್ಜಾಲನ್ಯಾಯವನ್ನು ಅವಲಂ ಬಿಸದಿದ್ದರೆ ತೀರದೆಂದು ತೋರುತ್ತಿದೆ. ಏಕೆಂದರೆ:—ಈಗಿನ ಓದಿನ ಮಹಿಮೆಯಿಂದ ಈ ಹುಡುಗರ ಬುದ್ಧಿ ಯಾವುದೊಂದು ನಿಯಮಕ್ಕೂ ಕಟ್ಟಿಗೂ ಒಳಪಡದೆ ಉಚ್ಛೃಂಖಲವಾಗಿ ಪ್ರವರ್ತಿಸುತ್ತಿರುವುದರಿಂದ ಅಂತಹ ವರ ಸಹವಾಸದಲ್ಲಿರುವ ಈ ಬ್ರಾಹ್ಮಣ ಬಾಲಕರು "ತಮ್ಮ ಬ್ರಾಹ್ಮಣ್ಯದಲ್ಲಿ ಯೇನೇನೂ ಸಾರವಿಲ್ಲ. ನಿರರ್ಥಕವಾದ ಮತಕಲಹವೊಂದೇ ವಿಶೇಷವು. ಆಯುರಾರೋಗ್ಯ ಬುದ್ಧಿಕೌಶಲ್ಯ ನೈರ್ಮಲ್ಯ ಸೌಶೀಲ್ಯಾದಿ ಸರ್ವ ಸದ್ಗುಣ ಗಳನ್ನು; ನಾವು ವೃದ್ಧಿಗೆ ಬರಬೇಕಾದರೆ ಬೇಕಾಗುವ ಸರ್ವ ವಿದ್ಯೆಗಳನ್ನೂ; ಖಂಡಾಂತರದವರಿಂದಲೇ ಕಲಿಯಬೇಕಾಗಿದೆ. ಹೀಗಿರುವುದರಿಂದ ಈಜಾತಿ ಮತ ನಿರ್ಬಂಧಕ್ಕೊಳಗಾದರೆ ನಾವೇ ಕೆಡುವೆವು" ಎಂದು ತಿಳಿದು ಕೊಂಡು ಸ್ವಚ್ಛಂದಚಾರಿಗಳಾಗಿರುವುದು ಸರಿಯಷ್ಟೆ. ಅಂತಹವರುಗಳಲ್ಲಿ ಕೆಲವರೀಗ ಸರ್ವವಿಷಯದಲ್ಲಿಯೂ ಗುರುಸ್ಥಾನೀಯರಾಗಿರುವ ಖಂಡಾಂತರದವರ ಸಾರೂ ಪ್ಯ ಮುಕ್ತಿಯಂ ಪಡೆಯಲೆಳಸಿ ಕೆಲವರು ಪಡೆದಿರುವುದನ್ನು ಕಂಡು ಮತ್ತೆ ಕೆಲವರು ಅದನ್ನೇ ಅಪೇಕ್ಷಿಸುತ್ತ ಪ್ರಾಗ್ಗೋತ್ರಸೂತ್ರತ್ಯಾಗಮಾಡಿ ಖಂಡಾಂತರಗಳಂ ಸುತ್ತಿ ತಪಸ್ಸುಮಾಡಿ ಸಾಲೋಕ್ಯ ಸಾಮೀಪ್ಯ ಸಾರೂಪ್ಯ

ರೂಪ ತ್ರಿವಿಧ ಮೋಕ್ಷಾನಂದವನ್ನೂ ಪಡೆದು ; ತಾನು ತನ್ನಲೇಡಿ ತನ್ನಲ್ಲಿ ಕೃತಜ್ಞನಾದ ಬೊಟ್ಲರು ಭಷಕಸಹಿತವಾಗಿ ಬಂದು; ಅಣ್ಣ ಆಚಾರು, ತಮ್ಮ ತುರುಷ್ಕ, ಭಾವ ಬೌದ್ಧ, ಮೈದುನ ಮದ್ಯಾಪಣಿಕ, ಈಮಧ್ಯದಲ್ಲಿ ತಾನು ನಾಸ್ತಿಕ, ಹೀಗೆಲ್ಲರೂ ಡಬ್ಬಲ್, ಟ್ರಿಬ್ಬಲ್ ಗ್ರಾಜುಯೇಟ್ಸುಗಳಾದುದರಿಂದ ಒಂದೇಕಡೆಯಲ್ಲಿ ಸೇರಿ ಸೌಭ್ರಾತ್ರ ಸುಖಾನುಭವವನ್ನು ಮಾಡಬೇಕಾದ ಕಾಲವು ಪ್ರಾಪ್ತವಾಗಿರುವಾಗ ಈ ವಿಷಯವನ್ನು ನಾವೀಗ ಮನಸ್ಸಿಗೆ ತಂದುಕೊಳ್ಳದೆ “ನಮ್ಮ ಮಟ್ಟಿಗೆ ನಾವು ಐಹಿಕಾಸಕ್ತರಾಗಿದ್ದರೆ ಸರಿ” ಯೆಂದಿದ್ದರೆ ನಮ್ಮ ಮಕ್ಕಳ ಕಾಲಕ್ಕೆ ಮನೆಯಲ್ಲಿರುವ ಮಾನ್ಯವಾದ ಸಚ್ಛಾಸ್ತ್ರಾದಿ ಪುಸ್ತಕಗಳು ಪೊಟ್ಟಣ ಕಟ್ಟುವುದಕ್ಕೂ ಸಾಲಗ್ರಾಮಗಳು ತೂಕದ ಗುಂಡುಗಳಿಗೂ ಉಪಯೋಗಿಸಲ್ಪಡುವುವೆಂಬೀ ವಿಷಯವನ್ನು ಬ್ರಾಹ್ಮಣರೆಲ್ಲರೂ ಚೆನ್ನಾಗಿ ಮನದಲ್ಲಿ ಅವಧರಿಸಿಟ್ಟಿರಬೇಕು. ಏಕೆಂದರೆ, ಈಗ ಅಲ್ಲಲ್ಲಿ ಕಿವಿಯಿಂದಕೇಳುತ್ತ ಮಾತಿನಲ್ಲಿರುವುದನ್ನು ನಾಳೆ ಕಣ್ಣಿಂದ ಕಾಣುತ್ತ ಕಾರ್ಯದಿಂದ ಅನುಭವಿಸಬೇಕಾಗುವುದೆಂಬುದರಲ್ಲಿ ಲೇಶವೂ ಸಂಶಯ ಪಡಕೆಲಸವಿಲ್ಲ.

ಆದುದರಿಂದ ಈಗಿನ ದ್ವಿಜಕುಮಾರರಿಗೆ ಈ ವೈಜ್ಞಾನಿಕ ನವನಾಗರಿಕ ಚಿತ್ತೋದ್ರೇಕವು, ನಾಸ್ತಿಕ್ಯ ಪಿತ್ತಭ್ರಮವು ತಲೆಗೇರುವುದಕ್ಕೆ ಮೊದಲೇ ಎಂದರೆ ಬಾಲ್ಯದಲ್ಲಿಯೇ ಸತ್ಯಶೌಚಾದಿಗಳು ಸದಾಚಾರ ಸತ್ಸಂಪ್ರದಾಯ ಪ್ರವರ್ತನ, ಸತ್ಸಹವಾಸಗಳು ಅವರಿಗೆ ಉಂಟಾಗುವಂತೆ ಸರ್ವಪ್ರಯತ್ನಗಳನ್ನೂ ಮಾಡಿ; ಬಹುಶ್ರಮ ಸಾಹಸಪಟ್ಟು ಅವರ ದೇಹವನ್ನು ಬೆಳೆಯಿಸಿದಂತೆ ಅವರ ಬುದ್ಧಿಯನ್ನೂ ತಿದ್ದಿ ಬೆಳೆಯಿಸಬೇಕು. ಅದರಿಂದ ಅವರಿಗೆ ಮನಸ್ಸಿನಲ್ಲಿ ‘ಈಗ ಲೋಕದಲ್ಲಿರುವ ದೀರ್ಘಾಯುರಾರೋಗ್ಯಾದಿ ಸುಖಸಾಧಕ ಸನ್ಮಾರ್ಗಗಳೊಳಗೆ ಐಹಿಕ ಪಾರತ್ರಿಕ ಉಭಯಸಾಧಕವಾದ ಮಾರ್ಗವು ನಮ್ಮದೇ ಸರಿ, ನಮ್ಮದೇ ನಿರುಪಾಧಿಕವು, ಸರ್ವಸುಲಭವು ಸರ್ವಶ್ರೇಷ್ಠವೂ ಆಗಿದೆ’ ಎಂಬ ನಂಬುಗೆ ಅನುಭವ ವುಂಟಾಗುವಂತೆ ಅಭ್ಯಾಸ ಮಾಡಿಸಿದ್ದರೆ; ಮುಂದೆ ಅನ್ಯಭಾಷಾ ವಿದ್ಯಾಸಕ್ತರಾದರೂ ತಲ್ಲೇಪವು ಅಷ್ಟಾಗಿ ಆಗದು. ನಾಸ್ತಿಕ್ಯ ಪಿತ್ತಭ್ರಮವೆಂತೂ ಬಾರದು. ಒಂದು ವೇಳೆ ದುಸ್ಸಹವಾಸ ದೋಷದಿಂದ ಮಧ್ಯವಯಸ್ಸಿನಲ್ಲಿ ಆ ದೋಷವು ಅಲ್ಪವಾಗಿ ಪ್ರಾಪ್ತವಾದರೂ ಆ ಭ್ರಮವನ್ನು “ಯನ್ನವೇ ಭಾಜನೇ ಲಗ್ನಃ ಸಂಸ್ಕಾರೋ ನಾನ್ಯಥಾ ಭವೇತ್” (ಹೊಸಗಡಿಗೆಯಲ್ಲಿ ಮೊದಲು ಸೇರಿದ ಗಂಧರಸಾದಿಗಳು ಬಿಡವು) ಎಂಬಂತೆ ಬಾಲ್ಯಾಭ್ಯಸ್ತವಾದ ಸತ್ಸಂಪ್ರದಾಯ ಜ್ಞಾನದ ಸಂಸ್ಕಾರವು ಆದೋಷವನ್ನು ಕಳೆದು ಕಡೆಗೆ ತಾನೇ ನಿಲ್ಲುವುದು.

ಹಾಗಲ್ಲದೆ ಮೊದಲೇ ಬಾಲರ ಬುದ್ಧಿಯಲ್ಲಿ ಪಾಶ್ಚಾತ್ಯಾದಿ ಪರಕೀಯಾಚಾರ ವ್ಯವಹಾರಗಳು ಊರಿಕೊಂಡಪಕ್ಷದಲ್ಲಿ ಮುಂದಕ್ಕೆ ಮುದಿತನ ಬಂದಾಗ ಮತಿಯಲ್ಲಿ ಮನನಕ್ಕೆ ಬಾಲ್ಯಾಭ್ಯಸ್ತವಿಷಯಗಳೇ ಬರುವವಲ್ಲದೆ ಮಧ್ಯದಲ್ಲಿ ಸಂಸಾರ ದುಃಖೋಪಶಮನಾರ್ಥವಾಗಿ ತಿಳಿಯಬೇಕಾಗುವ ನಮ್ಮ ಮತಾಚಾರಗಳು ಆ ಮತಿಯಲ್ಲಿ ನಿಲ್ಲದೆ ಮಧ್ಯದಲ್ಲಿಯೇ ಮಾಸಿಹೋಗುವುವು. ಒಂದುವೇಳೆ ಪಾಕ್ಷಿಕವಾಗಿ ಮನದಲ್ಲಿ ಪ್ರವೇಶಿಸಿದರೂ ಆವಯಸ್ಸಿನಲ್ಲಿ ನಮ್ಮಾಚಾರಗಳನ್ನು ಅನುಷ್ಠಾನಕ್ಕೆ ತರಲು ಅಭ್ಯಾಸವಿಲ್ಲದುದರಿಂದ ಸಾಧ್ಯವೇ ಆಗದೆಂದು ನನಗೆ ತೋರುತ್ತಿದೆ. ಪ್ರೇಕ್ಷಾವಂತರು ಇನ್ನೂ ಉದಾರಮತಿಗಳು ಚೆನ್ನಾಗಿ ಆಲೋಚಿಸಬಹುದು.

“ಸರಿ. ಈಗಿನ ಕಾಲದ ಹುಡುಗರೆಲ್ಲಾ ಒಂದೇ ರೀತಿ. ಹೇಳಿದ ಹಾಗೆ ಕೇಳುವರಲ್ಲ. ಮಾಡತಕ್ಕದೇನು? ಮುಖ್ಯವಾಗಿ ಸತ್ಕರ್ಮಕ್ಕೆ ಇದು ಸಮಯವಲ್ಲ. ಕಲಿಕಾಲದ ಮಹಿಮೆಯೇ ಅಂತಹುದು. ಅವರವರ ಪ್ರಾರಬ್ಧಕರ್ಮಗತಿ ಯಿದ್ದಂತೆ ನಡೆಯುವುದು. ದೈವೇಚ್ಛೆಯೇ ಹಾಗೆ. ನಮ್ಮಂತಹ ಮನುಷ್ಯರ ಮಾತೇನು ಸಾಗುತ್ತದೆ? ಇದಲ್ಲದೆ ಹಾಗೆ ಕೆಡತಕ್ಕವರನ್ನು ನಾವು ಎಲ್ಲಿಯವರೆಗೂ ಕಾದಿರಬಲ್ಲೆವು? ಅವರವರ ವಿಧಿಯ ಹಣೆಯ ಬರಹವನ್ನು ತಪ್ಪಿಸುವವರು ಯಾರು? ಲೋಕಕ್ಕೆಲ್ಲಾ ಕಾರಣ ಕರ್ತೃಗಳು ಯಾರು?”

ಎಂದು ಹೀಗೆ ಕೆಲವರು ಬಾಯಿಮಾತಿಗೂ ಅವಕಾಶಗೊಡದೆ ತಮಗೆ ತಾವೇ ಸಿದ್ಧಾಂತೀಕರಿಸಿಕೊಂಡು ನಿತ್ಯವೂ ಹಲ್ಲುಜ್ಜದೆ ಮುಖವಂ ತೊಳೆಯದೆ ತಿನ್ನುತ್ತ ಕುಡಿಯುತ್ತ ಶೌಚವಿಧಿತಿಳಿಯದೆ ಸ್ವೇದಗಂಧಕ್ಕೆ ಇಮ್ಮಡಿಯಾಗಿ ಸೋಪಿನವಾಸನೆ ಸಹಿಸುತ್ತ, ಮಲಾಪಕರ್ಷಣಸ್ನಾನ ಮಾಡಲು ಬಾರದೆ ಮೈಯಲ್ಲಿ ಮಲವೃದ್ಧಿ ಮಾಡಿಕೊಂಡು ಅದರಿಂದ ಕಣ್ಣು ಕಿವಿ ಹಲ್ಲುಗಳಂ ಕಳೆದುಕೊಂಡು, ಅವಕ್ಕೆ ತಾವು ಮಾಡಿದ ಅಪಕಾರಜ್ಞಾನವೇ ತಮಗಿಲ್ಲದೆ “ನನ್ನಕರ್ಮ, ನನ್ನ ಅದೃಷ್ಟ, ಕಾಲಗತಿ, ವಿಧಿ, ನಮ್ಮಯತ್ನವೇನಿದೆ” ಎಂದು ಹೇಳಿಕೊಳ್ಳುತ್ತ ಹೀಗೆ ತಾವು ತಮ್ಮ ದೇಹಕ್ಕೆ ಮಾಡಿಕೊಳ್ಳುವ ಅಹಿತಾಚರ್ಯಾ ಮಾತ್ರವಲ್ಲದೆ ಮಕ್ಕಳಿಗೆಕೂಡ ಮದ್ದು ನುಂಗಿಸಿ ಕಾಡ್ಲೀವರ್ ಆಯಿಲ್, ಇತ್ಯಾದಿಗಳಂ ಕುಡಿಸುತ್ತ ತಾವೂ ಕುಡಿಯುತ್ತ, ಧೂಮ ನಸ್ಯ ಕಾಫಿ ಮುಂತಾದುದನ್ನು ತಪ್ಪದೆ ನಿತ್ಯವೂ ಸೇವಿಸುತ್ತ, ಇಂತಹ ಸದಾಚಾರವೇ ಈ ದೇಹಧಾರಣಕ್ಕೆ ಮೂಲಸ್ತಂಭವೆಂದು ತಿಳಿದು ಇನ್ನೂ ಬಹುಕಾಲ ಬಾಳಿಕೆಗೋಸ್ಕರ ನರ್ಸಿಂಗ್ ಫೂಡ್ಸು, ವೈನ್, ಟಿ. ಟಾನಿಕ್, ಮೊದಲಾದ ಅನ್ನಪದಾರ್ಥಗಳ ಹೊರೆಯನ್ನು ದೇಹಕ್ಕೆ ಹೊರಿಸುತ್ತ “ನಮ್ಮ ಹಿರಿಯರ ಕಾಲಕ್ಕೆ

ಇಂತಹ ಸುಖವೆಲ್ಲಿಯದು?" ಎಂದು ವಾದಿಸುವ ಮಹಾಜನಕ್ಕೆ ನಾನು ತಿಳಿಸಲು ಶಕ್ತನಲ್ಲ. ಯಾರಾದರೆ ಸನ್ನ್ಯಾಯವಾಗಿ ತೋರಿಸಿದ ದೋಷವನ್ನು ವಿಮರ್ಶೆಯಿಂದ ಮನನಮಾಡಿ ತಿದ್ದಿಕೊಳ್ಳಲು ಸಾಧ್ಯವಾದ ಮಟ್ಟಿಗೆ ಯತ್ನಿಸಲು ಬರುವರೋ ಅವರನ್ನು ಕುರಿತು ಅರಿತಮಟ್ಟಿಗೆ ಕೊಂಚವಾಗಿ ಅರಿಕೆಮಾಡಿಕೊಳ್ಳುವೆನು :—

ಮೇಲೆ ಹೇಳಿದ ಕಲಿಕಾಲ ಕರ್ಮ ದೈವ ಎಂಬಿವು ಎಲ್ಲರಿಗೂ ಎಲ್ಲಾ ಕಾರ್ಯಗಳಿಗೂ ಸಾಮಾನ್ಯವಾದ ನಿಮಿತ್ತಕಾರಣಗಳು. ಇವು ಮಾತ್ರವಲ್ಲದೆ ಇನ್ನೂ ಇತರ ಕಾರಣಗಳು ಇವೆ. ಆದರಿಂದ ಒಂದೊಂದೇ ಕಾರ್ಯಕ್ಷಮವಲ್ಲವೆಂದು ಶ್ರೀ ಕೃಷ್ಣೋಕ್ತಿಯುಂಟು.

ಗೀ॥ "ಅಧಿಷ್ಠಾನಂ ತಥಾ ಕರ್ತಾ ಕರಣಂ ಚ ಪೃಥಗ್ವಿಧಂ ।
ವಿವಿಧಾಶ್ಚ ಪೃಥಕ್ ಚೇಷ್ಟಾ ದೈವಂ ಚೈವಾತ್ರ ಪಂಚಮಂ ॥

ದೇಶ ಕಾಲಗಳು; ಮಾಡತಕ್ಕವನು; ಆ ಕೆಲಸಕ್ಕೆ ಬೇಕಾಗುವ ಬೇರೆ ಬೇರೆ ಸಾಧನಗಳು; ಬಗೆಬಗೆಯ ವ್ಯಾಪಾರಗಳು; ಅಯ್ದನೆಯದು ಆ ಕಾರ್ಯನಿರ್ವಾಹಕೆ ದೈವವೂ; ಕಾರಣವಾಗಿದೆ" ಎಂದು ಕಾರ್ಯಸಿದ್ಧಿಗೆ ಈ ಯ್ದೈದು ಕಾರಣಗಳೂ ಆವಶ್ಯಕಗಳೆನಿಸಿವೆ. ಆದರೆ ಲೋಕದಲ್ಲಿ ಯಾರೂ ತಾವು ತಾವು ಮಾಡಿದ ಕೆಲಸಗಳು ಕೈಗೂಡದೆ ತಪ್ಪಿಹೋದಾಗ ಮನಸ್ಸಮಾಧಾನಾರ್ಥವಾಗಿ "ಅದೃಷ್ಟ, ದೈವ ಕಾಲ ಕರ್ಮಗತಿ," ಎಂದು ಹೇಳಿಕೊಳ್ಳುತ್ತಿರುವರಲ್ಲದೆ ಕೋರಿದ ಕೆಲಸಗಳನ್ನು ಉತ್ಸಾಹಿಸಿ ಮಾಡತೊಡಗುವಾಗ ಅವುಗಳನ್ನು ಸ್ಮರಿಸುವರೋ? ಇಲ್ಲವೆ "ಕಲಿಕಾಲ; ಸತ್ಕರ್ಮಗಳು ನಡೆಯುವುದಿಲ್ಲ" ಎಂದು ಮದುವೆ ಮುಂಜಿ ಮುಂತಾದ ಕೆಲಸವೊಂದನ್ನೂ ಮಾಡದೆ ಜೀವನ್ಮುಕ್ತರಂತೆ ನಿರುದ್ಯೋಗರಾಗಿ ಇರಬಲ್ಲರೋ? ಹಾಗಿರಲು ಅಶಕ್ಯವಾದುದರಿಂದ ಲೋಕದಲ್ಲಿ "ನಮ್ಮ ಯತ್ನಕ್ಕೆ ಒಳಪಟ್ಟ ಕೆಲಸವಿದು ಒಳಪಡದ ಕೆಲಸವಿದು, ಇದು ದೈವಾಯತ್ತ ಇದು ಮನುಷ್ಯಾಯತ್ತ, ಇದು ಉಭಯಾಯತ್ತ, ಇದು ಸುಲಭಸಾಧ್ಯ, ಇದು ಪ್ರಯಾಸಸಾಧ್ಯ, ಇದು ಸರ್ವಪ್ರಕಾರದಿಂದಲೂ ಅಸಾಧ್ಯ" ಇತ್ಯಾದಿ ವಿವೇಚನೆಯೇ ಇಲ್ಲದೆ ಮನಕ್ಕೆ ತೋರಿ ಬಂದಂತೆಯೇ ವಾಶನಾಡುವರೊಡನೆ ಮಾತನಾಡಿ ಫಲವಿಲ್ಲ.

ಆದರಿಂದ ನಮ್ಮ ಬುದ್ಧಿಲೋಪದಿಂದ ಕಾರ್ಯಗಳು ಕೆಡುತ್ತಿರುವುದು ಲೋಕಶಾಸ್ತ್ರಾನುಭವಗಳಿಂದ ತಿಳಿದುಬಂದಮೇಲೆ ಮುಂದಕ್ಕೆ ಅಂತಹ ಕಾರ್ಯಗಳನ್ನು ಯಥಾಶಕ್ಯವಾಗಿ ಸರಿಮಾಡಿಕೊಳ್ಳಲು ಪ್ರಯತ್ನಿಸುತ್ತ ಬರಬೇಕು. ಅದರಲ್ಲಿ ಸ್ವಾಯತ್ತವಾದ ಕೆಲಸವಾಗಿದ್ದರೆ ಅದನ್ನು ತನಗೆ

ತಾನೇ ಸರಿಮಾಡಿಕೊಳ್ಳ ಬಹುದು. ಪರಾಧೀನವಾದ ಮಹಾಕಾರ್ಯವಾದರೆ "ಸಂಘೇ ಶಕ್ತಿಃ ಕಲೌ ಯುಗೇ" ಎಂದು ಬಹುಜನರು ಸಂಘೀಭವಿಸಿ ಸಾವಧಾನವಾಗಿ ಉಚಿತಾಲೋಚನೆಯಿಂದ ಉಪಕ್ರಮಿಸುವುದೇ ಉತ್ತಮವು. ನಾವು ಮಾಡುವುದು ಯುಕ್ತವಾಗಿದ್ದರೆ ದೈವಾನುಕೂಲ್ಯವುಂಟಾಗುವುದು. ಸರಿಯಾಗಿ ಕಾರ್ಯವೂ ನೆರವೇರುವುದು. ಕೇವಲ ಹಠದಿಂದ ಮಾಡಿದರೆ ಶ್ರಮ ಬಹಳ, ಫಲವೇನೋ ಅಲ್ಪವಾಗುವುದು.

ಶ್ಲೋ॥ ಕಿಂಚಿ ದ್ದೈವಾದ್ಧಠಾತ್ಕಿಂ ಚಿ ಕ್ಕಿಂ ಚಿ ದೇವ ಸ್ವಕರ್ಮಭಿಃ।
ಪ್ರಾಪ್ನುವನ್ತಿ ನರಾ ರಾಜ್ಞ ಮಾತೇಽ ಸ್ತ್ವನ್ಯಾ ವಿಚಾರಣಾ॥

ಕೆಲವು ದೈವಿಕವಾಗಿ, ಕೆಲವು ಹಠಕ್ರಿಯೆಯಿಂದ, ಕೆಲವು ನಮ್ಮ ಕರ್ಮದಿಂದಲು ಫಲಗಳು ಪ್ರಾಪ್ತವಾಗುತ್ತವೆ. ಈ ವಿಷಯದಲ್ಲಿ ಬೇರೆ ಸಂದೇಹಬೇಡ. ಎಂದು ಅರಣ್ಯ ಪರ್ವದ ೧೮೩ ಅಧ್ಯಾಯದಲ್ಲಿ ಹೇಳಲ್ಪಟ್ಟಿದೆ. ಆದುದರಿಂದ ಈ ಕಾಲದಲ್ಲಿ ವರ್ಣಾಶ್ರಮಧರ್ಮಗಳು "ಸರ್ವೇಧರ್ಮಾಃ ಕೃತೇ ಜಾತಾಃ ಸರ್ವೇ ನಷ್ಟಾಃ ಕಲೌಯುಗೇ" ಎಂದು ನಾಶವಾಗುತ್ತ ಬರುವದೇ ಸಹಜವಾಗಿದ್ದರೂ ಇದಿನ್ನೂ ಕಲ್ಯಾದಿಯಾಗಿರುವುದರಿಂದ ಹಠದೊಡದೆ ಯತ್ನಿಸುತ್ತ ಬಂದಲ್ಲಿ ಆ ದೈವವು ಪಾದಾಂಶಫಲವನ್ನಾದರೂ ಕೊಟ್ಟೇಕೊಡುವುದೆಂದು ನಂಬ ಬಹುದು. ಈ ವಿಷಯದಲ್ಲಿ ಅಷ್ಟುದಾರ್ಢ್ಯವೇನಂದರೆ ಯಾವಾಗ ಇವಗೆ ಮನುಷ್ಯತ್ವವು ಬಂದಿತೋ ಅದರಲ್ಲಿಯೂ ಸತ್ಕರ್ಮಾರ್ಹವಾದ ಬ್ರಾಹ್ಮಣತ್ವವೇ ಸಿದ್ಧಿಸಿತೋ ಆಗಲೇ ಇದಕ್ಕೆ ಕಾರಣವಾದ ಸುಕೃತವುಂಟೆಂದು ಸಿದ್ಧವಾಯಿತು. ಈ ಜನ್ಮವನ್ನು ಯಥಾರ್ಥವಾಗಿ ಉಪಯೋಗಿಸಿಕೊಳ್ಳದೆ ಕೆಡಿಸಿಕೊಂಡರೆ ಮುಂದಕ್ಕೆ ಧನಲೋಭಿಗೆಂತೋ ಅಂತು ಇದಕ್ಕೂ ನೀಚಸ್ಥಿತಿ ಸಿದ್ಧವೇ ಸರಿ. ಇಹದಿಂದಲ್ಲವೆ ಪರವನ್ನೂಹಿಸಬೇಕಾಗಿದೆ. ಈ ಪೂರ್ವೋತ್ತರ ಕರ್ಮ ವಿಷಯದಲ್ಲಿ ಆತ್ರೇಯ ವೇದವ್ಯಾಸ ಮುನಿಗಳಿಬ್ಬರೂ ಪುರುಷಕಾರವನ್ನು ಬಿಡಕೂಡದೆಂದು ಹೇಳಿದ್ದಾರೆ.

ಶ್ಲೋ॥ ದೈವಂ ಪುರುಷಕಾರೇಣ ದುರ್ಬಲಂ ಹ್ಯುಪಹನ್ಯತೇ।
ದೈವೇನ ಚೇತರತ್ಕರ್ಮ ವಿಶಿಷ್ಟೇನೋಪಹನ್ಯತೇ॥
ದೈವಮಾತ್ಮ ಕೃತಂ ವಿದ್ಯಾತ್ಕರ್ಮಯತ್ಪೌರ್ವದೈಹಿಕಂ।
ಸ್ಮೃತಃ ಪುರುಷಕಾರಸ್ತು ಕ್ರಿಯತೇ ಯದಿಹಾಪರಂ॥

(ಪ್ರಬಲವಾದ ಪುರುಷಪ್ರಯತ್ನವು ದುರ್ಬಲವಾದ ದೈವವನ್ನು, ಪ್ರಬಲವಾದ ದೈವವು ದುರ್ಬಲವಾದ ಪ್ರಯತ್ನವನ್ನು ಗೆಲ್ಲುತ್ತದೆ; ದೈವವೆಂಬುದು ತಾನು ಪೂರ್ವಜನ್ಮದಲ್ಲಿ ಮಾಡಿದ್ದ ಸುಕೃತ ದುಷ್ಕೃತರೂಪ ಕರ್ಮವೆಂದು; ಪುರುಷ

ಕಾರವೆಂಬುದು ಈ ಜನ್ಮದಲ್ಲಿ ಮಾಡಲ್ಪಡುತ್ತಿರುವ ಕರ್ಮವೆಂದು ತಿಳಿಯ ಬೇಕು.) ಎಂದು ಆಯುರ್ವೇದದಲ್ಲಿ ಅತ್ರೇಯ ವಚನವುಂಟು.

ಅನುಶಾ॥ "ದೈವೇಪುರುಷಕಾರೇಚ ಕಿಂ ಸ್ವಿಚ್ಛ್ರೇಷ್ಠತರಂ ಭವೇತ್।
ಕ್ಷೇತ್ರಂ ಪುರುಷಕಾರಸ್ತು ದೈವಂ ಬೀಜ ಮುದಾ ಹೃತಂ॥
ಯಥಾಗ್ನಿಃ ಪವನೋದ್ಧೂತಃ ಸುಸೂಕ್ಷ್ಮೋಪಿ ಮಹಾನ್ಭವೇತ್।
ತಥಾ ಕರ್ಮಸಮಾಯುಕ್ತಂ ದೈವಂ ಸಾಧು ವಿವರ್ಧತೇ॥
ಯಥಾ ತೈಲಕ್ಷಯಾದ್ದೀಪಃ ಪ್ರಹ್ರಾಸಮುಪಗಚ್ಛತಿ।
ತಥಾ ಕರ್ಮಕ್ಷಯಾದ್ದೈವಂ ಪ್ರಹ್ರಾಸಮುಪಗಚ್ಛತಿ॥
ನದೈವ ಮಕೃತೇ ಕಿಂಚಿತ್ ಕಸ್ಯಚಿದ್ದಾತು ಮರ್ಹತಿ।
ಶುಭೇನ ಕರ್ಮಣಾ ಸೌಖ್ಯಂ ದುಃಖಂ ಪಾಪೇನ ಕರ್ಮಣಾ॥
ಕೃತಂ ಫಲತಿ ಸರ್ವತ್ರ ನಾಕೃತಂ ಭುಜ್ಯತೇ ಕ್ವಚಿತ್।
ಸ್ವಂ ಚೇತ್ಕರ್ಮ ಫಲಂನ ಸ್ಯಾತ್ಸರ್ವಮೇವಾಫಲಂ ಭವೇತ್॥"

(ದೈವಪುರುಷಕಾರಗಳಲ್ಲಿ ಯಾವುದು ಶ್ರೇಷ್ಠವೆಂಬ ಪ್ರಶ್ನೆಗೆ ಉತ್ತರ:—ಪುರುಷ ಪ್ರಯತ್ನವೇ ಕ್ಷೇತ್ರವು ದೈವವೇ ಬೀಜವು; ಗಾಳಿಯಿಂದ ಕೂಡಿದ ಬೆಂಕಿಯು ಸೂಕ್ಷ್ಮವಾಗಿದ್ದರೂ ಬರುತ ಬರುತ ಹೇಗೆ ದೊಡ್ಡದಾಗುವುದೋ, ಹಾಗೆ ಕರ್ಮದಿಂದ ಕೂಡಿದ ದೈವವು ಚೆನ್ನಾಗಿ ವೃದ್ಧಿಯಾಗುವುದು. ಎಣ್ಣೆಯಿಲ್ಲದೆ ದೀಪವು ಹೇಗೆ ಆರುವುದೋ ಹಾಗೆ ಕರ್ಮವಿಲ್ಲದೆ ದೈವವು ನಷ್ಟವಾಗುವುದು. ಕರ್ಮವನ್ನೇ ಮಾಡದವಗೆ ದೈವವು ಏನೂ ಕೊಡಲಾರದು. ಪುಣ್ಯಕರ್ಮದಿಂದ ಸುಖವು ಪಾಪಕರ್ಮದಿಂದ ದುಃಖವು. ಕರ್ಮಫಲವು ತನ್ನದಾಗದಿದ್ದರೆ ಎಲ್ಲವೂ ವ್ಯರ್ಥವೇ ಆದೀತು. ಆದ್ದರಿಂದ ಎಲ್ಲೆಲ್ಲಿಯೂ ಕರ್ಮವು ಮಾಡಿದಂತೆಯೇ ಫಲಿಸುವುದು. ಮಾಡದ ಕರ್ಮವು ಎಂದಿಗೂ ಎಲ್ಲಿಯೂ ಫಲಿಸದು) ಎಂದು ಮಹಾಭಾರತಾನುಶಾಸನಿಕಪರ್ವದ ೬ ನೆಯಧ್ಯಾಯದಲ್ಲಿ ಉಕ್ತವಾಗಿದೆ.

ಆದುದರಿಂದ ಬುದ್ಧಿಯಲ್ಲಿ ಯಾವವಿವೇಚನೆಯು ಇಲ್ಲದೆ ಹಣೆಯ ಬರಹ, ಕರ್ಮಗತಿ, ಕಲಿಕಾಲ, ಎಂದಿಂತಹ ದೊಡ್ಡ ದೊಡ್ಡ ಮಾತುಗಳನ್ನು ಎಲ್ಲಕ್ಕೂ ಒಂದೇವಿಧವಾಗಿ ಹೇಳುತ್ತಾ ಮೊದಲೇ ತೂಕಡಿಸುತ್ತಿದ್ದವರಿಗೆ ಹಾಸಿಕೆ ಹಾಸಿಕೊಟ್ಟಂತೆ ಈ ಕಾಲದ ವಟುಗಳಿಗೆ ನಾಸ್ತಿಕ್ಯವು ಕಲಿಸದೆಯೇ ಬರುತ್ತಿರುವಾಗ ಇನ್ನೂ ಇಷ್ಟು 'ಯೋಗೋನಷ್ಟಃ ಪರಂತಪ' ಎಂದಿದೆಯಾದುದರಿಂದ "ಈ ಕಾಲದಲ್ಲಿ ಆಸನಪ್ರಾಣಾಯಾಮಾದಿ ಕರ್ಮಯೋಗವೆಲ್ಲಿ ಫಲಿಸುತ್ತದೆ" ಎಂದು ತಾವೂಮಾಡದೆ ಅವರಿಂದಲೂ ಮಾಡಿಸದೆ ಮುಕ್ತಾಕ್ಷರಿಸಿದ ಮಹಾನುಭಾವರನ್ನು ಕುರಿತು ಇಷ್ಟೇ ಬೇಡುವೆನು. "ತಾವು ಕಲಿಪುರುಷ ಪ್ರೇ

ಸ್ಥಿತರಾಗಿ ಕರ್ಮಮಾಡದಿದ್ದರೂ “ಸಏವಾಯಂಮಯಾತೇ ಽದ್ಯ ಯೋಗಃ ಪ್ರೋಕ್ತಃ ಪುರಾತನಃ” ಎಂದು ಮುಂದಿನವಾಕ್ಯವನ್ನು ಹೇಳಿ ಶ್ರೀಕೃಷ್ಣನು ಆ ಯೋಗವನ್ನುದ್ಧಾರಮಾಡಿರುವುದರಿಂದ ಶ್ರದ್ಧೆಯಿಂದ ಮಾಡತಕ್ಕವರಿಗೆ ಅವಶ್ಯವಾಗಿ ಫಲಕೊಡುವನೆಂದು ಕರ್ಮಮಾಡುವವರನ್ನು ಪ್ರೋತ್ಸಾಹಪಡಿಸಬೇಕೆಂದೇ” ಇನ್ನೂ ಕೆಲವರು “ನಮ್ಮಸ್ವಾಮಿ ‘ಏಧಮಾನದ್ವಿಟ್’ ಈ ಕಲಿಕಾಲದಲ್ಲಿ ಸತ್ಕರ್ಮ ಮಾಡಲೀಯನು” ಎಂದು ಎಲ್ಲಕ್ಕು ಕಲಿಯನ್ನು ನೆಪಮಾಡಿಕೊಂಡು ತಮ್ಮ ಸ್ವೈರಾಚಾರವನ್ನು ಮಾತ್ರ ನಿರ್ವಿಚಾರದಿಂದ ಆಚರಿಸುವರಷ್ಟೆ. ಅಂತಹವರಿಗೆ ಇಂತು ಸೂಚಿಸುವೆನು.

ವೈದ್ಯನು ವಿಷವನ್ನು ಅಮೃತವಾಗಿ ಉಪಯೋಗಿಸಿಕೊಳ್ಳುವಂತೆಯೂ, ವಿದ್ಯಾಮಹಿಮೆಯಿಂದ ಸಾಮುದ್ರೋದಕವನ್ನು ಸಿಹಿನೀರುಮಾಡಿಕೊಳ್ಳುವಂತೆಯೂ, ದುರ್ವ್ಯಾಯಃಉದಕಗಳನ್ನು ಶೋಧಿಸಿ ಸರ್ವಾನುಕೂಲವಾಗಿಸುವಂತೆಯು, ದುಷ್ಟಕ್ರೂರಜಂತುಗಳನ್ನು ವಿವಿಧೋಪಾಯಗಳಿಂದ ಸ್ವಾಧೀನಪಡಿಸಿಕೊಳ್ಳುವಂತೆಯೂ, ಬುದ್ಧಿಶಾಲಿಗಳು ಬಹುಮಂದಿ ಬಹೂಕರಿಸಿದರೆ ಆ ಸರ್ವನಿಯಾಮಕ ಕಾಲಾತ್ಮಕಪರಮಾತ್ಮನೇ ನಾವು ಸದಭಿಸಂಧಿಯಿಂದ ಪ್ರಾರಂಭಿಸುವ ಸತ್ಕಾರ್ಯಗಳಿಗೆಲ್ಲಕ್ಕೂ ಯಥಾಯೋಗ್ಯಂ ಸಹಾಯನಾಗಿದ್ದು ನಮ್ಮ ದುಷ್ಕರ್ಮ ದುರ್ದೈವಗಳನ್ನೂ ಕೂಡ ಸುಕರ್ಮ ಸುದೈವವನ್ನಾಗಿ ಮಾಡಿ ನಮ್ಮಿಂದ ಮಾಡಲ್ಪಡುವ ಯಜ್ಞದಾನತಪೋರೂಪ ಕರ್ಮಗಳಿಗನುಗುಣವಾಗಿ ಫಲಗಳನ್ನು ಕೊಡುವನೆಂಬುದೇ ಸಿದ್ಧಾಂತಿತವಾಗಿದೆ.

ಹೀಗಿರುವಲ್ಲಿ ನಾವು ತೊಡಗುವ ಒಂದೊಂದು ಕಾರ್ಯದಲ್ಲಿಯು ತತ್ತತ್ಕರ್ಮಸ್ವರೂಪ ವಿಚಾರವೇ ಇಲ್ಲದೆ ದೈವಪುರುಷಕಾರವಿವೇಚನೆ ಮಾಡಿಕೊಳ್ಳದೆ “ಗತಾನುಗತಿಕೋಲೋಕಃ” ಎಂಬಂತೆ ಪಂಡಿತಪಾಮರಸಾಧಾರಣವಾಗೆ ಆರಂಭಿಸಿ ಅದರ ಫಲಪರ್ಯವಸಾನಪರ್ಯಂತವಾಗಿ ದೃಷ್ಟಿಇಡದೆ ನಡುವೆ ನಡುವೆ ಕಾರ್ಯಾಂತರದಿಂದಲೂ, ಭ್ರಮ, ಪ್ರಮಾದ, ಉಪೇಕ್ಷೆ, ಆಲಸ್ಯ, ಅಶ್ರದ್ಧೆ, ಅಜ್ಞಾನ, ಅಸ್ತಿಕ್ಯಾಭಾವಾದಿಗಳಿಂದಲೂ, ‘ಅವಿಧಿನಾಕೃತಮಕೃತಂ’ ಎಂಬಂತೆ ಕಾರ್ಯಭಂಗ ಮಾಡಿಕೊಂಡು ಉದ್ದಿಷ್ಟ ಫಲಕ್ಕೆ ವಿಪರೀತವಾದ ದುಷ್ಫಲವನ್ನು ಹೊಂದಬೇಕಾಗಿರುವುದರಿಂದ ಸರ್ವಸಮ ಸರ್ವಸಾಕ್ಷಿ ಸರ್ವನಿಯಾಮಕನೆನಿಸಿದ ನಮ್ಮೊಳಗೂ ಹೊರಗೂ ನಿತ್ಯಸನ್ನಿಹಿತನಾಗಿರುವ ಸ್ವಾಮಿಯು “ಯಥಾ ರಾಜೇವ ದೇವರಾಟ್” ಎಂಬಂತೆ ತತ್ತತ್ಕಾರ್ಯಾನುಗುಣವಾಗಿ ಫಲಾನುಭವ ಮಾಡಿಸುವಾಗ ಆ ಕಷ್ಟವನ್ನು ಸಹಿಸಲಾರದ ಕಾಲದಲ್ಲಿ ದುಷ್ಕಾಲ ದುಷ್ಕರ್ಮ ದುರ್ದೈವ ಎಂದು ದೂಷಿಸುವುದು ಕೂಡ ಅವಿಚಾರಿತರಮಣೀಯವು ಲೋಕಸಾಧಾರಣಾದರಣೀಯವೂ ಆಗಿದೆ.

ಆ ಸ್ವಾಮಿಯು ವೈಷಮ್ಯ ನೈರ್ಘೃಣ್ಯಾದಿ ದೋಷಗಳಿಲ್ಲದವನಾದುದರಿಂದ ಅನ್ಯಾಯವಾಗಿ ನೀನು ಮಾಡದ ಕರ್ಮದ ಫಲವನ್ನು ಅನುಭವಿಸು ಎಂದು ಪ್ರಾಕೃತದುರ್ಜನನಂತೆ ಎಂದಿಗೂ ವಿಧಿಸಲಾರನು. ನಿರ್ಲಿಪ್ತನಾದುದರಿಂದ ನಮ್ಮ ಸುಖದುಃಖಗಳಿಗೆ ಆತನು ಭಾಗಿಯೂ ಆಗಲಾರನು. ಸ್ವಭಾವವೆನಿಸಿದ ಪ್ರಕೃತಿವಶದಿಂದ* ಅಜ್ಞಾನಮೋಹಿತರಾಗಿ ಮಾಡಿದ ಕರ್ಮದ ಫಲವನ್ನು ನಾವೇ ಅನುಭವಿಸಬೇಕಾಗಿದೆ. ಈ ವಿಷಯವು ಇಹದಲ್ಲೆಂತೋ ಪರದಲ್ಲಿಯೂ ಹಾಗೆಯೇ ಸರಿ. ಆದರಿಂದ ಯಾವಕರ್ಮವೇ ಆಗಲಿ ತತ್ತದುಕ್ತ ಫಲವನ್ನು ಪಡೆಯಬೇಕಾದರೆ ಆ ಕರ್ಮಸ್ವರೂಪವನ್ನು ಚೆನ್ನಾಗಿ ತಿಳಿದು ಯಥಾವಿಧಿಯಾಗಿ ಅನುಷ್ಠಿಸಿದ ಹೊರತು ತತ್ಫಲಪ್ರಾಪ್ತಿಯಾಗಲಾರದು. ದೃಷ್ಟಫಲಕವಾದ ಲೌಕಿಕ ಕರ್ಮಗತಿಯೇ ಹೀಗಿರುವಾಗ ಇನ್ನು ಕಾಲಾಂತರ ಫಲದಾಯಿಯಾದ ಅದೃಷ್ಟ ಫಲಕವಾದ ಬಹೂತ್ಸರ್ಗಾಪವಾದಗಳುಳ್ಳ ವೈದಿಕ ಕರ್ಮವಿಷಯವನ್ನು ಕೇಳಬೇಕೆ? ಮತ್ತು ಆ ವೈದಿಕ ಕರ್ಮವು ದೇವತೋದ್ದೇಶಕವಾದುದರಿಂದ ಅದು ವಿಧಿಪೂರ್ವಕವಾಗದೆ ಅನ್ಯಥಾಕೃತವಾದರೆ ವೃತ್ರಾಸುರನು ಇಂದ್ರನಂ ಗೆಲ್ಲಬೇಕೆಂದು ಯಾಗಾರಂಭಮಾಡಿ ಒಂದು ಸ್ವರದೋಷಮಾತ್ರದಿಂದ ತಾನೇ ಹತನಾದಂತೆ ದುಷ್ಫಲಪರಂಪರೆಗಳೇ ಪ್ರಾಪ್ತವಾಗುತ್ತವೆ. ಸುಫಲವೇನೋ ಬೇಡ. ಕೆಟ್ಟ ಫಲವೇಕೆ? ಯಥಾಸ್ಥಿತವಾಗಿ 'ಜನ್ಮನಾ ಜಾಯತೇ ಶೂದ್ರಃ' ಎಂದು ಪೂರ್ವದ ಶೂದ್ರತ್ವವಾದರೂ ಇರಲೆಂದರೆ ಕ್ಷತವ್ರತನಾಗುವುದರಿಂದ ಹಾಗೂ ಇರುವುದಕ್ಕಿಲ್ಲದೆ ಈ ಕಾಲದ ಬ್ರಹ್ಮೋಪದೇಶವು ಅನ್ಯಥಾಪ್ರಯುಕ್ತ ಬ್ರಹ್ಮಾಸ್ತ್ರದಂತೆ ಪ್ರಯೋಕ್ತ್ರರನ ದೋಷದಿಂದ ಅವನನ್ನೂ ಅವನ ಕುಲವನ್ನೂ ನಾಶಮಾಡುತ್ತದೆ ನೋಡಿರಿ.

ಶ್ಲೋ॥ ಮನ್ತ್ರೋ ಹೀನಸ್ವರತೋ ವರ್ಣತೋ ವಾ ।
ಮಿಥ್ಯಾ ಪ್ರಯುಕ್ತೋ ನ ತ ಮರ್ಥ ಮಾಹ ॥
ಸ ವಾಗ್ವಜ್ರೋ ಯಜಮಾನಂ ಹಿನಸ್ತಿ ।
ಯಥೇಂ ದ್ರಶತ್ರು ಸ್ವರತೋಽಪರಾಧಾತ್ ॥

(ಯಾವ ಮಂತ್ರವಾದರೂ ಅಪಸ್ವರ, ವರ್ಣಲೋಪ, ದ್ರುತೋಚ್ಚಾರಣಾದಿಗಳಿಂದ ವ್ಯತ್ಯಸ್ತವಾಗಿ ಪ್ರಯುಕ್ತವಾದರೆ ಅದರ ಪ್ರಯೋಜನವನ್ನುಂಟು

* ಗೀ॥ ನ ಕರ್ತೃತ್ವಂ ನ ಕರ್ಮಾಣಿ ಲೋಕಸ್ಯ ಸೃಜತಿ ಪ್ರಭುಃ ।
ನ ಕರ್ಮಫಲಸಂಯೋಗಂ ಸ್ವಭಾವಸ್ತು ಪ್ರವರ್ತತೇ ॥೧॥
ನಾದತ್ತೇ ಕಸ್ಯಚಿತ್ಪಾಪಂ ನಚೈವ ಸುಕೃತಂ ವಿಭುಃ ।
ಅಜ್ಞಾನೇ ನಾವೃತಂ ಜ್ಞಾನಂ ತೇನ ಮುಹ್ಯಂತಿ ಜಂತವಃ ॥೨॥

ವ್ಹಾಡದು. ಅಷ್ಟುಮಾತ್ರವಲ್ಲದೆ ಅದು ವಾಗ್ರೂಪ ವಜ್ರಾಯುಧವಾಗಿ ಸ್ವರದೋಷದಿಂದ ಇಂದ್ರಶತ್ರುವಾದ ವೃತ್ರನನ್ನು ಕೊಂದಂತೆ ಪ್ರಯೋಗಿಸಿದವನನ್ನೇ ಹಿಂಸಿಸುವುದು.)

ಸರ್ವೋತ್ತಮವಾದ ವೇದಮಂತ್ರವೂ ಸಾತ್ವಿಕಸ್ವಭಾವದ ದೇವತೆಗಳೂ ಕೆಡಿಸುವುದುಂಟೆ ಎನಲಾಗದು. ಅದು ಅವರ ದೋಷವಲ್ಲ. ಅವು ಉತ್ತಮಗಳು, ಸವೀರ್ಯಗಳು, ಆಗಿರುವುವು. ಆದುದರಿಂದ ಅವುಗಳನ್ನು ತಿಳಿಯದೆ ಉಪಯೋಗಿಸುವನಿಗೆ ಕ್ಷೀರ, ಜಲ, ಅಗ್ನಿ, ಶಸ್ತ್ರಾದಿಗಳಂತೆ ವಿಪರೀತಗಳಾಗಿ ಪರಿಣಮಿಸುತ್ತವೆ. ಆ ಕ್ಷೀರಾದಿಗಳನ್ನೇ ಯಥೋಕ್ತವಾಗಿ ವಿನಿಯೋಗಿಸಿದರೆ ಆ ವಿನಿಯೋಕ್ತೃವಿಗೆ ಮಹೋಪಕಾರವಂ ಮಾಡುತ್ತವೆ. ಇಷ್ಟೇಕೆ? ಮಹಾತ್ಮರಾದ ಮಹರ್ಷಿಗಳು ಶಮದಮಾದಿ ಸದ್ಗುಣಗಣಾಲಂಕೃತರು, ತಪೋಧನರು, ವೈರಾಗ್ಯಭಾಗ್ಯಸಂಪನ್ನರು, ಆಗಿದ್ದರೂ ಮಹಾತೇಜಸ್ವಿಗಳಾದುದರಿಂದ ಅನುಗ್ರಾಹ್ಯರಾದ ಸುವಿನೀತಸಾಧುಗಳನ್ನು ಅನುಗ್ರಹಿಸಿ ಸದ್ಗತಿಯಂ ಸಂಪಾದಿಸಿಕೊಡುವರು. ದುರ್ವಿನೀತರ ದೌರಾತ್ಮ್ಯದಿಂದ ಕ್ರುದ್ಧರಾದರೆಂದರೆ "ಸಾಕ್ಷರಾ ವಿಪರೀತಾಶ್ಚೇ ದ್ರಾಕ್ಷಸಾ ಏವ ಕೇವಲಂ" ಎಂಬಂತೆ ಅಂತಹ ದುಷ್ಟರನ್ನು ನಿಗ್ರಹಿಸಿ ದುರ್ಗತಿಯಂ ಕೊಡಿಸುವರು. ಈ ವಿಷಯಕ್ಕೆ "ಅನ್ಯಮಿಂದ್ರಂ ಕರಿಷ್ಯಾಮಿ ಲೋಕೋ ವಾ ಸ್ಯಾದನಿಂದ್ರಕಃ" ಎಂದು ಹೇಳಿದ ವಿಶ್ವಾಮಿತ್ರ ಮಹರ್ಷಿಗಳ ವೀರ್ಯವೇ ನಿದರ್ಶನವು. ಆದುದರಿಂದ ಲೋಕದಲ್ಲಿ ಸಾಮಾನ್ಯವಾಗಿ ಸವೀರ್ಯ ಪುರುಷನಾಗಲಿ, ವೀರ್ಯವನ್ಮಂತ್ರಾದಿಗಳಾಗಲಿ, ವೀರ್ಯವದ್ವಸ್ತುವೇ ಆಗಲಿ, ಅವರವರ ಶಕ್ತಿಯನ್ನರಿತು ಸರಿಯಾಗಿ ವಿನಿಯೋಗಿಸಿದರೆ ಅನೇಕ ಕಾರ್ಯಕ್ಷಮವಾಗುವುವು. ಅರಿಯದೆ ಅನ್ಯಥೋಪಸೇವನೆ ಮಾಡಿದರೆ ವಿಪರೀತಫಲವೇ ಸಿದ್ಧವು. ಹೀಗೆಯೇ ಲೋಕದಲ್ಲಿ ನಡೆಯುವ ವಾಯ್ವಾದಿ ಕಾರ್ಯಗಳೆಲ್ಲವೂ ವೀರ್ಯಕೃತವೆಂದೇ ತಿಳಿಯಬೇಕು.

ಶ್ಲೋ॥ ನಾವೀರ್ಯಂ ಕುರುತೇ ಕಿಂಚಿತ್ ಸರ್ವಾ ವೀರ್ಯಕೃತಾ ಕ್ರಿಯಾ।
ತೀಕ್ಷ್ಣಂ ರೂಕ್ಷಂ ಮೃದು ಸ್ನಿಗ್ಧಂ ಲಘೂಷ್ಣಂ ಗುರು ಶೀತಲಂ॥
ವೀರ್ಯ ಮಷ್ಟವಿಧಂ ಕೇಚಿತ್ ಕೇಚಿದ್ದ್ವಿವಿಧ ಮಾಸ್ಥಿತಾಃ।
ಶೀತೋಷ್ಣ ಮಿತಿ ವೀರ್ಯಂತು ಕ್ರಿಯತೇ ಯೇನ ಯಾ ಕ್ರಿಯಾ॥
ನಾನಾತ್ಮ ಕಮಪಿ ದ್ರವ್ಯ ಮಗ್ನೀ ಷೋಮೌ ಮಹಾಬಲೌ।
ವ್ಯಕ್ತಾವ್ಯಕ್ತಂ ಜಗದಿವ ನಾತಿಕ್ರಾಮತಿ ಜಾತು ಚಿತ್॥

ಎಂದು ಆತ್ರೇಯ ಮಹರ್ಷಿಗಳು ಹೇಳಿದ್ದಾರೆ. ಇದರ ವಿವರಣವು ಸದ್ವೈದ್ಯರತ್ನಾವಳಿಯ ಹಿತಾಹಿತಸರದಲ್ಲಿ ವಿಸ್ತಾರವಾಗಿ ಹೇಳಲ್ಪಟ್ಟಿದೆ. ಇದು ಸರ್ವ

ರಿಂದಲೂ ಸದಾಸ್ಮರಣೀಯವಾದ ವಿಷಯವೆಂದು ತಿಳಿದು ಪ್ರಸಕ್ತಾನು ಪ್ರಸಕ್ತಿಯಿಂದ ಇಲ್ಲಿ ಸೂಚಿಸಿರುವೆನು.

ಪ್ರಕೃತದಲ್ಲಿ ಆ ವೀರ್ಯವದ್ವಿಶ್ವಾಮಿತ್ರಾತ್ರಿವಶಿಷ್ಠಾದಿ ಮಹಾಮುನಿ ಗೋತ್ರಾಪತ್ಯರೆನಿಸಿ ನಿತ್ಯಕರ್ಮಾನುಷ್ಠಾನಾಧಿಕಾರಿಗಳಾಗಿ, ತದ್ವಿಶ್ವಾಮಿತ್ರ ಗಾಯತ್ರೀಮಂತ್ರ ಜಪ ಪರಾಯಣರೂ ಆಗಿ, "ಅಧೀತಾನಾಂ ಛಂದಸಾಂ ಸವೀರ್ಯತ್ವಾಯ; ಅಧ್ಯೇಷ್ಯಮಾಣಾನಾಂ ಛಂದಸಾಂ ಸವೀರ್ಯತ್ವಾಯ" ಎಂದು ಸಂಕಲ್ಪಿಸಿ ಪ್ರತಿಸಂವತ್ಸರ ಶ್ರಾವಣಿಯಲ್ಲಿಯು ಮಾಡುವ ಉಪಾಕರ್ಮವೇ ಮೊದಲಾದ ಶ್ರೌತಸ್ಮಾರ್ತಕರ್ಮ ಧರ್ಮಾನುಷ್ಠಾನ ನಿಷ್ಠಾಗರಿಷ್ಠರೆಂಬುದೇ ಮುಂತಾದ ಸತ್ಕೀರ್ತಿಯಂಪಡೆದ ಪ್ರಾಚೀನಾನೂಚಾನಾಚಾರ್ಯವರ್ಯ ಸಂತತಿಯೆನಿಸಿದೀ ಬ್ರಾಹ್ಮಣ್ಯವು ಈಗ ನಿರ್ವೀರ್ಯವಾಗಿ ಅತಿಕ್ಷುದ್ರ ಪಾಮರಪ್ರಾಣಿಗಳಂತೆ ಅಪಮೃತ್ಯು ದೀರ್ಘರೋಗಾದಿವಶರಾಗಿರುವುದಂ ನೋಡಿದರೆ, ಸಾಕ್ಷಾತ್ಕಲ್ಯಾವಿಷ್ಟರಾಷ್ಟ್ರಪ್ರಭಾವವೆಂದು ಹೇಳಬಹುದಾಗಿದೆ. ಆದರೂ ಕೇವಲ ಕಲಿನಿಮಿತ್ತ ವೊಂದೇ ಅಲ್ಲ. ತದ್ವ್ಯಾಜದಿಂದ ನಮ್ಮ ಆಲಸ್ಯಾಶ್ರದ್ಧಾಭ್ರಮಪ್ರಮಾದಾದ್ಯನೇಕ ದೋಷಗಳಿಂದ ನಡೆಯಿಸುತ್ತಿರುವ ದುರಾಚಾರಗಳೂ ಸೇರಿವೆಯೆಂದೇ ತೋರುತ್ತಿದೆ. ಇಲ್ಲದಿದ್ದರೆ ಈಗ ೫೦—೪೦—೩೦ ವರ್ಷಗಳ ಹಿಂದೆ ಬ್ರಾಹ್ಮಣ್ಯದಲ್ಲಿದ್ದ ಮಂತ್ರಯೋಗಾದಿಸಿದ್ಧಿಗಳ ಅಲ್ಪಶಕ್ತಿಯಾದರೂ ಇಷ್ಟು ತ್ವರೆಯಾಗಿ ನಷ್ಟವಾಗಬೇಕೆ? ಅಲ್ಪಾಲ್ಪವಾಗಿ ತಚ್ಛಕ್ತಿಯ ಲಾಂಛನವಾದರೂ ತೋರುತ್ತಿರಬಹುದಾಗಿತ್ತಲ್ಲವೆ? ಅದರಿಂದ ನಮ್ಮ ನಾಸ್ತಿಕ್ಯಾದಿದೋಷವು, ವರ್ಣಾಶ್ರಮಾಚಾರ ವಿಚಾರಕ ವೀರನೃಪರಾಗಲಿ, ಏತತ್ಕಾಲಾನುಸಾರಿಯಾದ ಧರ್ಮಾಧರ್ಮ ವ್ಯವಸ್ಥಾಪಕ ದ್ವಿಜಸಮಾಜವಾಗಲಿ, ಇಲ್ಲದಿರುವುದುಕೂಡ ತದ್ಬ್ರಾಹ್ಮಣ್ಯವೀರ್ಯಲೋಪಕ್ಕೆ ಕಾರಣವಾಗಿದೆ. ಆದುದರಿಂದಲೆ ವಿಪ್ರನು ರೋಗ, ಅಕಾಲಮರಣ, ಇತ್ಯಾದಿ ವಿಪತ್ತಿಗೆ ಗುರಿಯಾಗಿದ್ದಾನೆ. ಅದೆಂತೆಂದರೆ:—

ಮನು॥ ಅನಭ್ಯಾಸೇನ ವೇದಾನಾ ಮಾಚಾರಸ್ಯ ಚ ವರ್ಜನಾತ್ ।
ಆಲಸ್ಯಾ ದನ್ನ ದೋಷಾಚ್ಚ ಮೃತ್ಯು ರ್ವಿಪ್ರಾ ಜಿಘಾಂಸತಿ ॥

(ಸಾಂಗವೇದಾಧ್ಯಯನವಿಲ್ಲದುದರಿಂದಲೂ; ಮೃತ್ತಿಕಾಶೌಚ, ಪ್ರಾತಃಸ್ನಾನ, ಸಂಧ್ಯಾವಂದನ, ಅಗ್ನಿಕಾರ್ಯ, ಸತ್ಯಭಾಷಣಾದಿ ನಿಯಮಾಚಾರ ಲೋಪದಿಂದಲೂ; ಶಕ್ತಿಯಿದ್ದರೂ ಅವಶ್ಯಕರ್ತವ್ಯವಾದಂತಹ ಸ್ವವರ್ಣಾಶ್ರಮ ಧರ್ಮಾಚರಣವಿಷಯದಲ್ಲಿ ಅನುತ್ಸಾಹ, ಅಶ್ರದ್ಧಾರೂಪವಾದ ಆಲಸ್ಯದಿಂದಲೂ; ಅಭಕ್ಷ್ಯಭಕ್ಷಣ, ಅಪೇಯಪಾನ, ಅದರಲ್ಲಿಯೂ ದುಃಖಶೋಕಾಮಯ

ಪ್ರಧಗಳಾದ ರಾಜಸತಾಮಸಾಶನಗಳು, ಅತ್ಯಶನ, ಅಜೀರ್ಣಾಶನ, ಅಧ್ಯಶನ, ಸಮಶನ, ವಿಷಮಾಶನ, ವಿರುದ್ಧ ವೀರ್ಯಾಶನ, ಮುಂತಾದ ಆಯುರ್ಹಾನಿಕರಗಳಾದ ತಿಂಡಿಯ ದೋಷದಿಂದಲೂ; ಮೃತ್ಯುವು ಬ್ರಾಹ್ಮಣರನ್ನು ಕೊಲ್ಲಲೆಳಸುವುದು.)

ಎಂದರೆ ವಿಪ್ರನು ತನಗೆ ವಿಹಿತವಾದ ಅವಶ್ಯ ಕರ್ತವ್ಯಧರ್ಮವನ್ನು ಬಿಟ್ಟು ನಿಷಿದ್ಧವಾದ ಅಕರ್ತವ್ಯಾಧರ್ಮವನ್ನು ಆಚರಿಸುವುದರಿಂದ ಮನೋದೇಹಗಳು ಪಾಪರೋಗಪೀಡಿತಗಳಾಗಲು ಆಯುಃಕ್ಷಯವಾಗುವುದರಿಂದ ಆ ವಿಪ್ರಗೆ ಅಕಾಲಮರಣವೇ ಸಂಭವಿಸುವುದೆಂದು ಮನ್ವಾಶಯವು. ಇಂತಹ ಅಧರ್ಮವು ನಡೆಯದಂತೆ ಪೂರ್ವದಲ್ಲಿಯೇ ಪಾರ್ಥಿವನು ಪಾಲಿಸುವನಾಗಿರಬೇಕೆಂದು; ತಪ್ಪಿದರೆ ತದ್ಧರ್ಮಲೋಪದಿಂದುಂಟಾಗುವ ಪಾಪವು ರಾಜಗೆ ಪ್ರಾಪ್ತವಾಗುವುದೆಂದು ಮನ್ವಾದಿಸ್ಮೃತಿಗಳುದ್ಘೋಷಿಸುತ್ತಿವೆ.

ಮನು॥ ಯಸ್ಮಾ ದೇಷಾಂ ಸುರೇಂದ್ರಾಣಾಂ ಮಾತ್ರಾಭ್ಯೋ ನಿರ್ಮಿತೋ ನೃಪಃ।

ಸ ರಾಜಾ ಪುರುಷೋ ದಂಡಃ ಸ ನೇತಾ ಶಾಸಿತಾ ಚ ಸಃ ॥
ಚತುರ್ಣಾ ಮಾಶ್ರಮಾಣಾಂ ಚ ಧರ್ಮಸ್ಯ ಪ್ರತಿಭೂಃ ಸ್ಮೃತಃ।
ಸ್ವೇ ಸ್ವೇ ಧರ್ಮೇ ನಿವಿಷ್ಟಾನಾಂ.ಸರ್ವೆಷಾ ಮನುಪೂರ್ವಶಃ ॥
ವರ್ಣಾನಾ ಮಾಶ್ರಮಾಣಾಂ ಚ ರಾಜಾ ಸೃಷ್ಟೋ ಽಭಿರಕ್ಷಿತಾ ॥
ಕೃತಂ ತ್ರೇತಾಯುಗಂ ಚೈವ ದ್ವಾಪರಂ ಕಲಿರೇವ ಚ।
ರಾಜ್ಞೋ ವೃತ್ತಾನಿ ಸರ್ವಾಣಿ ರಾಜಾಹಿ ಯುಗ ಮುಚ್ಯತೇ ॥
ಕಲಿಃ ಪ್ರಸುಪ್ತೋ ಭವತಿ ಸ ಜಾಗ್ರದ್ದ್ವಾಪರಂ ಯುಗಂ।
ಕರ್ಮ ಸ್ವಭ್ಯುದ್ಯತ ಸ್ತ್ರೇತಾ ವಿಚರಂ ಸ್ತು ಕೃತಂ ಯುಗಂ ॥

ವರ್ಣಾಶ್ರಮ ಧರ್ಮದಲ್ಲಿರತಕ್ಕವರನ್ನು ಪ್ರೋತ್ಸಾಹಿಸುತ್ತ ಪಾಲಿಸುವುದಕ್ಕೂ, ತಪ್ಪಿದವರನ್ನು ಶಿಕ್ಷಿಸುವುದಕ್ಕೂ, ಅಷ್ಟದಿಕ್ಪಾಲಾಂಶಗಳಿಂದ ರಾಜನನ್ನು ಬ್ರಹ್ಮನು ನಿರ್ಮಿಸಿರುವನು. 'ರಾಜಾ ಕಾಲಸ್ಯಕಾರಣಂ' ಎಂದು ಇರುವುದರಿಂದ ಕೃತ ತ್ರೇತಾದಿಯುಗಕಾರ್ಯಗಳು ರಾಜನ ಚೇಷ್ಟಾವಿಶೇಷಗಳಾದ ನಡವಳಿಕೆಗಳಾಗಿರುವುದರಿಂದ ರಾಜನೇ ಯುಗವೆನಿಸುತ್ತಾನೆ. ಹೇಗೆಂದರೆ:— ಆ ರಾಜನು ಜಾಗರೂಕನಾಗಿರುವುದೇ ದ್ವಾಪರಯುಗವೆಂದು; ಸ್ವವಿಹಿತ ಕರ್ಮೋದ್ಯುಕ್ತನಾಗುವುದೇ ತ್ರೇತಾಯುಗವೆಂದು; ಯಥಾವಿಧಿಯಾಗಿ ಸ್ವಧರ್ಮಾನುಷ್ಠಾನಪರನಾಗಿ ಸದಾಪ್ರಜಾಪಾಲನಾರ್ಥವಾಗಿ ತಿರುಗುತ್ತಿರುವುದೇ ಕೃತಯುಗವೆಂದು; ಇದೊಂದೂ ಇಲ್ಲದೆ ಆಲಸ್ಯಾಜ್ಞಾನಾದಿಗಳಿಂದ ಧರ್ಮವಿಷಯದಲ್ಲಿ ನಿರುದ್ಯೋಗನಾಗಿ ನಿದ್ದೆಹೋಗುತ್ತಿರುವುದೇ ಕಲಿಯುಗವೆಂದು ಭಾವಿಸಬೇಕೆಂದು ಮನು ತಾತ್ಪರ್ಯವು.

ಅದರಿಂದ ಈ ಕಾಲದಲ್ಲಿ ಪ್ರಭುಗಳು ಈ ವರ್ಣಾಶ್ರಮ ಧರ್ಮವಿಷಯದಲ್ಲಿ ತಾವಾಗಿಯೇ ಪ್ರವರ್ತಿಸದಿದ್ದರೂ ತತ್ತತ್ಸಂಘದವರು ಸ್ವಧರ್ಮ ಸಂರಕ್ಷಣಾರ್ಥವಾಗಿ ತಕ್ಕ ಪ್ರಯತ್ನಗಳನ್ನು ಮಾಡಿಕೊಂಡು ಸಮಯೋಚಿತವಾದ ಸಾಹ್ಯವನ್ನು ಬೇಡಿದರೆ ಮಾಡದೇ ಇರರು. ಈಗ ಕ್ರಿಶ್ಚಿಯಾನಿಟಿಯೇ ಮೊದಲಾದ ಸಂಘದವರಿಗೆ ಸಾಹಾಯ್ಯವನ್ನು ತೋರಿಸುತ್ತಿರಲಿಲ್ಲವೆ? ಸರ್ವಸಮರಾದುದರಿಂದ ಹಾಗೆಯೇ ನಾವೂ ಸರಿಯಾದ ಸದಸ್ಸುಮಾಡಿಕೊಂಡು, ವಿದ್ಯಾಶಾಲೆಗಳನ್ನು ಏರ್ಪಡಿಸಿಕೊಂಡಪಕ್ಷದಲ್ಲಿ ನಮಗೂ ಸಹಾಯರಾಗುವುದರಲ್ಲಿ ಸಂದೇಹವೇ ಇಲ್ಲ. ಆಗಲಿ, ಪ್ರಕೃತದಲ್ಲಿ ನಾವೇನೇನು ಅವರನ್ನು ಕುರಿತು ಪ್ರಾರ್ಥಿಸಬೇಕೋ ಅದನ್ನು ಮೊದಲು ನಮ್ಮೊಳಗೆ ನಾವು ಚಿಂತಿಸಿಕೊಂಡ ಬಳಿಕ ನಮ್ಮಿಂದಾಗಬಹುದಾದುದನ್ನು ನಾವು ನೆರವೇರಿಸಿಕೊಂಡು, ನಮಗೆ ಅಶಕ್ಯವಾದುದನ್ನು ಕುರಿತು ಮೊದಲು ಶ್ರೀಮತ್ಪೂಜ್ಯಪಾದರಾದ ಪೂರ್ವಾಚಾರ್ಯಪಟ್ಟಭದ್ರ ಪೀಠಾಧಿಪತಿಗಳು ಏತದರ್ಥವಾಗಿಯೇ ಬದ್ಧಕಂಕಣರಾಗಿರುವುದರಿಂದ ಅವರನ್ನು ಪ್ರಾರ್ಥಿಸಿ, ಅವರಿಂದಾಗುವ ಸಾಹಾಯ್ಯವನ್ನೂ ಪಡೆದುಕೊಂಡು, ಬಳಿಕ ಪ್ರಭುಗಳನ್ನು ಬೇಡುವುದುಚಿತವೆಂದು ತಿಳಿದು ಈಗ ಮಹಾಜನರ ಸನ್ನಿಧಿಯಲ್ಲಿ ಅಲ್ಪಜ್ಞನಾದ ನಾನು ಸ್ವಾನುಭವದಿಂದ ತೋರಿಬಂದ ವಿಷಯಗಳನ್ನು ಇಂತು ವಿಜ್ಞಾಪಿಸಿಕೊಳ್ಳುವೆನು. ನನಗೆ ಯಾರನ್ನೇ ಆಗಲಿ ಆಕ್ಷೇಪಿಸಬೇಕೆಂಬ ಅಭಿಪ್ರಾಯವು ಸರ್ವಥಾ ಇಲ್ಲ. ಬ್ರಾಹ್ಮಣ್ಯಕರ್ಮಾನುಷ್ಠಾನವೂ ಶೌಚಾದಿಸದಾಚಾರವೂ ಕುಲಪುತ್ರರಲ್ಲಿ ನಿಶ್ಶೇಷವಾಗುತ್ತಿಬಂದಿತೆಂಬ ವ್ಯಾಕುಲತ್ವದಿಂದ ಆಡುವ ಮಾತಿನಲ್ಲಿ ಯೇನಾದರೂ ಕಿಂಚಿದಧಿಕೋಕ್ತಿ ಕಾಣಬಂದರೆ ಗುಣಗ್ರಾಹಿಗಳಾದ ಸಜ್ಜನರು ಅದನ್ನು ಮನ್ನಿಸಿ ಮುಖ್ಯಕರ್ತವ್ಯವನ್ನು ಮನಕ್ಕೆ ತರಬೇಕೆಂದು ಬೇಡುವೆನು. ಏಕೆಂದರೆ ಬ್ರಾಹ್ಮಣ್ಯವೆಂಬುದು ಕೇವಲ ಜಾತಿಕೃತವಲ್ಲವೆಂದೂ; "ಕಾರಣಂ ಹಿ ದ್ವಿಜತ್ವೇ ತು ವೃತ್ತಮೇವ ನ ಸಂಶಯಃ; ವೃತ್ತಂ ತಸ್ಮು ಹತೋಹತಃ" ಹೀಗೆ ಕರ್ಮಾನುಷ್ಠಾನವೇ ಕಾರಣವೆಂದೂ ; ಸರ್ವಸ್ಮೃತಿಗಳೂ ಒಂದಾಗಿ ಸಾರುತ್ತಿವೆ. ಅದು ಎಂತೆನೆ:—

ಪರಾಶರ॥ ಚಿತ್ರಕರ್ಮ ಯಥಾ ನೇಕೈ ರಂಗೈ ರುನ್ಮೀ ಲ್ಯತೇ ಶನೈಃ ।
ಬ್ರಾಹ್ಮಣ್ಯಮಪಿ ತದ್ವದ್ಧಿ ಸಂಸ್ಕಾರೈ ರ್ಮಂತ್ರ ಪೂರ್ವಕೈಃ ॥೧॥

ಮನು॥ ಸ್ವಾಧ್ಯಾಯೇನ ವ್ರತೈ ರ್ಹೋಮೈ ಸ್ತ್ರೈವಿದ್ಯೇ ನೇಜ್ಯಯಾ ಸುತೈಃ।
ಮಹಾ ಯಜ್ಞೈಶ್ಚ ಯಜ್ಞೈಶ್ಚ ಬ್ರಾಹ್ಮೀಯಂ ಕ್ರಿಯತೇ ತನುಃ॥೨॥

ಅಂಗೀರಸ॥ ಜನ್ಮ ಶಾರೀರ ವಿದ್ಯಾಭಿ ರಾಚಾರೇಣ ಶ್ರುತೇನಚ ।
ಧರ್ಮೇಣ ಚ ಯಥೋಕ್ತೇನ ಬ್ರಾಹ್ಮಣತ್ವಂ ವಿಧೀಯತೇ ॥೩॥

೦ (೧. ಒಂದು ಭಾವಚಿತ್ರದ ಕೆಲಸಕ್ಕೆ ಮೊದಲು ಸುತ್ತುಗೆರೆ, ಕ್ರಮವಾಗಿ ಆಕೃತಿವಿನ್ಯಾಸ, ಬಳಿಕ ಬಣ್ಣವಿಡುವುದು, ಮುಂತಾದ ಅನೇಕ ಸಂಸ್ಕಾರಗಳು ಹೇಗೆ ಆವಶ್ಯಕಗಳೋ ಹಾಗೆಯೇ ಬ್ರಾಹ್ಮಣ್ಯವೆಂಬುದಕ್ಕೂ ಮಂತ್ರಪೂರ್ವಕವಾದ ಉಪನಯನಾದ್ಯನೇಕಸಂಸ್ಕಾರಗಳು ಆವಶ್ಯಕಗಳೆಂದು ಪರಾಶರಸ್ಮೃತಿಯಲ್ಲಿ ; ೨. ವೇದಾಧ್ಯಯನ, ಮದ್ಯಮಾಂಸವರ್ಜನಾದಿನಿಯಮ, ಸಾಯಂಪ್ರಾತರ್ಹೋಮ, ದೇವರ್ಷಿಪಿತೃತರ್ಪಣ, ದೇವಪೂಜೆ, ಗಾರ್ಹಸ್ಥ್ಯ, ಪಂಚಮಹಾಯಜ್ಞಾದಿಗಳು ; ಇವುಗಳಿಂದ ಬ್ರಾಹ್ಮಣ್ಯವು ಉಂಟುಮಾಡಲ್ಪಡುವುದೆಂದು ಮನುಸ್ಮೃತಿಯಲ್ಲಿ ; ೩. ಅಂಗೀರಸ ಸ್ಮೃತಿಯಲ್ಲಿ, ವಿಪ್ರವಂಶಜನ್ಮ, ಉಪನಯನಸಂಸ್ಕಾರ, ವೇದವಿದ್ಯೆ, ಶೌಚಾಚಾರ, ಶಾಸ್ತ್ರಾಧ್ಯಯನ, ಇನ್ನೂ ಯಥೋಕ್ತಧರ್ಮ; ಇವುಗಳಿಂದ ಬ್ರಾಹ್ಮಣತ್ವವು ವಿಧಿಸಲ್ಪಡುತ್ತಿದೆಯೆಂದು ಹೇಳಲ್ಪಟ್ಟಿದೆ.)

ಹೀಗೆ ಶಾಸ್ತ್ರೋಕ್ತಪ್ರಕಾರ ಸಂಸ್ಕೃತನಾದ ವಿಪ್ರನು ಯಥೋಕ್ತ ನಿಯಮದಿಂದ ಇದ್ದು, ಅಹಿಂಸಾದಿ *ಯಮಾನುಷ್ಠಾನದಿಂದ ಜಾತಿಸ್ಮರಣವುಳ್ಳವನಾಗುವನೆಂದು ಮನುವು, ಅ ೪ ಶ್ಲೋ॥ ೧೪೮—೧೪೯, ಅತ್ರೇಯರುಕೂಡ “ ಯದಾ ಶುದ್ಧೇನ ಸತ್ವೇನ ಸಂ ಯುಜ್ಯತೇ ತದಾ ಜಾತೀ ರತಿಕ್ರಾಂತಾಯಶ್ಚ ಸ್ಮರತಿ ;...ಪುರುಷೋಜಾತಿಸ್ಮರ ಇತ್ಯುಚ್ಯತೇ ” ಬ್ರಾಹ್ಮಣಗೆ ಸತ್ವಗುಣಪ್ರಾಧಾನ್ಯದಿಂದ ಹಿಂದಿನ ಜನ್ಮದ ಸ್ಮರಣ ಬರುವುದೆಂದು ಹೇಳಿದ್ದಾರೆ. ಇತ್ಯಾದಿ ಶುಭಲಕ್ಷವುಳ್ಳವನೇ ಭೂದೇವನೆನಿಸಿಕೊಳ್ಳುವನೆಂದೂ, ಸರ್ವಶ್ರೇಷ್ಠನಾಗುವನೆಂದೂ ಬಹುಸ್ಥಲದಲ್ಲುಂಟು. ಇದಕ್ಕೆ ಕಾರಣವು ಮನುಸ್ಮೃತಿಯಲ್ಲಿ ಹೀಗೆ ಹೇಳಲ್ಪಟ್ಟಿದೆ :—

ಶ್ಲೋ॥ ವೈಶೇಷ್ಯಾತ್ ಪ್ರಕೃತಿಜ್ಯೈಷ್ಠ್ಯಾತ್ *ನ್ನಿಯಮಸ್ಯ ಚ ಧಾರಣಾತ್।
ಸಂಸ್ಕಾರಸ್ಯ ವಿಶೇಷಾಚ್ಚ ವರ್ಣಾನಾಂ ಬ್ರಾಹ್ಮಣಃ ಪ್ರಭುಃ ॥

(ಬ್ರಹ್ಮಮುಖೋದ್ಭವತ್ವ ವಿಶೇಷದಿಂದಲೂ, ಉಪನಯನಾದಿ ಸಂಸ್ಕಾರವಿಶೇಷದಿಂದಲೂ, ಸತ್ಯಶೌಚಾಚಾರಸ್ನಾನ ಸಂಧ್ಯೋಪಾಸನಾಧ್ಯಯನೇಂದ್ರಿಯ

---

*ಯಾಜ್ಞವಲ್ಕ್ಯ॥
ಬ್ರಹ್ಮಚರ್ಯಂ ದಯಾಕ್ಷಾಂತಿ ರ್ಧ್ಯಾನಂ ಸತ್ಯಮಕಲ್ಕತಾ।
ಅಹಿಂಸಾ ಸ್ತೇಯಮಾಧುರ್ಯೇ ದಮಶ್ಚೇತಿ ಯಮಾಃ ಸ್ಮೃತಾಃ॥
ಸ್ನಾನಂ ಮೌನೋಪವಾಸೇ ಜ್ಯಾ ಸ್ವಾಧ್ಯಾಯೋಪಸ್ಥನಿಗ್ರಹಾಃ।
ನಿಯಮೋ ಗುರುಶುಶ್ರೂಷಾ ಶೌಚಾ ಕ್ರೋಧಾಪ್ರಮಾದತಾ ॥

ನಿಗ್ರಹಾದಿ ನಿಯಮವನ್ನು ನಡೆಯಿಸುವುದರಿಂದಲೂ ಎಲ್ಲಾವರ್ಣಗಳಿಗೂ ಬ್ರಾಹ್ಮಣನು ಪ್ರಭುವಾಗಿದ್ದಾನೆ.)

ಹೀಗೆ ಸಂಸ್ಕೃತನಾದ ಬ್ರಾಹ್ಮಣನು ಯಜ್ಞದಾನ ತಪೋರೂಪ ಸ್ವಕರ್ಮ ನಿರತನಾಗಿದ್ದರೆ ಸರ್ವಭಕ್ಷಕವಾದ ಅಗ್ನಿಯಂತೆ ತಾನು ಶುದ್ಧನಾಗಿರುವುದಲ್ಲದೆ ತನ್ನನ್ನಾಶ್ರಯಿಸಿದವರ ಪಾಪವನ್ನು ಕಳೆದು ಪವಿತ್ರರನ್ನಾಗಿ ಮಾಡುವಷ್ಟು ಶಕ್ತನಾಗಿರುತ್ತಾನೆ. ಇಂತಹ ಶಕ್ತಿಯು ವೇದಾಧ್ಯಯನದಿಂದಲೂ, ಮುಖ್ಯವಾಗಿ ನಿಷಿದ್ಧಕರ್ಮ ತ್ಯಾಗ ಪೂರ್ವಕವಾದ ವೇದೋಕ್ತ ಕರ್ಮಾನುಷ್ಠಾನದಿಂದಲೂ ಏರ್ಪಡತಕ್ಕದು. ಅದಿಲ್ಲದಮೇಲೆ ದಾರುಮವಾದ ಆನೆ, ಚರ್ಮಮಯವಾದ ಮೃಗ, ಹೇಗೋ ಹಾಗೆ ವೇದವಿಲ್ಲದ ವಿಪ್ರನು ನಾಮಧಾರಕನಾಗಿರುತ್ತಾನೆ. ಬ್ರಹ್ಮವಂ (ವೇದ, ತತ್ತ್ವ, ತಪಸ್ಸು, ಪರಬ್ರಹ್ಮ) ಬಲ್ಲವನೆಂಬ ಯೋಗರೂಢಿಹೋಗಿ ಜನಶೂನ್ಯಗ್ರಾಮಕ್ಕೂ ಜಲರಹಿತಕೂಪಕ್ಕೂ ಗ್ರಾಮ ಕೂಪ ಸಂಜ್ಞೆ ಇರುವಂತೆ ಅಮಂತ್ರಬ್ರಾಹ್ಮಣನು ಬ್ರಾಹ್ಮಣಬ್ರುವನೆನಿಸುವನು. ಆದರಿಂದ ಬ್ರಾಹ್ಮಣನು ಸರ್ವಪ್ರಕಾರದಿಂದಲೂ ಸ್ವಧರ್ಮವಂ ಬಿಡದೆ ರಕ್ಷಿಸಿಕೊಂಡಿರಬೇಕು. ಅದೇ ಅವನ ಕರ್ತವ್ಯವು.

ಶ್ಲೋ॥ ಉತ್ಪತ್ತಿರೇವ ವಿಪ್ರಸ್ಯ ಮೂರ್ತಿ ರ್ಧರ್ಮಸ್ಯ ಶಾಶ್ವತೀ ।
ಸ ಹಿ ಧರ್ಮಾರ್ಥ ಮುತ್ಪನ್ನೋ...ಧರ್ಮ ಕೋಶಸ್ಯ ಗುಪ್ತಯೇ ॥
ನ ಹಾಯನೈ ರ್ನ ಪಲಿತೈ ರ್ನ ವಿತ್ತೇನ ನ ಬಂಧುಭಿಃ ।
ಋಷಯ ಶ್ಚಕ್ರಿರೇ ಧರ್ಮಂ ಯೋಽನೂಚಾನಃ ಸ ನೋ ಮಹಾನ್॥

ವಿಪ್ರಾಣಾಂ ಜ್ಞಾನತೋ ಜ್ಯೈಷ್ಠ್ಯಂ...ಇತ್ಯಾದಿ ಮನುವಚನಗಳಿಂದ ಭೂಮಿಯಲ್ಲಿ ಬ್ರಾಹ್ಮಣಜನ್ಮವೇ ಧರ್ಮನಿಧಿರಕ್ಷಣಾರ್ಥವಾಗಿ ಸೃಷ್ಟಿಕರ್ತಾರನಿಂದ ಉತ್ಪನ್ನವಾಗಿದೆ. ಆದರಿಂದ ಬ್ರಾಹ್ಮಣನು ಅಧರ್ಮವನ್ನು ಕಾಪಾಡಿಕೊಳ್ಳದೆ ಕೇವಲವಯಸ್ಸಿನಿಂದಲೂ, ಬಹುಧನದಿಂದಲೂ, ಬಂಧುತ್ವಾದಿಗಳಿಂದಲೂ, ಅಧಿಕನೆನಿಸನು. ಹಾಲಿನಿಂದ ಹಸುವಿಗೆ ಶ್ರೈಷ್ಠ್ಯ ಬರುವಂತೆ ಬ್ರಾಹ್ಮಣಗೆ ಜ್ಞಾನದಿಂದಲೂ, ಧರ್ಮರಕ್ಷಣದಿಂದಲೂ, ಉತ್ತಮತ್ವವು ಬಂದಿದೆ. ಅದು ಅನುಷ್ಠಾನಪರ್ಯವಸಾಯಿ ಆಗಿರಬೇಕು. ಅದಿಲ್ಲದಮೇಲೆ ಪಶುತುಲ್ಯನಾಗುತ್ತಾನೆ, ಪ್ರಾಣಿಗಳಲ್ಲಿ ನೀಚೋಚ್ಚಭಾವವು ಗುಣಕೃತವೆಂದೇ ಮನ್ವಾಶಯವು. ಹೇಗೆಂದರೆ:—

ಶ್ಲೋ॥ ಭೂತಾನಾಂ ಪ್ರಾಣಿನಃ ಶ್ರೇಷ್ಠಾಃ ಪ್ರಾಣಿನಾಂ ಬುದ್ಧಿ ಜೀವಿನಃ।
ಬುದ್ಧಿಮತ್ಸು ನರಾಃ ಶ್ರೇಷ್ಠಾ ನರೇಷು ಬ್ರಾಹ್ಮಣಾಃ ಸ್ಮೃತಾಃ॥
ಬ್ರಾಹ್ಮಣೇಷುಚ ವಿದ್ವಾಂಸೋ ವಿದ್ವತ್ಸು ಕೃತಬುದ್ಧಯಃ।
ಕೃತಬುದ್ಧಿಷು ಕರ್ತಾರಃ ಕರ್ತೃಷು ಬ್ರಹ್ಮವೇದಿನಃ॥

(ಸ್ಥಾವರ ಜಂಗಮಾತ್ಮಕ ಪಾಂಚಭೌತಿಕ ಪ್ರಪಂಚದೊಳಗೆ ದೇಹೇಂದ್ರಿಯ ಸುಖವುಳ್ಳ ಕೀಟಾದಿಪ್ರಾಣಿಗಳು ಉತ್ತಮಗಳು, ಅವರಲ್ಲಿಯು ಬುದ್ಧಿಯಿಂದ ಬದುಕುವ ಪಶ್ವಾದಿಗಳು, ಅವರಲ್ಲಿಯು ಜ್ಞಾನವಿಶೇಷದಿಂದ ಮನುಷ್ಯರುತ್ತಮರು, ಅವರಲ್ಲಿಯು ಮೋಕ್ಷಾಧಿಕಾರಿಗಳು ಬ್ರಾಹ್ಮಣರು, ಆ ಬ್ರಾಹ್ಮಣರಲ್ಲಿ ಕರ್ಮಾಧಿಕಾರಿಗಳಾದ ವಿದ್ವಾಂಸರು, ಅವರಲ್ಲಿಯು ತ್ರೈಕಾಲಿಕೋಹಾಪೋಹಾದಿಗಳಿಂದ ನಿಶ್ಚಯಜ್ಞಾನಿಗಳು, ಅವರಲ್ಲಿಯು ಇಷ್ಟಪ್ರಾಪ್ತಿ ಅನಿಷ್ಟಪರಿಹಾರಭಾಗಿಗಳೆನಿಸಿಕೊಂಡು ತತ್ಕರ್ಮಾನುಷ್ಠಾತೃಗಳಾದವರು, ಅವರಲ್ಲಿಯೂ ಮೋಕ್ಷೈಕಾಪೇಕ್ಷಿಗಳಾದ ಬ್ರಹ್ಮಜ್ಞಾನಿಗಳಾದ ವಿರಕ್ತರು ಸರ್ವೋತ್ತಮರೆಂದು ಮನುಮತವು.)

ಹೀಗೆ ಜ್ಞಾನಕರ್ಮಗಳಿಂದ ನೀಚೋಚ್ಚಸ್ಥಿತಿಯು ಸ್ಪಷ್ಟವಾಗಿ ತೋರುತ್ತಿದೆಯಷ್ಟೆ. ಇದರಲ್ಲಿ ಬ್ರಾಹ್ಮಣನು ಭೂದೇವನೆನಿಸಿಕೊಂಡಿದ್ದನೆಂದು ಗ್ರಂಥಗಳಿಂದ ಗೊತ್ತಾಗಿರುವುದರಿಂದ ಮೇಲೆ ಹೇಳಿರುವ ತಾರತಮ್ಯದಲ್ಲಿ ಯಾವತರಗತಿಗೆ ಸೇರಿದ್ದನೆಂಬುದು ವಾಚಕರಿಗೆ ಬೋಧವಾಗದೆ ಇರದು. ಮುಖ್ಯವಾಗಿ ಬ್ರಾಹ್ಮಣಗೆ ಯಥೋಕ್ತಸಂಸ್ಕಾರವೂ, ಯಥಾವಿಧಿ ತದನುಷ್ಠಾನವು, ಇಲ್ಲದೆ ಆ ಬ್ರಾಹ್ಮಣ್ಯವೇ ಸಿದ್ಧಿಸದು. ಸಿದ್ಧಿಸಿದಬಳಿಕ ಅವನು ಉತ್ತರೋತ್ತರ ತಪೋನುಷ್ಠಾನವಂ ಹೆಚ್ಚಿಸಿಕೊಳ್ಳುತ್ತಾ ಬಂದಲ್ಲಿ ಅವಗೆ ಲೋಕದಲ್ಲಿ ಅಸಾಧ್ಯವಾದ ಪದವೇ ಇರಲಾರದು. ಎಂತೆಂದರೆ:—

ಮನು॥ ಅಜ್ಞೇಭ್ಯೋಗ್ರಂಥಿನಃ ಶ್ರೇಷ್ಠಾ ಗ್ರಂಥಿಭ್ಯೋ ಧಾರಿಣೋವರಾಃ ॥
ಧಾರಿಭ್ಯೋ ಜ್ಞಾನಿನಃ ಶ್ರೇಷ್ಠಾ ಜ್ಞಾನಿಭ್ಯೋ ವ್ಯವಸಾಯಿನಃ ॥
ತಪೋ ವಿದ್ಯಾಚ ವಿಪ್ರಸ್ಯ ನಿಃಶ್ರೇಯಸಕರಂ ಪರಂ॥
ತಪಸಾಕಿಲ್ಬಿಷಂ ಹಂತಿ ವಿದ್ಯಯಾ ಽಮೃತಮಶ್ನುತೇ ॥
ಯಥಾ ಜಾತಬಲೋವಹ್ನಿರ್ದಹತ್ಯಾರ್ದ್ರಾನಪಿ ದ್ರುಮಾನ್ ॥
ತಥಾ ದಹತಿ ವೇದಜ್ಞಃ ಕರ್ಮಜಂ ದೋಷ ಮಾತ್ಮನಃ ॥
ಸರ್ವಲೋಕಾಧಿಪತ್ಯಂಚ ವೇದಶಾಸ್ತ್ರವಿದರ್ಹತಿ॥
ಇಹೈವಲೋಕೇ ತಿಷ್ಠನ್ ಸ ಬ್ರಹ್ಮಭೂಯಾಯ ಕಲ್ಪತೇ॥

“ಸಂಸ್ಕೃತನಾದ ದ್ವಿಜನು ಅಲ್ಪಾಧ್ಯಯನದಿಂದ ಅಜ್ಞನು; ಸಂಪೂರ್ಣಾಧ್ಯಯನದಿಂದ ಗ್ರಂಥವಂತನು, ಸಾಂಗವಾದ ಆ ವೇದವನ್ನು ಸದಾ ಮನದಲ್ಲಿ ಧರಿಸಿರುವವನು ಧಾರಿಯು; ಧರಿಸಿದ್ದಾವೇದದ ಅರ್ಥವನ್ನು ವಿಚಾರಪೂರ್ವಕವಾಗಿ ತಿಳಿದು ನಿಶ್ಚಿತಮತಿಯಾದವನು ಜ್ಞಾನಿ; ಆ ಪ್ರಕಾರವೇ ಅನುಷ್ಠಾನ ಮಾಡುವವನು ವ್ಯವಸಾಯಿ; ಎನಿಸುವುದರಿಂದ ಇವರು ಉತ್ತರೋತ್ತರಾಧಿಕ

ರಾಗಿರುತ್ತಾರೆ. ಫಲಸಿದ್ಧಿಯು ತದನುಗುಣವಾಗಿಯೇ ಇರುವುದು. ಆದರಿಂದ ಬ್ರಾಹ್ಮಣಗೆ ತಪಸ್ಸು, ವಿದ್ಯೆ, ಇವೆರಡು ಅನಿಷ್ಟ ನಿವೃತ್ತಿ ಇಷ್ಟಪ್ರಾಪ್ತಿ ಸಾಧನಗಳೆಂದು; ಆ ವೇದವೇದಾರ್ಥಗಳಂ ತಿಳಿದು ಅನುಷ್ಠಿಸುವವನು ಬಲವಾಗಿ ಹೊತ್ತಿ ಉರಿಯುವ ಬೆಂಕಿಯು ಹಸಿಯ ಮರವನ್ನು ಕೂಡ ಹೇಗೆ ಸುಡುವುದೋ ಹಾಗೆ ನಿಷಿದ್ಧಾಚರಣದಿಂದುಂಟಾಗಿದ್ದ ಆತ್ಮಕರ್ಮದ ದೋಷಗಳನ್ನು ಸುಟ್ಟು ಕಳೆದುಕೊಳ್ಳುವನೆಂದು; ಬೇಕಾದರೆ ಇಹದಲ್ಲಿ ಸರ್ವಾಧಿಪತ್ಯವನ್ನು ಹೊಂದಲರ್ಹನಾಗಿ, ಈ ಭೂಮಿಯಲ್ಲಿದ್ದುಕೊಂಡೇ ದೇವತ್ವ ಬ್ರಹ್ಮತ್ವಾದಿ ಪಟ್ಟಗಳಂ ಪಡೆಯಲು ಸಮರ್ಥನೆನಿಸುತ್ತಾನೆ” ಎಂದು ಮನ್ವಾಶಯವು.

ಇಂತಹ ಮಹಾಮಹಿಮಾಸ್ಪದವಾದ ಬ್ರಾಹ್ಮಣ್ಯವು ಈಗ ಅತಿವಿರಳವಾಗುತ್ತ ಬರುವುದರಿಂದ ಇನ್ನು ೧೦—೧೨ ವರ್ಷಗಳಿಗೆ ಇಷ್ಟುಮಟ್ಟಿಗೂ ಇರದೆ ತದ್ಬೀಜಗಳೆಲ್ಲಾ ನಷ್ಟವಾಗಲು ಅದೇ ನಿರ್ನಾಮವಾಗುವುದೆಂಬ ಸಂಭಾವನೆಯಿಂದಲೂ; ನಮ್ಮ ಪಿತಾಮಹರ ಕಾಲಕ್ಕಿದ್ದ ಆಯುರಾರೋಗ್ಯಸೌಶೌಚಾಚಾರ ಕರ್ಮಶ್ರದ್ಧಾದಿಗಳು ಪಿತೃವಿನ ಕಾಲದಲ್ಲಿಲ್ಲ. ಪಿತೃಕಾಲದಲ್ಲಿದ್ದಷ್ಟು ನಮಗಿಲ್ಲ. ನನಗೆ ಇರುವಷ್ಟು ನನ್ನ ಮಗನಿಗಿಲ್ಲ ವೆಂಬ ಸ್ವಾನುಭವದಿಂದಲೂ; ಸ್ವಯಂ ಪರೀಕ್ಷಿಸಿ ಪರೀಕ್ಷಿಸಿ ನಗ್ನಗ್ರಾಮದಲ್ಲಿ ಕೌಪೀನಧಾರಿಯು ನಗೆಗೆ ಯೆಡೆಯಾದಂತೆ ಈಗಿನ ವಟುಗಳು ಶೌಚಾಚಾರ ಸಂಧ್ಯಾವಂದನಾದಿ ಕರ್ಮಗಳಂ ಮಾಡಲು ನಾಚಿಕೆಪಟ್ಟುಕೊಂಡಿರುವುದನ್ನು ಕಂಡು ಪರಿತಪ್ತನಾಗಿ ‘ ಉಪನಯನದ ವೆಚ್ಚವೇನೋ ಆಯಿತು. ತತ್ಫಲಮಾತ್ರ ನಮ್ಮ ಹುಡುಗರಲ್ಲಿ ಕಾಣಬರಲಿಲ್ಲವಲ್ಲ' ಎಂದು ಚಿಂತಿಸುತ್ತ ನಿರ್ವಿಣ್ಣನಾಗಿರಲು ಹೀಗೆ ಶ್ರೀ ಶ್ರೀನಿವಾಸ ಪ್ರೇರಣೆಯಾಯ್ತು :—

ಶ್ಲೋ॥ ನ ಜಾನಪದಿಕಂ ದುಃಖ ಮೇಕಃ ಶೋಚಿತು ಮರ್ಹತಿ।
ಅಶೋಚನ್ ಪ್ರತಿ ಕುರ್ವೀತ ಯದಿ ಪಶ್ಯೇ ದುಪಕ್ರಮಂ॥

(ದೇಶಕ್ಕೆಲ್ಲಾ ಪ್ರಾಪ್ತವಾದ ಸಂಕಟವನ್ನು ಕುರಿತು ಒಬ್ಬನು ಶೋಕಿಸುವುದು ಯುಕ್ತವಲ್ಲ. ಅದಕ್ಕೆ ಪರಿಹಾರವು ತೋರಬಂದಲ್ಲಿ ತಾನು ಶೋಕಿಸದೆಯೇ ಆ ದುಃಖಕ್ಕೆ ಪ್ರತಿಕ್ರಿಯೆಯನ್ನು ಮಾಡಬೇಕು ಎಂದು) ಆದರಿಂದ ಈ ಮಹಾಜನ ಸನ್ನಿಧಿಯಲ್ಲಿ ಅಲ್ಪಜ್ಞನಾದ ನಾನು ಇಂತು ವಿಜ್ಞಾಪಿಸಿಕೊಳ್ಳುವೆನು. ಇದನ್ನು ಮನಕ್ಕೆ ತರಬೇಕೆಂದೂ ಬೇಡುವೆನು.

ಇದಲ್ಲದೆ ಇನ್ನು ಮೇಲೆ ಮಕ್ಕಳಿಗೆ ಉಪನಯನ ಮಹೋತ್ಸವವನ್ನು ನಡೆಯಿಸುವವರು ಇದೊಂದು ಮುಖ್ಯವಿಷಯವನ್ನಾಗಿ ನೆನಪಿನಲ್ಲಿಟ್ಟಿರಬೇಕು ಅದೇನೆಂದರೆ:—ಉಪನಯನವೆಂಬುದೊಂದು ವ್ರತಕ್ರಮವು ಚಿರಕಾಲಸಾಧ್ಯವು.

ಚಂಚಲನಾದ, ೭–೮ ವರ್ಷ ವಯಸುಳ್ಳ ಹುಡುಗನ ಮನಸ್ಸನ್ನೂ ದೇಹವನ್ನೂ ನಿಷ್ಪಾಪ ನೀರೋಗಗಳನ್ನಾಗಿ ಮಾಡಲು ಸಂಸ್ಕರಿಸುವ ಕಾರ್ಯವಿಶೇಷವೇ ಉಪನಯನಕರ್ಮವೆನಿಸುವುದು. ಈ ಕರ್ಮವನ್ನು ಯಥೋಕ್ತವಾಗಿ ತನ್ನಿಯಮಾನುಸಾರ ನಿತ್ಯವೂ ನಡೆಯಿಸುತ್ತ ಬರುವುದರಿಂದ ಆ ವಟುವಿಗೆ ಆರೋಗ್ಯ ದೀರ್ಘಾಯುಸ್ಸು ಓಜಸ್ಸು ತೇಜಸ್ಸು ಬ್ರಹ್ಮವರಸ್ಸು ಸದ್ಬುದ್ಧಿ ಸದ್ವಿದ್ಯೆ ಕರ್ಮಶ್ರದ್ಧೆ ಮೇಧೆ ಪ್ರಜ್ಞೆ ಇತ್ಯಾದಿ ಸದ್ಗುಣಗಳು ಉದಯಿಸಿ ವೃದ್ಧಿಹೊಂದಬೇಕಾಗಿರುವುದರಿಂದ ತತ್ಕಾದ್ಗುಣೋಚಿತ ಕರ್ಮಗಳನ್ನು ಅವನಿಂದ ನಡೆಯಿಸುತ್ತಬರುವುದಕ್ಕಾಗಿ ಅವನನ್ನು ಬಿಡದೆ ಹತ್ತಿರವೇ ಇರಿಸಿಕೊಳ್ಳಬೇಕಾಗಿರುವುದರಿಂದ ಉಪನಯನ ಶಬ್ದವು ಯೋಗರೂಢವೆಂದೇ ತಿಳಿಯಬೇಕು.

ಶ್ಲೋ॥ ಗೃಹ್ಯೋಕ್ತಕರ್ಮಣಾ ಯೇನ ಸಮೀಪಂ ನೀಯತೇ ಗುರೋಃ ।
ಬಾಲೋ ವೇದಾಯ ತದ್ಯೋಗಾ ದ್ಬಾಲಸ್ಯೋಪನಯಂ ವಿದುಃ ॥

(ಅಶ್ವಲಾಯನ ಆಪಸ್ತಂಬ ಮೊದಲಾದ ಶಾಖೋಕ್ತವಾದ ಯಾವಕರ್ಮದಿಂದ ವೇದಾಧ್ಯಯನಾರ್ಥವಾಗಿ ಗುರುಸಮೀಪಕ್ಕೆ ಬಾಲಕನು ಒಯ್ಯಲ್ಪಡುವನೋ ಆ ಕರ್ಮವನ್ನು ಬಾಲಕಗೆ ತದ್ಗುರುಸಂಬಂಧದಿಂದಲೇ ಉಪನಯನ • ಉಪನಯನವೆಂದು ಹಿರಿಯರು ಹೇಳುತ್ತಾರೆಂದು ಸರ್ವಸ್ಮೃತಿಗಳೂ ಸ್ಮರಣೆಗೊಳಿಸುತ್ತಿವೆ.) ಆದರಿಂದ ಈ ಕರ್ಮದ ಪ್ರಾರಂಭವು ನಾಲ್ಕುದಿನಗಳಲ್ಲಿ ನಡೆಯುವುದು ಒಂದು ಉದ್ಯೋಗಕ್ಕೆ (ಛಾರ್ಜಿ) ಕೊಡುವ ಕೆಲಸವನ್ನು ಒಪ್ಪಿಸಿಕೊಳುವಷ್ಟು ಕಾಲವೆಂದು ಭಾವಿಸಬೇಕು. ಬಳಿಕ ಜಾಗರೂಕನೂ ಶ್ರದ್ಧಾಳುವೂ ಆಗಿ ನಿತ್ಯವೂ ಆ ಉದ್ಯೋಗವಂ ನಡೆಯಿಸುತ್ತ ಬರುವಂತೆ, ಅಲ್ಲಿಂದ ಮುಂದೆ ಹನ್ನೆರಡು ವರ್ಷಪರ್ಯಂತ ಇಲ್ಲವೆ ಅಧ್ಯಯನ ಪೂರ್ತಿಯಾಗುವವರೆಗೆ ನಿತ್ಯವೂ ಗುರುಸನ್ನಿಧಿಯಲ್ಲಿ ತದಾಜ್ಞಾನುಸಾರವಿದ್ದು ಶೌಚಾದ್ಯಾಚಾರ ನಿಯಮಗಳನ್ನೂ, ವೇದವನ್ನೂ ಅಭ್ಯಾಸಮಾಡುತ್ತ ಬರಬೇಕು.

ಮನು॥ "ಉಪನೀಯ ಗುರುಃ ಶಿಷ್ಯಂ ಶಿಕ್ಷಯೇ ಚ್ಛೌ ಚ ಮಾದಿತಃ ।
ಆಚಾರ ಮಗ್ನಿಕಾರ್ಯಂಚ ಸಂಧ್ಯೋಪಾಸನ ಮೇವಚ ॥

ಯಾಜ್ಞವ॥ "ಉಪನೀಯ ಗುರುಃ ಶಿಷ್ಯಂ ಮಹಾವ್ಯಾಹೃತಿಪೂರ್ವಕಂ ।
ವೇದ ಮಧ್ಯಾಪಯೇ ದೇನಂ ಶೌ ಚಾಚಾರಾಂಶ್ಚ ಶಿಕ್ಷಯೇತ್ ॥

ಹೀಗೆ ಶೌಚಾದ್ಯಾಚಾರವನ್ನು ಮೊದಲು ಕಲಿಯಬೇಕಾದುದೇ ದ್ವಿಜರಿಗೆ ನಿಯಮವಾದ ವಿಧಿಯಾಗಿರುವುದರಿಂದ ಬಾಲಕನಿಗೆ ಸಂಧ್ಯಾಕಾಲ ನಿದ್ರಾದಿ ತಾಮಸ ಸುಖವಂ ತಪ್ಪಿಸಿ ಶ್ರಮಕೊಟ್ಟು ಉಷಃಕಾಲೋತ್ಥಾನ ಶೌಚಾಚಮನ, ಸ್ನಾನ ಸಂಧ್ಯಾಗ್ನಿಕಾರ್ಯ, ಅಧ್ಯಯನ ಸದಾಚಾರಾದಿಗಳು ಸರಿಯಾಗಿ

ಕಾಲಕಾಲಕ್ಕೆ ನಡೆಯುವಂತೆ ಶಿಕ್ಷಿಸುವುದಕ್ಕಾಗಿ ಇದುವರೆಗೆ ಸ್ವೇಚ್ಛೆಯಿಂದ ಕಾಮಚಾರ ಕಾಮಭಕ್ಷನಾಗಿದ್ದವನನ್ನು ಹತ್ತಿರದಲ್ಲಿಯೇ ಇರಿಸಿಕೊಂಡು; ಮೊದಲು ಅವಗೆ ಅಭ್ಯಾಸದಲ್ಲಿ ಇದ್ದ ಅಸ್ಪೃಶ್ಯಸ್ಪರ್ಶನ, ಅಭಕ್ಷ್ಯಭಕ್ಷಣ, ಅಪೇಯೌಷಧ್ಯಾದಿಪಾನ, ವಾಕ್ ಪಾಣಿ ಪಾದಗಳ ಚಾಪಲ್ಯವೇ ಮುಂತಾದ ದುರ್ರಾಚಾರಗಳನ್ನು ಕ್ರಮಕ್ರಮವಾಗಿ ಬಿಡಿಸುತ್ತ ಮೃತ್ತಿಕಾಶೌಚಾದಿ ವಿಹಿತ ಕಾರ್ಯಗಳನ್ನು ಹೊಸದಾಗಿ ಕಾಲಕಾಲಕ್ಕೆ ಎದುರಿಗಿದ್ದು ಕಲಿಸಿಕೊಡುತ್ತ ಅವನು ಬಿಕ್ಷವೆತ್ತಿಯೋ ಬೇಡಿಯೊ ತಂದ ಆಹಾರ ಪದಾರ್ಥದಲ್ಲಿ ಅವಗೆ ಆಯುರಾರೋಗ್ಯಾದಿ ಸಾತ್ವಿಕಸುಖದಾಯಿಯಾದ ಶುದ್ಧಾಹಾರವನ್ನೇ ಕೊಟ್ಟು ದಿವಾಸ್ವಾಪಾದಿಗಳನ್ನು ತಪ್ಪಿಸಿ ಕ್ಲೃಪ್ತಚೇಷ್ಟಾವ್ಯಾಯಾಮಗಳಿಂದಿರುವಂತೆ ಅವನ ಶೀಲವನ್ನು ಸರಿಯಾಗಿ ತಿದ್ದಿ, ನಿತ್ಯವೂ ಬಿಡದೆ ಆಸನ ಪ್ರಾಣಾಯಾಮ ಗಳನ್ನು ಯಥೋಚಿತವಾಗಿ ಕಲಿಸಿಕೊಡುತ್ತ, ನಿತ್ಯೋಪಯೋಗಿಯಾಗುವ ಮಂತ್ರ ಸ್ತೋತ್ರ ಶ್ಲೋಕಾದಿಗಳನ್ನು ಪವಮಾನ ಪುರುಷಸೂಕ್ತಾದಿ ವೇದ ಭಾಗವನ್ನು ಹೇಳಿ ಅದರ ಮುಖ್ಯಾರ್ಥದೊಡನೆ ಅದರದರ ವಿನಿಯೋಗ ವಿಧಾನವನ್ನು ತಿಳಿಸುತ್ತ ಬರಬೇಕು.

ಇದಕ್ಕೆ ತನಗೆ ಅವಕಾಶವಿಲ್ಲದಿದ್ದರೂ, ಆ ವಿಧಾನಗಳು ತನಗೆ ಬಾರದೆ ತಿಳಿಯದೆ ಇದ್ದರೂ, ಇದುವರೆಗೆ ಆ ವುಪನಯನೋತ್ಸವಾರ್ಥವಾಗಿ ವಿನಿ ಯೋಗಿಸುತ್ತಿದ್ದ ನೂರಾರು ರೂಪಾಯಿಗಳ ವ್ಯಯವನ್ನು ಹತ್ತಿಪ್ಪತ್ತರಲ್ಲಿ ಅಡಗಿಸಿಕೊಂಡು, ಉಪನಯನ ಕರ್ಮಸಾದ್ಗುಣ್ಯಾರ್ಥವಾದ ಮುಖ್ಯಕಾರ್ಯ ವನ್ನು ಬಿಡದೆ ಪೂರಯಿಸಿ, ಉಳಿದ ಎಂಬತ್ತು ತೊಂಬತ್ತನ್ನು ಶೌಚಾದಿ ಶಿಕ್ಷಕ ನಾದ ಉಪಾಧ್ಯಾಯನಿಗೆ ಕೊಟ್ಟು ಒಂದೆರಡುವರ್ಷಪರ್ಯಂತವಾಗಿಯಾದರೂ ಆ ಬಾಲಕರಿಗೆ ಅದನ್ನು ಅಭ್ಯಾಸಕ್ಕೆ ತಂದುಕೊಟ್ಟು ಆ ಶೌಚಾದಿಗಳ ಫಲಸ್ವ ರೂಪವು, ಅವರಿಗೆ ಅನುಭವಕ್ಕೆ ಬರುವಂತೆ ಮಾಡಿಸಬೇಕು. ಹಾಗೆ ತತ್ಫ ಲಾನುಭವಮಾಡುವ ಬಾಲಕಗೆ ತಪ್ಪದೆ ಆಯುರಾರೋಗ್ಯಭಾಗ್ಯವು, ಓಜಸ್ವಿತ್ವ ವಾಗ್ಮಿತ್ವಮೇಧಾವಿತ್ವಾದಿ ಸದ್ಗುಣಗಳು, ಉಂಟಾಗುವುದಲ್ಲದೆ ಪುರೋವೃದ್ಧಿ ಯು ತೋರದೆ ಇರದೆಂದು ನಿಸ್ಸಂಶಯವಾಗಿ ಹೇಳಬಹುದು. ಈ ಸದಾಚಾರ ಶಿಕ್ಷಣವು ಸಫಲವಾಗುತ್ತ ಬರದರೆ ಅದೇ ಆ ಬಾಲಕಗೆ ಉತ್ತಮಸ್ಥಿತಿಯೆಂದು ಭಾವಿಸಬೇಕು. ಹೇಗೆಂದರೆ:—ವೈದಿಕ ಕರ್ಮ ಪದ್ಧತಿಯಮೇರೆಗೆ ಶಿಕ್ಷಿತನಾದ ಬಾಲಕನು ಲೋಕಶಾಸ್ತ್ರ ತತ್ತ್ವಜ್ಞನಾಗುವುದರಿಂದ ಈ ಜಗನ್ಮೂಲಪ್ರ ಕೃತಿಯ ತತ್ತ್ವವು, ಈ ದೇಹಪ್ರಕೃತಿತತ್ತ್ವವು, ತಾನಾಗಿಯೇ ಅನುಭವಕ್ಕೆ ಬರುವುದು. ಬಳಿಕ ಅವನು "ಸ್ವಭಾವಜ್ಞಾ ಗತವ್ಯಥಾಃ" ಎಂದು ಪರಾ

ಷಥ ಪ್ರಕೃತಿಜ್ಞಾನದಿಂದ ನಿಶ್ಚಿಂತನೂ ಧೀರನೂ ಎನಿಸಿಕೊಂಡು, ತನ್ನ ದೇಹದ ಬಾಳಿಕೆಗೆ ಬೇಕಾಗುವ ವಿಷಯಗಳೆಲ್ಲವೂ ಸರ್ವಸುಲಭವಾಗಿಯೂ, ನಿರುಪಾಧಿಕವಾಗಿಯೂ, ಸ್ವಾಯತ್ತವಾಗಿವೆ ಎಂಬ ತಿಳಿವಳಿಕೆಯೂ ಧೈರ್ಯ್ಯವೂ ಅವನಿಗೆ ಉಂಟಾಗುವುದರಿಂದ ಈ ದೇಹಾರೋಗ್ಯಕ್ಕೆ ಬೇರೆ ವೈದ್ಯಾದ್ಯಪೇಕ್ಷೆ ಯಿಲ್ಲದಿರುವುದಲ್ಲದೆ ತಾನೇ ಸರ್ವವರ್ಣಗಳಿಗೂ ಸದ್ವೈದ್ಯನೂ ಶಿಕ್ಷಕನೂ ಆಗಿ ಏರ್ಪಡುವನು. ಹೀಗೆ ಫಲಸಿದ್ಧಿ ಕಾಣಬರುವ ಪರ್ಯಂತವು ಆ ವುಪನಯನ ಕರ್ಮವೇ ನೆರವೇರಲಿಲ್ಲವೆಂದು ಭಾವಿಸಬೇಕು.

ಆದುದರಿಂದ ಮಗನಿಗೆ ಮನೆಕಟ್ಟಿಕೊಟ್ಟು ಆರ್ಬತ್ನಟ್ಟು ಮುಂತಾದ ಬ್ಯಾಂಕು ಹೌಸುಗಳಲ್ಲಿ ಹಣವಿಟ್ಟು ಆಸ್ತಿಮಾಡಿಡುವುದಕ್ಕೆ ಪಡಿಯಾಗಿ, ವೈದಿಕಕರ್ಮಯೋಗಪದ್ಧತಿರೂಪವಾದ “ ಶರೀರ ಯಾತ್ರಾಽಪಿ ಚತೇ ನ ಪ್ರಸಿದ್ಧ್ಯೇ ದಕರ್ಮಣಃ ” ಎಂದು ಶರೀರಯಾತ್ರಾ ನಿರ್ವಾಹಕವೂ, ಲೋಕದೇಹ ಪ್ರಕೃತಿ ತತ್ತ್ವಬೋಧಕವೂ, ಆದ ಈ ಸದ್ವೃತ್ತಾನುಷ್ಠಾನವನ್ನು ಶಿಕ್ಷಿಸುವುದಕ್ಕೆ ಆ ವುಪನಯನೋತ್ಸವಕ್ಕೆ ತೆಗೆದಿಟ್ಟದ್ದ ಹಣವನ್ನು ವ್ಯಯಮಾಡಿ ಒಬ್ಬ ಸದುಪಾಧ್ಯಾಯನನ್ನು ಮನೆಯಲ್ಲಿರಿಸಿಕೊಂಡೋ, ಇವನನ್ನೇ ಆ ವುಪಾಧ್ಯಾಯರ ಮನೆಯಲ್ಲಿ ಇರಿಸಿಯೋ, ದೇವರ ದಯೆಯಿಂದೆ ಮುಂದೇರ್ಪಡುವ ಸದ್ವೃತ್ತಸದಸ್ಸಿನ ಶಾಖಾಶಾಲೆಗಳಲ್ಲಿರಿಸಿಯೋ, ಆ ಕರ್ಮಯೋಗವನ್ನು ಕಲಿಸಿದರೆ, ಅದೇ ಉತ್ತಮವಾದ ದೊಡ್ಡಆಸ್ತಿಯೆನಿಸಿಕೊಳ್ಳುವುದು. ಅಥವಾ ಆ ಕರ್ಮಯೋಗವನ್ನು ಸಂಪೂರ್ಣವಾಗಿ ಕಲಿಯಲವಕಾಶವಿಲ್ಲದಿದ್ದರೂ ತದೇಕದೇಶಭೂತ ಪ್ರಥಮಸೋಪಾನವಾದ ಮೃತ್ತಿಕಾಶೌಚ ಶುದಾಚಮನ ಸ್ನಾನ ಸತ್ತ್ವಾಹಾರ ಸದಾಚಾರಾನುಷ್ಠಾನ ಮಾತ್ರದಿಂದಲೇ ದುರಾಚಾರಾನಾರೋಗ್ಯಾದಿಗಳು ದೂರವಾಗುವುದರಿಂದ ಮನೋದೇಹಗಳು ಶುದ್ಧವಾಗಲು ಅವನು ದೀರ್ಘಾಯುಷ್ಮಂತನಾಗಿ ಸುಖಿಸುವನು. ಅವಗೆ ಸ್ವಧರ್ಮತತ್ಪರತ್ವ ರೂಪಪುಣ್ಯದಿಂದ ಆಮುಷ್ಮಿಕಸುಖವೂ ಸಿದ್ಧವೇ ಸರಿ.

ಇಂತಹವರಿಗೆ ತಾವು ಮಾಡುವ ಕರ್ಮಯೋಗದ ರಹಸ್ಯ ವಿಷಯಗಳು ಮನಸ್ಸಿಗೆ ತಿಳಿಯ ಬರುವಂತೆ ಸನ್ಯಾಯವಾಗಿಯೂ, ಸೋದಾಹರಣವಾಗಿಯೂ ಸಣ್ಣ ಸಣ್ಣ ಪುಸ್ತಕಗಳನ್ನು ರಚಿಸಿ ತತ್ತದ್ಭಾಷೆಗಳಲ್ಲಿ ಪ್ರಕಟಿಸಿ ಓದಿಸುತ್ತ ಬರುವುದಲ್ಲದೆ ತದನುಷ್ಠಾನದಿಂದ ಅವರವರು ಕಲಿತಿರುವ ಭಾಗದಲ್ಲಿ ಮೃಚ್ಛೌಚಾದಿಗಳ ಆಸನ ಪ್ರಾಣಾಯಾಮಾದಿಗಳ, ಫಲಾನುಭವಗಳನ್ನು ಪರೀಕ್ಷಿಸಿ ಅದಕ್ಕೆ ತಕ್ಕಂತೆ ಅವರನ್ನು ಪಾರಿತೋಷಿಕ ದಾನದಿಂದ ಪ್ರೋತ್ಸಾಹಪಡಿಸಿ, ಅದರಲ್ಲಿ ಇನ್ನೂ ಮರ್ಮವಿಶೇಷಗಳನ್ನೂ, ತತ್ಫಲ ಭೇದಗಳನ್ನೂ ಅವರಿಗೆ ತಿಳಿಸಿಕೊಡುತ್ತ ಬರುವುದು ಕೂಡ ಮುಖ್ಯಕಾರ್ಯ

ವೆಂದು ಭಾವಿಸಬೇಕು. ಏಕೆಂದರೆ ಕರ್ಮಜ್ಞಾನಮಾತ್ರವೇ ಸಾಲದು. ಅನು ಷ್ಠಾನವೇ ಫಲಪ್ರದವು. ಈ ವಿಷಯದಲ್ಲಿ ಮನೂಕ್ತಿ ಹೀಗೆ ಉಂಟು.

ಶ್ಲೋ॥ (ಭೂ) ದೂಷಿತೋಪಿ ಚ ರೇದ್ಧರ್ಮಂ ಯತ್ರ ತತ್ರಾ ಶ್ರಮೇ ವರ್ಸ।
ಸ ಮಃ ಸ ರ್ವೇಷು ಭೂ ತೇಷು ನ ಲಿಂಗಂ ಧರ್ಮಕಾರಣಂ ॥
ಫಲಂ ಕತಕ ವೃಕ್ಷಸ್ಯ ಯದ್ಯಪ್ಯಂ ಬು ಪ್ರಸಾದಕಂ ।
ನ ನಾಮ ಗ್ರಹಣಾದೇವ ತಸ್ಯ ವಾರಿ ಪ್ರಸೀದತಿ ॥

(ಯಾವುದಾದರೊಂದು ಆಶ್ರಮದಲ್ಲಿ ಇರುವನಾಗಿ ಜನಗಳಿಂದ ದೂಷಿತ ನಾಗಿದ್ದರೂ, ಭೂಷಿತನಾಗಿದ್ದರೂ, ಸರ್ವಭೂತಸಮನೆನಿಸಿ ಧರ್ಮವನ್ನಾಚರಿಸ ಬೇಕು. ಅಜಿನದಂಡಾದಿ ಚಿಹ್ನಮಾತ್ರವೇ ಧರ್ಮಹೇತುವಲ್ಲ. ಚಿಲ್ಲಬೀಜವು ಕಲಕಿದ ನೀರನ್ನು ತಿಳಿಮಾಡುವುದಾದರೂ ಅದರ ಹೆಸರನ್ನು ಹೇಳಿದಮಾ ತ್ರಕ್ಕೆ ಆ ನೀರು ತಿಳಿಯಾಗುವುದೇ?" ಚಿಲ್ಲಬೀಜವನ್ನು ತೆಯ್ದು ಆ ಕಲಕಿದ ನೀರಲ್ಲಿ ಬೆರಸಿ ಕೆಲವು ಗಂಟೆಗಳು ನಿರೀಕ್ಷಿಸಿದ್ದರಲ್ಲವೆ ಆ ನೀರು ತಿಳಿಯಾಗು ವುದು) ಅದರಿಂದ:—"ಸತ್ಯ ಮಸ್ತೇ ಯ ಮಕ್ರೋಧೋ ಹ್ರೀಃಶೌ ಚಂ ಧೀರ್ಧೃತಿರ್ದಮಃ। ಸಂ ಯತೇಂದ್ರಿಯತಾ ವಿದ್ಯಾ ಧರ್ಮ ಸ್ಸರ್ವ ಉದಾಹೃತಃ॥" ಎಂಬ ಈ ಧರ್ಮಗಳನ್ನು ಯಾವಾಗಲು ಅವಶ್ಯಂ ಅನುಷ್ಠಿಸುತ್ತಿರಬೇಕೆಂದು ಮುಖ್ಯಾಭಿಪ್ರಾಯವು.

ಇದೇನು "ವೈದಿಕ ಕರ್ಮಯೋಗಸಿದ್ಧಾಂತದ ರಹಸ್ಯವನ್ನು ಹೀಗೆ ಸ್ವೇಚ್ಛೆಯಾಗಿ ಪ್ರಕಟಿಸಬಹುದೆ? ಬ್ರಾಹ್ಮಣೇತರರೂ ಅದನ್ನು ನೋಡುವ ರಲ್ಲವೆ? ಶ್ರೀ ಕೃಷ್ಣನು "ಇದಂತೇ ನಾ ತಪಸ್ಕಾಯ ನಾ ಭಕ್ತಾ ಯ ಕದಾ ಚ ನ। ನ ಚಾ ಶುಶ್ರೂಷವೇ ವಾಚ್ಯಂ" ಎಂದು ಹೇಳಿರುವಾಗ ಹೀಗೆ ಸರ್ವಜನೀನವಾಗೆ ಪ್ರಕಟಿಸಿದರೆ ತದಾಜ್ಞೋಲ್ಲಂಘನರೂಪ ಪಾಪವು ಪ್ರಾಪ್ತ ವಾಗದೆ?" ಎಂದರೆ ಅಹುದು. ಅದು ಕೇವಲ ಮೋಕ್ಷಶಾಸ್ತ್ರ ರಹಸ್ಯವಿಷ ಯವು. ಈಗ ನಾನು ಹೇಳತೊಡಗಿರುವುದು ದೀರ್ಘಾಯುರಾರೋಗ್ಯ ಸುಬುದ್ಧಿಪ್ರದವಾದ ಸರ್ವಾನುಷ್ಠೇಯವಾದ ಸದಾಚಾರಪದ್ಧತಿ ಸಾಮಾನ್ಯ ವಾದುದು. ಯಥಾಯೋಗ್ಯವಾಗಿ ಸ್ತ್ರೀ ಶೂದ್ರಾದಿಗಳು ಕೂಡ ಅಮಂತ್ರಕ ವಾಗಿ ಆಚರಿಸ ಬಹುದಾದುದು. ಅದರಿಂದ ಹೇಳಬಂದೆನು. ಆದರೆ ಸ್ತ್ರೀ ಶೂದ್ರಾದಿಗಳಿಗೆ ಮೋಕ್ಷವಾಗಕೂಡದೋ ಎಂದಾಕ್ಷೇಪಿಸಬಾರದು. ಶ್ರೀ ಕೃಷ್ಣನು ಮುಖ್ಯಾಧಿಕಾರಿಯಾದ ಅರ್ಜುನಗೋಸ್ಕರವಾಗಿ ಎಲ್ಲಾ ರಹಸ್ಯಗ ಳನ್ನೂ ಹೇಳಿ; ಆಕಾಲದಲ್ಲಿದ್ದ ಅಸುರಾಂಶ ದೇವಾಂಶ ಮಿಶ್ರಜನಗಳಲ್ಲಿ ತಪಸ್ಸು, ಭಕ್ತಿ, ಗುರುಶುಶ್ರೂಷೆ, ಅನಸೂಯಾನಹಂಕಾರಾದಿ ದೈವಸಂಪತ್ತುಳ್ಳ

ಜನಗಳ ನಡುವೆ, ಇರುವ ಅಸತ್ಯಾನಾಚಾರಾಶೌಚಾಸೂಯಾ ಕ್ರೋಧ ಲೋಭಾದಿ, ದುರ್ಗುಣಗಳುಳ್ಳ ಅಸುರ ಸಂಪತ್ತಿನವರಿಗೆ ಹೇಳಕೂಡದೆಂಬಭಿಪ್ರಾಯದಿಂದ "ನ ಚ ಮಾಂ ಯೋಽಭ್ಯಸೂಯತಿ" ಎಂದು ನಿಷೇಧಿಸಿ; ಬಳಿಕ "ಯ ಇದಂ ಪರಮಂ ಗುಹ್ಯಂ ಮದ್ಭಕ್ತೇಷ್ವಭಿಧಾಸ್ಯತಿ ।

ಭಕ್ತಿಂ ಮಯಿಂಪರಾಂಕೃತ್ವಾ ಮಾಮೇವೈಷ್ಯತ್ಯಸಂಶಯಃ ॥" ಎಂದು ಹೇಳಿರುವುದರಿಂದ ಭಕ್ತರಾದ ಅಧಿಕಾರಿಗಳಿಗೆ ಈ ಗುಟ್ಟನ್ನು ಹೇಳಿದವರಿಗೆ ಕೂಡ ಮೋಕ್ಷಸಿಕ್ಕುವಾಗ ಭಕ್ತಿಶ್ರದ್ಧಾಪುರಸ್ಸರವಾಗಿ ಭಜಿಸುವ ಸ್ತ್ರೀ ಶೂದ್ರಾದಿಗಳಿಗೆ ದೊರೆಯುದೇ ಹೋಗುವುದೇ? ಕ್ರಮಸಾಧನೆಯಿಂದ ಅವರಿಗೂ ಸದ್ಗತಿ ದೊರೆಯುವುದು. ಅದು ಹಾಗಿರಲಿ. ಶ್ರೀ ಕೃಷ್ಣಾಭಿಪ್ರಾಯವು ಮತ್ತೇನೆಂದರೆ:—ಯಾರು ದುರ್ಯೋಧನಾದಿಗಳಂತೆ ದುರಹಂಕಾರಯುಕ್ತರಾಗಿ ಹೇಳಿದರೂ ಪ್ರತ್ಯಕ್ಷನಿದರ್ಶನಗಳಂ ತೋರಿಸಿದರೂ, ನಂಬದೆ ಮೂರ್ಖತಮರಾಗಿ ದ್ವೇಷಿಸುತ್ತಿರುವರೋ (ಕಲ್ಯಾವಿಷ್ಟರಾದುದರಿಂದ) ಅಂತಹವರಿಗೆ ಹೇಳಕೂಡದೆಂದು; ಯಾರು ಮೂಢರಾದರೂ ಅನನ್ಯಶರಣರಾಗಿರುವರೋ, ಯಾರು ಪ್ರಾಜ್ಞರಾದರೂ ಅಹಂಕಾರಮತ್ಸರಾದಿಗಳಿಲ್ಲದೆ ಅರ್ಜುನನಂತೆ ಶುದ್ಧರೋ, ಅಂತಹವರಿಗೆ ಅವಶ್ಯವಾಗಿ ರಹಸ್ಯ ತಿಳಿಸಬೇಕೆಂದು ವ್ಯಕ್ತವಾಗುತ್ತದೆ.

ಆದುದರಿಂದ ಪ್ರಕೃತದಲ್ಲಿ ಯಾವುದನ್ನೂ ತಿಳಿಯದ ಮಕ್ಕಳಿಗೂ, ಮಕ್ಕಳಂತಿರುವ ಮೂಢರಿಗೂ, ಈಕಾಲದ ಓದಿನ ಪಿತ್ಥಭ್ರಮವಿನ್ನೂ ತಲೆಗೇರದವರಿಗೂ ಈ ದೀರ್ಘಾಯುರಾರೋಗ್ಯ ಸುಬುದ್ಧಿಪ್ರದವಾದ ಸತ್ಯಶೌಚಾಚಾರಾದಿ ಕರ್ಮಾನುಷ್ಠಾನ ರಹಸ್ಯವನ್ನು ಹೇಳಿ ಅವರಿಗೆ ದುಸ್ಸಂಗದಿಂದ ಪ್ರಾಪ್ತವಾಗಿರುವ ದುರಾಚಾರಾನೃತಾಶೌಚಾದಿಗಳನ್ನು ಮೊದಲು ತಪ್ಪಿಸಿ ಅಸ್ವಚ್ಛತೆಯ ಕೆಟ್ಟನೀರು ಕುಡಿಯದೆ. ರಸವಿಷಗಂಧಕ ಪಾಷಾಣಾದಿ ದುಷ್ಟವಸ್ತುಗಳನ್ನು ಹೊಟ್ಟೆಗೆ ಸೇರಿಸದೆ, ಕೆಟ್ಟ ಬೇನೆಗಳನ್ನೂ ಅನುಭವಿಸದೆ ಆರೋಗ್ಯಭಾಗ್ಯಸುಖವನ್ನೂ, ದೀರ್ಘಾಯುರ್ಧನ ನಿಧಿಯನ್ನೂ, ಹೊಂದಿ ಸುರಕ್ಷಿತರಾಗಿ ಬಾಳುವಂತೆ ಅವರನ್ನು ತಿದ್ದಿ ದಾರಿಗೆ ತರುವುದೇ ಮುಖ್ಯ ಕರ್ತವ್ಯವು. ಆ ಪ್ರಕಾರ ಆ ಮಕ್ಕಳು ಸನ್ಮಾರ್ಗವನ್ನು ಹಿಡಿದಮೇಲೆಯೇ ತಾನು ಸತ್ಸಂತಾನವಂತನೆಂದು ಭಾವಿಸಬೇಕು. ಮಕ್ಕಳಾದಮಾತ್ರಕ್ಕೆ ಮೃಗಗಳಂತೆ ತಾನೂ ಮಕ್ಕಳೊಂದಿಗ ಎಂಬ ಹೆಸರು ಪಡೆದುಕೊಳ್ಳಬಹುದು. ಆ ಮಗನು ತನಗೆ ಸದ್ಗತಿ ಸಂಪಾದಕನಾಗಬೇಕಾದರೆ "ಸದಾ ಸದಾಚಾರಪರನಾಗಿಯೇ ಇರಬೇಕು. ದುರಾಚಾರನಾದರೆ ಅವನು ಕೆಡುವುದು ಮಾತ್ರ

ವಲ್ಲದೆ ಅವನಿಂದ ತನಗೂ ತನ್ನ ಹಿರಿಯರಿಗೂ ದುರ್ಗತಿಯಾಗುತ್ತದೆ" ಎಂದು ಶಾಸ್ತ್ರವು ಸಾರುತ್ತಿದೆ. ಆದರಿಂದ ಮಕ್ಕಳಿಗೆ ಆ ಸತ್ಕರ್ಮವಿಶೇಷನಿಷ್ಠೆ ಬಲವತ್ತರವಾಗದಿದ್ದರೂ ಚಿಂತೆ ಇಲ್ಲ. ಅವರಿಂದ ನಮಗೆ ಸತ್ಯಲೋಕಾಂತ ಸದ್ಗತಿ ದೊರೆಯದಿದ್ದರೂ ಬಾಧಕವಿಲ್ಲ. ದುರ್ಗತಿದಾಯಕವಾದ ಮದ್ಯಪಾನಾದಿ ದುರಾಚಾರಗಳು ಮಾತ್ರ ಇಲ್ಲದಿದರೆ ಸಾಕು. ಮಧ್ಯಸ್ಥಿತಿಯಲ್ಲಾದರೂ ಇರಬಹುದು. ಅದೇಕೆಂದರೆ :—

ಶ್ಲೋ॥ "ಏಷ್ಟವ್ಯಾ ಬಹವಃ ಪುತ್ರಾ ಯದ್ಯೇಕೋಪಿ ಗಯಾಂ ವ್ರಜೇತ್।
ನೈಷ್ಟವ್ಯಾ ಬಹವಃ ಪುತ್ರಾ ಯದ್ಯೇಕೋಪಿ ಸುರಾಂ ಪಿಬೇತ್॥"

ಎಂದು (ಮಕ್ಕಳು ಗಯಾವ್ರಜನಮಾಡುವರಾದರೆ ಬೇಕು ; ಸುರಾಪಾನ ಮಾಡುವರಾದರೆ ಮಕ್ಕಳೇ ಬೇಡ.) ಹೀಗಿರುವುದರಿಂದ ಬ್ರಾಹ್ಮಣನಾದವಗೆ ಸುರಾಪಾನವೊಂದೇ ಸರ್ವಗುಣಗಳನ್ನೂ ಸರ್ವ ಸದಾಚಾರಗಳನ್ನೂ ಕಳೆದು, ಬುದ್ಧಿಗೆಡಿಸಿ, ಇಹದಲ್ಲಿ ಆಯುರಾರೋಗ್ಯಗಳನ್ನು ವ್ಯರ್ಥವಾಗಿಸಿ, ಎಷ್ಟು ಧನಾರ್ಜನೆ ಮಾಡಿದರೂ ತನಗೊಬ್ಬಗೇ ಸಾಲದಂತೆ ಮಾಡಿ ಕಡೆಗೆ ಪರದಲ್ಲಿ ಅಧೋಗತಿಗೊಡುತ್ತದೆ. ಆದರಿಂದ ಬ್ರಾಹ್ಮಣಗೆ ಸುರಾಪಾನವು ಸರ್ವಥಾ ನಿಷಿದ್ಧವಾಯಿತು. ಪಯಸ್ಸು (ಹಾಲು ಮತ್ತು ನೀರು) ವಿಹಿತವಾಯ್ತು. ಅದೇ ಬ್ರಾಹ್ಮಣಗೆ ಅಮೃತವೂ, ವ್ರತವೂ, ಹಿತವೂ ಆಗಿದೆ. ಅದರ ಮಹಿಮೆಯಿಂದಲೇ ಬ್ರಾಹ್ಮಣನು ಭೂಸುರನೆನಿಸಿದುದು. ನಿತ್ಯವೂ ಬ್ರಾಹ್ಮಣನು ತ್ರಿಕಾಲದಲ್ಲಿಯು—ವೇದಮಾತೆಯಂ ಧ್ಯಾನಿಸುತ್ತ ಅಬ್ದೇವತೆಯಂ ಪ್ರಾರ್ಥಿಸುತ್ತ "ಆಪೋಜ್ಯೋತೀ ರಸೋಽಮೃತಂ ಯಶೋ ವರ್ಚೋ ಬಲಮೋಜೋ ನಿಧತ್ತ ಮೈ." ಹೀಗೆ ಓಜಸ್ಸು, ವರ್ಚಸ್ಸು, ಯಶಸ್ಸು, ಬಲ ಬ್ರಹ್ಮವರ್ಚಸ್ಸು, ಆಯುಸ್ಸು ಇತ್ಯಾದಿ ಸದ್ಗುಣಗಳನ್ನು ಆಶೆಪಟ್ಟು ಬೇಡಿಕೊಳ್ಳುವನಷ್ಟೆ. ಆ ಶಕ್ತಿಗಳನ್ನು ವೃದ್ಧಿಮಾಡುವ ಗುಣವು ಹಾಲಿನಲ್ಲಿ ನೀರಿನಲ್ಲಿ ಸ್ವಭಾವವಾಗಿ ಇರುವುದರಿಂದ ಅದು ಅಮೃತವಾಯ್ತು. ಅದನ್ನೇ ನಿತ್ಯವೂ ವ್ರತವಾಗಿ ಅನ್ನಪಾನ ಪ್ರತಿನಿಧಿಯಾದ ಆಹಾರವಾಗಿಟ್ಟುಕೊಂಡುದರಿಂದ ಅಮೃತಾಂಧಸನಾಗಿ ಇರುವುದಲ್ಲದೆ ಸದಾ ಶಮದಮಾದಿ ಸತ್ತ್ವಗುಣ ಪ್ರಕರ್ಷದಿಂದ ವಿಪ್ರನು ಭೂಸುರನೆನಿಸಿದ್ದನೆನ್ನಬಹುದು. ಈ ಕಾಲದಲ್ಲಿಯಾದರೋ ರೋಗಬಂದಾಗಲೇ ಹಾಲು, ಸಪ್ಪೆಕಟ್ಟು, ಪಥ್ಯ, ಎಂದು ಸತ್ವಾಹಾರಪದ್ಧತಿ ಕಾಣಬರುತ್ತಿದೆಯಲ್ಲದೆ ನಿತ್ಯವೂ ರಾಜಸ ತಾಮಸಾಹಾರವೇ ಅಭ್ಯಾಸದಲ್ಲಿ ಬಂದುಹೋಗಿದೆ. ಇರಲಿ ಚಿಂತೆಯಿಲ್ಲ. ಆ ಕ್ಷೀರಕ್ಕೆ ಕೇವಲ ವಿರೋಧಿಯಾದ ಸುರೆಯೊಂದಿಲ್ಲದಿದ್ದರೆ ಸಾಕು, ಎನಿಸಿದೆ. ಏಕೆಂದರೆ ಈ ಬ್ರಾಹ್ಮಣನು ಅಪೇಕ್ಷಿಸಿಕೊಂಡಿರುವ ಆ ಮೇಲಿನ ಗುಣಗಳು ಓಜಸ್ಸು ಮೊದಲಾದುವು ಈ ಸುರಾ

ಸಂಬಂಧದಿಂದಲೇ ಧ್ವಂಸವಾಗುವುದೆಂದು ಆತ್ರೇಯಾದಿ ಮಹರ್ಷಿಗಳು ಘೋಷಿಸುತ್ತಾರೆ. ಈ ವಿಷಯವನ್ನೇ ಬೇರೆ ಒಂದು ಭಾಗವಾಗಿ ಸದ್ವೃತ್ತ ರತ್ನಾವಳಿಯ ಹಿತಾಹಿತಸರದ ಅಂತದಲ್ಲಿ ಸೇರಿಸಿರುವೆನು. ಅದರ ಸಾರಾಂಶವು :—

ಶ್ಲೋ॥ ಮದ್ಯಂ ಹೃದಯಮಾವಿಶ್ಯ ಸ್ವಗುಣೈ ರೋಜಸೋಗುಣಾ ।
ದಶಭಿ ರ್ದಶ ಸಂಕ್ಷೋಭ್ಯ ಚೇತೋ ನಯತಿ ವಿಕ್ರಿಯಾಂ॥

(ಮದ್ಯವು ಎದೆಯನ್ನು ಸೇರಿ ಅಲ್ಲಿರುವ ಹತ್ತುಗುಣವುಳ್ಳ ಓಜಸ್ಸನ್ನು ತನ್ನ ಹತ್ತುಗುಣಗಳಿಂದ ಹಾಳುಮಾಡಿ ತನ್ಮೂಲವಾದ ಮನಸ್ಸನ್ನೂ ಕೆಡಿಸುತ್ತದೆ.) ಎಂದು ಶುದ್ಧದಲ್ಲಿ ತಾತ್ಕಾಲಿಕ ರಾಜಸ ತಾಮಸ ಸುಖ ತೋರಬಂದರೂ ದುಸ್ಸಹವಾಸವಾದುದರಿಂದ ಅನರ್ಥಗಳೇ ಬಹಳವಾಗಿವೆಯೆಂದು ಮದ್ಯನಿಷೇಧವನ್ನೇ ಬಹುವಾಗಿಹೇಳಿ ನಿತ್ಯಮದ್ಯಪಾಯಿಯ ಮದಾತ್ಯಯ ರೋಗಕ್ಕೆ ಚಿಕಿತ್ಸೆಗಳನ್ನೂ ಅನೇಕವಾಗಿ ತೋರಿಸಿ ಕಡೆಗೆ ಆ ಔಷಧಗಳಿಂದ ಆ ರೋಗ ನಿವೃತ್ತಿ ಆಗದಿದ್ದರೆ ಮದ್ಯವಂ ಬಿಟ್ಟು ಹಾಲನ್ನು ಸೇವಿಸುತ್ತಾ ಬರಬೇಕು. ಇನ್ನೂ ಸ್ನಾನ, ಉದ್ವರ್ತನ, ಅಭ್ಯಂಗ, ಉಪವಾಸ, ಮಾರುತಾತಪಾದಿಪಾಚಕಕ್ರಿಯೆ; ವಮನ ವಿರೇಚನ, ಸ್ವೇದನಾದಿಗಳಿಂದ ದೋಷಗಳ (ವಾತಪಿತ್ತಶ್ಲೇಷ್ಮ) ಶೋಧನೆ; ಇವುಗಳಿಂದಾದರೂ ಆ ರೋಗವಂ ಕಳೆಯ ಬೇಕು.

ಶ್ಲೋ॥ ಆಭಿಃ ಕ್ರಿಯಾಭಿಃ ಸಿದ್ಧಾಭಿಃ ಶಮಂ ಯಾತಿ ಮದಾತ್ಯಯಃ ।
ನ ಚೇ, ನ್ಮದ್ಯ ವಿ ಧಿಂ ಹಿತ್ವಾ ಕ್ಷೀರ ಮಸ್ಯ ಪ್ರಯೋಜಯೇತ್।
ಲಙ್ಘನೈಃ ಪಾಚನೈ ಶ್ಚೈವ ದೋಷ ಸಂಶೋಧನೈರಪಿ ॥

ಹೀಗೆ ಪ್ರಾಯಶ್ಚಿತ್ತರೂಪವಾಗಿ ಪ್ರತಿಕ್ರಿಯೆಯನ್ನು ಹೇಳಿ ಬುದ್ಧಿಶಾಲಿಗೆ ಹಿತೋಪದೇಶವನ್ನು ಮಾಡಿದ್ದಾರೆ.

ಶ್ಲೋ॥ ನಿವೃತ್ತಃ ಸ್ಸರ್ವ ಮದ್ಯೇಭ್ಯೋ ನರೋಯಃ ಸ್ಯಾದ್ಜಿತೇಂದ್ರಿಯಃ।
ಶಾರೀರ ಮಾನಸೈರ್ಧೀಮಾ ವಿಕಾರೈ ರ್ನ ಸ ಯುಜ್ಯತೇ ॥

(ಯಾವ ಮನುಷ್ಯನು ಇಂದ್ರಿಯಗಳನ್ನು ವಶದಲ್ಲಿ ಇರಿಸಿಕೊಂಡವನಾಗಿ ಬುದ್ಧಿನಾಶಕವು ಮದಕರವು ಆದ ಎಲ್ಲಾ ಮದ್ಯಗಳನ್ನೂ ತ್ಯಜಿಸುವನೋ ಅವನು ಮನಃಶರೀರವಿಕಾರಗಳೆನಿಸಿದ ಆಧಿವ್ಯಾಧಿ ಪೀಡೆಗಳಿಂದ ವಿಮುಕ್ತನಾಗಿ ಸುಖಿಸುತ್ತಾನೆ.) ಆದುದರಿಂದ ಮದ್ಯವಾಗಲಿ, ತತ್ಸಮವಾದಾಹಾರವೇ ಆಗಲಿ ಮೊದಲು ಮನಸ್ಸನ್ನು ಕೆಡಿಸಿ ಬಳಿಕ ದೇಹವನ್ನು ಬೇಗನೆ ಹಾಳುಮಾಡುವುದು. ಆದರಿಂದ ಮುಖ್ಯವಾಗಿ ಬ್ರಾಹ್ಮಣಗೆ ಅಧ್ಯಾತ್ಮ ವಿಚಾರಕ್ಕಾಗಿ ಮನಸ್ಸಿನ ಶಾಂತಿಯೇ ಅತ್ಯವಶ್ಯವಾದುದರಿಂದ ಆ ಮನ

ಸ್ಸಿಗೆ ಸತ್ತ್ವಗುಣ ಸಿದ್ಧಿಯಾಗಬೇಕಾದರೆ ಸತ್ವಾಹಾರವೇ ಕಾರಣವು. ಅದು ಹೇಗೆಂದರೆ:—"ಮನಸೋಽನ್ನ ಕಾರ್ಯತ್ವಂ, ಅನ್ನ ಮಯಂ ಹಿ ಸೌಮ್ಯಮನಃ ಆಪೋಮಯಃ ಪ್ರಾಣಸ್ತೇಜೋ ಮಯೀ ವಾಗಿತಿ" ॥ ಛಾಂ । ಉಪ ॥

ಶ್ಲೋ॥ ಅನ್ನಂ ಘಂ ಸಾ ಶ್ರಿತಂ ತ್ರೇಧಾ ಜಾಯತೇ ಜಠರಾಗ್ನಿನಾ ॥
ಮಲಃ ಸ್ಥವಿಷ್ಠೋ ಭಾಗಃ ಸ್ಯಾನ್ಮಧ್ಯಮೋ ಮಾಂಸತಾಂವ್ರಜೇತ್ ।
ಮನಃ ಕನಿಷ್ಠೋ ಭಾಗಃಸ್ಯಾತ್ತಸ್ಮಾದನ್ನಮಯಂ ಮನಃ ॥

(ಮನಸ್ಸು ಅನ್ನಾನುರೂಪವಾಗಿರುತ್ತದೆ. ಊಟಮಾಡಿದ ಅನ್ನಾದ್ಯಾಹಾರಪದಾರ್ಥವೆಲ್ಲವೂ ಜಠರಾಗ್ನಿಯಿಂದ ಮೂರುಭಾಗವಾಗಿ ಅತಿ ಸ್ಥೂಲಾಂಶವು ಮಲವಾಗಿ, ಮಧ್ಯಮಾಂಶವು ಮಾಂಸವಾಗಿ, ಸೂಕ್ಷ್ಮತಮಾಂಶವು ಮನಸ್ಸಾಗಿ ಏರ್ಪಡುವುದೆಂದು, ಛಾಂದೋಗ್ಯೋಪನಿಷತ್ತು ಹೇಳುವುದು.) ಎಂದು ಅನ್ನಗುಣಾನುರೂಪವಾಗಿ ಮನೋಗುಣಗಳೇರ್ಪಡುವುದರಿಂದ ಭಗವದ್ಗೀತೋಕ್ತಪ್ರಕಾರವಾಗಿ ರಾಜಸತಾಮಸಾಹಾರಗಳು ತಾತ್ಕಾಲಿಕ ಸುಖಕರಗಳಾದರೂ ಪರಿಪಾಕದಲ್ಲಿ "ದುಃಖಶೋಕಾಮಯ ಪ್ರದಾಃ" ಎಂದು ಸರ್ವಾಶುಭಕಾರಿಗಳಾದುದರಿಂದ ಕ್ರಮವಾಗಿ ಅದನ್ನು ಬಿಟ್ಟು, ಆಯುಸ್ಸತ್ವಬಲಾರೋಗ್ಯಸುಖಪ್ರೀತಿವರ್ಧಕಗಳಾದ ಶುದ್ಧ ಸತ್ವಾಹಾರಗಳನ್ನೇ ಹುಡುಕಿಕೊಂಡು ಸೇವಿಸುತ್ತ ಬಂದರೆ ಕೆಲವು ಕಾಲಕ್ಕೆ ಕ್ರಮವಾಗಿ ಓಜೋವೃದ್ಧಿಯಾಗುತ್ತ ಬರುವುದು. ಬಳಿಕ ಸತ್ತ್ವಶುದ್ಧಿ, ಅದರಿಂದ ಧರ್ಮವೃದ್ಧಿ, ವರ್ಚಸ್ಸು, ಸಹಸ್ಸು, ತೇಜಸ್ಸು, ಬ್ರಹ್ಮವರ್ಚಸ್ಸುಗಳ ಲಾಭ, ಅದರಿಂದ ಅಧರ್ಮಪಾಪಗಳು ಕ್ಷಯವಾಗುತ್ತ ಬರಲು; ಪೂರ್ವದಲ್ಲಿ ಈ ದೇಶಕ್ಕೆ ಪ್ರಾಪ್ತವಾಗಿದ್ದ ಮ್ಲೇಚ್ಛರಾಜೋಪದ್ರವವು ಹೋಗಿ (ಬ್ರಿಟಿಷ್) ಪ್ರಭುತ್ವದಿಂದ ಸುಖವಾದಂತೆ ದ್ವಿಜಕುಲಪುತ್ರರ ಮನೋದೇಹಗಳನ್ನು ವ್ಯಾಪಿಸಿರುವ ಅಸುರಭಾವವು ಹೋಗಿ ಮರಳಿ ಮಹೀಸುರತ್ವ ಸಿದ್ಧಿ ಯಥಾಸ್ಥಿತಿಯಾಗಲೆಂದು ಶ್ರೀ ಕೃಷ್ಣದ್ವೈಪಾಯನಾದಿ ಮಹರ್ಷಿಗಳು ಪರಮಾನುಗ್ರಹವಂ ಮಾಡಬೇಕೆಂದು ಪ್ರಾರ್ಥಿಸುವೆನು. ಇನ್ನು ಮುಂದೆ ಆಗುವ ವಟುಗಳಿಗಾದರೂ ಸಂಧ್ಯಾವಂದನಾದಿ ಕರ್ಮಶ್ರದ್ಧೆ ಹುಟ್ಟುವಂತೆಯೂ; ಓಜಸ್ಸತ್ವಾದಿಗಳ ಶುದ್ಧಿವೃದ್ಧಿಯೊಡನೆ ಕ್ರಸುವಾಗಿ ಬ್ರಹ್ಮತೇಜಸ್ಸು ವ್ಯಕ್ತವಾಗುವಂತೆಯೂ ಈಗ ನಷ್ಟವಾಗಿರುವ ಭೂಸುರತ್ವಲಾಭವಾಗುವಂತೆಯೂ ಮಾಡಲು ನಾವೆಲ್ಲರೂ ಸೇರಿ ಏಕಾಭಿಪ್ರಾಯದಿಂದ ಮತವೈಷಮ್ಯಗಳಂ ಬಿಟ್ಟು ಕೃತಸಂಕಲ್ಪರಾಗಿ ತದುದ್ಯೋಗಗಳನ್ನು ಇಂದುಮೊದಲು ಮಾಡಲಾರಂಭಿಸುವೆವೆಂದು ಸ್ವಾಮಿಸನ್ನಿಧಿಯಲ್ಲಿ ಸಂತೋಷದಿಂದ ಸತ್ಪ್ರತಿಜ್ಞೆಯಂ ಮಾಡಿಕೊಂಡ ಪಕ್ಷದಲ್ಲಿ ಆಸ್ವಾಮಿಯೇ ಸಹಾಯನಾಗುವುದರಲ್ಲಿ ಸಂಶಯವೇ ಇಲ್ಲ.

ಇದೇನು ಹುಚ್ಚು ಕಲಿಯುಗದಲ್ಲಿದ್ದುಕೊಂಡು ಯುಗಾಂತರ ವಿಷಯವಂ ಬಯಸುವುದು. ತಿಪ್ಪೆಯಲ್ಲಿ ಕುಳಿತು ಉಪ್ಪರಿಗೆಯ ಕನಸಂ ಕಂಡಂತಲ್ಲವೆ. ಈ ಕಾಲದಲ್ಲಿ "ತಪಸ್ಸೆಂದರೆ ಪರವಂಚನೋಪಾಯ ಸಂಗ್ರಹಣವು; ದಾನವೆಂಬುದು ದುಹಿತೃಜಾಮಾತೃಗಳಿಗೆ, ಯಜ್ಞ ಯಜಮಾನೋದರಾರ್ಥವಾದ ಪಾಕಯಜ್ಞವೇ; ಭಕ್ತಿ ವಿಭಕ್ತಿಯೇ, ಗುರು ಲಘುವಲ್ಲದವನು; ಶುಶ್ರೂಷೆ ಸಂಬಳಕೊಟ್ಟರೆ ಚಾಕರಿಮಾಡುವುದು. ಗುರುಶುಶ್ರೂಷೆಮಾಡದೆ ಓದು ಹೇಗೆಬಂದೀತೆಂಬ ಚಿಂತೆಯೇನೂ ಕೆಲಸವಿಲ್ಲ. ಸ್ಕೂಲು ಫೀ ಕೊಡುತ್ತೇವೆ, ಟೀಚರು ತನ್ನಡ್ಯೂಟಿ ತಾನು ಮಾಡುತ್ತಾನೆ. ನಾವೇತಕ್ಕೆ ಅನುಸರಿಸಬೇಕು? ಜ್ಞಾನಲಾಭಕ್ಕೆ ಎಂದರೆ ಬೇಕಾದಹಾಗೆ ಬುಕ್ಕುಗಳಿವೆ. ಫುರಸತ್ತು ತೆಗೆದುಕೊಂಡು ೧—೨ ಸಾರಿ ಓದೋದು, ಬಿಸ್ಕಟ್ ಕಾಫೀ ಹೊಡೆದು ಸಿಕ್ರೇಟ್ ಸೇದಿ ಕೂತುಕೊಂಡು ಹಾಗಿಯೇ "ಥಿಂಕ್ ಮಾಡಿದರೆ ತಾನೇ ತೋರುತ್ತೆ." ಹೀಗೆ ವಾದಿಸುವ ಕಾಲ ಪ್ರಾಪ್ತವಾಗಿರುವಾಗ, 'ಯದ್ಯ ದಾ ಚರತಿ ಶ್ರೇಷ್ಠಃ' ಎಂದು ಪಾಶ್ಚಾತ್ಯರ ಮೇಲುಪಜ್ಙ್ಕೆ ಎಲ್ಲಾ ವಿಷಯುಗಳಲ್ಲಿಯೂ ಮೇಲಾಗಿಯೇ ಇರಲು, ಯಾರಿಗೆಯಾರು ಹೇಳುವರು? ಯಾರಮಾತನ್ನು ಯಾರುಕೇಳುವರು. ಅದರಿಂದ ಆ ಬ್ರಾಹ್ಮಣಿಕೆಯ ಭಾಂದಸವೊಂದೂ ಈಗ ನಡೆಯತಕ್ಕದ್ದಲ್ಲ. ಮತ್ತೇನಾದರೂ ಮತ ಜಾತಿ ಕುಲಾಚಾರ ವಿಷಯವಾಗಿ ಈ ಕಾಲದ ಬಾಲರನ್ನು ಮಾರ್ಗಕ್ಕೆ ತರಬೇಕೆಂದು ನಿರ್ಬಂಧಿಸಲು ಹೋದರೆ ತತ್ಕ್ಷಣವೇ ಆ ಜುಟ್ಟು ಜನಿವಾರಗಳನ್ನೂ ಕಿತ್ತು ಒಗೆದು ಸರ್ವಸುಲಭವಾಗಿ ಸಿದ್ಧವಾಗಿರುವ ಸರ್ವವ್ಯಾಪಕ ಪ್ರಸಿದ್ಧ ಸಿದ್ಧಾಂತವನ್ನೇ ಪ್ರವೇಶಮಾಡಿಬಿಡುವರು. ಅದರಿಂದ ಇವರನ್ನು ಮಾರ್ಗಕ್ಕೆ ತರಬೇಕಾದರೆ ಮೊದಲು ಮಹರ್ಷಿಗಳ ಮಾರ್ಗದತತ್ತ್ವೋಪದೇಶವು ಪ್ರಯೋಜನಕ್ಕೆ ಬಾರದೆಂದು ತೋರಿ ಬೇರೆ ದಾರಿಯಂ ತೋರಿಸಬೇಕಾಯ್ತು.

ಪೂರ್ವದಲ್ಲಿ ಇಷ್ಟು ನಾಗರಿಕತೆಯೂ ಸ್ವಾತಂತ್ರ್ಯವೂ ಇರಲಿಲ್ಲ. ಗುರುಗಳಲ್ಲಿ ಹಿರಿಯರಲ್ಲಿ ಭಯಭಕ್ತಿಗಳಿದ್ದುವು. ಹೇಳಿದಂತೆಯೆ ನಡೆಯುವ ಮರ್ಯಾದೆಯು ಇದ್ದುದರಿಂದ ಗುರುಶಿಷ್ಯಭಾವವು ಸರಿಯಾಗಿತ್ತು. ಈಗಲಾದರೋ ಅದೇಕೆ? ಇದೇಕೆ? ಎಂದು ಸರ್ವವಿಷಯುದಲ್ಲಿಯೂ ಕಾರಣವಾದವೇ ಪ್ರಬಲಿಸುತ್ತಿರುವುದರಿಂದ ಜಿಜ್ಞಾಸುವಿಗಾದರೂ ಕಾರ್ಯಕಾರಣಭಾವವಂ ತಿಳಿಸಿ ಭಕ್ತಿಹುಟ್ಟಿಸದೆ, ಭಯಪ್ರದರ್ಶನಮಾತ್ರದಿಂದಲೇ ಕಾರ್ಯನಿರ್ವಾಹವಾಗುವುದಿಲ್ಲ. ಮತ್ತು ವಿಪರೀತವಾಗಿ ಪರಿಣಮಿಸುತ್ತದೆ. ಅದರಿಂದ "ಉಪಾಯೇನತು ಯಚ್ಛಕ್ಯಂ" ಎಂದು ಮಕ್ಕಳಿಗೆ ಗುಡಜಿಹ್ವಿಕಾನ್ಯಾಯದಿಂದ ಮದ್ದು ನುಂಗಿಸಿದಂತೆ ಹೇಗಾದರೂ ಮಾಡಿ ನಿತ್ಯಕರ್ಮಾನುಷ್ಠಾನಾಭ್ಯಾಸವಂ

ಮೊದಲು ಮಾಡಿಸಿದ್ದರೆ ಮುಂದಕ್ಕೆ ಅದೇ ಮಹೋಪಕಾರ ಮಾಡುವುದರಲ್ಲಿ ಸಂದೇಹವಿಲ್ಲ. ಸರ್ವವಿಷಯಗಳಲ್ಲಿಯೂ ಅಭಿವೃದ್ಧಿಗೆ ಬಂದು ದಿನೇ ದಿನೆ ಹೊಸತತ್ವಗಳಂ ಕಂಡು ಹಿಡಿದು ಅವುಗಳ ಏರ್ಪಾಡುಗಳನ್ನು ಅನುಭವಕ್ಕೆ ಬರುವಂತೆ ನಡೆಯಿಸುತ್ತಿರುವ ಜನಾಂಗಗಳಲ್ಲಿ ಕೆಲವರ ಆಚರಣೆಯನ್ನೇ ಇಲ್ಲಿ ಮೇಲುಪಂತಿಯಾಗಿ ತೋರಿಸುವೆನು ನೋಡಿರಿ :—

ಪ್ರಕ್ಷಾಳನಾದಿ ಶೌಚವಿಧಿಯೇ ಸರಿಯಾಗಿ ತಿಳಿಯದವರಂ ಕುರಿತು ಸರ್ವರೋಗಕ್ಕೂ ಸ್ನಾನವೊಂದೇ ಚಿಕಿತ್ಸೆಯೆಂದು, ಕಟಿಸ್ನಾನ, ಲಿಂಗಸ್ನಾನ, ಬಾಷ್ಪಸ್ನಾನ, ಆತಪಸ್ನಾನ, ಅವಿದಾಹಿ ಪಥ್ಯ, ಇದಿಷ್ಟೇ ಸರ್ವೋಪದ್ರವಗಳಂ ಕಳೆಯುತ್ತವೆ ಯೆಂದು 'ಲೂಯಿಸ್‌ಕೂನ' ಯೆಂಬಾತನ ನ್ಯೂ ಸೈನ್ಸ್ ಆಫ್ ಹೀಲಿಂಗ್ ಎಂಬ ಪುಸ್ತಕವು ಹೇಳುತ್ತದೆ.

ಎಂದಿಗೂ ಕ್ಷುತ್ಪಿಪಾಸೆಗಳಂ ತಡೆಯುವ ಪದ್ಧತಿಯೇ ಇಲ್ಲದವರನ್ನು ಕುರಿತು ಎಡ್ವರ್ಡ್ ಹೂಕ್ ಡೂಯಿ ಎಂ. ಡಿ. ಎಂಬಾತನ 'ಟ್ರು ಸೈನಸ್ ಆಫ್ ಲಿವಿಂಗ್' (ಫ್ಯಾಸ್ಟಿಂಗ್ ಕ್ಯೂರ್) ಎಂಬ ಪುಸ್ತಕದಿಂದ ವಾರಕ್ಕೆ ಒಂದು ಸಲ ಉಪವಾಸ ಮಾಡಬೇಕೆಂದು ಬೋಧಿಸಲ್ಪಟ್ಟದೆ.

ಆಹಾರ ನಿಮಯವಿಚಾರವೇ ಇಲ್ಲದೆ ಮಹಾಕ್ರೂರರಾಕ್ಷಸಪ್ರಾಯರಾಗಿದ್ದು ತುರುಷ್ಕರಿಂದಲೂ ನಿಷಿದ್ಧವಾದ ಸೂಕರಮಾಂಸವನ್ನೂ ಬಿಡದೆ ಭಕ್ಷಿಸುತ್ತ ಭಕ್ಷ್ಯಾಭಕ್ಷ್ಯವಿವೇಕವೇ ಇಲ್ಲದವರಿಂದ ರೋಗವಿಲ್ಲದೆ ಸುಖವಾಗಿರಬೇಕೆಂದಿದ್ದರೆ ಸದಾ ಸಾತ್ವಿಕಾಹಾರವನ್ನೇ ಸೇವಿಸಬೇಕೆಂಬ ವಿಷಯವನ್ನು ಕುರಿತು ಅನೇಕ ಗ್ರಂಥಗಳು ಬರೆಯಲ್ಪಟ್ಟವೆ. ನೋಡಿರಿ, ಡೈಟ್ ಫೂಡ್ಸು (ಹೇಗ್), ಯೂರಿಕಾಸಿಡ್, (ಎಪಿಟೋಂ ಆಫ್ ದಿ ಸಬಜೆಕ್ಟ್), ಡೈಟ್ ಕೊರ್ಶ್ಚ್ (ಡಾಡ್ಸ್).

ವಾಕ್ಶುದ್ಧಿಯೇ ಇಲ್ಲದೆ ಸಮಯಾನುಸಾರ ದ್ರೋಹಾದಿಗಳಲ್ಲಿ ಪ್ರವರ್ತಿಸುತ್ತ ಸರ್ವೋಪಾಯದಿಂದಲೂ ಸ್ವಕಾರ್ಯಧುರಂಧರರಾದವರಿಂದ (ಮಿಸ್ಮೆರಿಜಂ) ಮಂತ್ರ, ತಂತ್ರ, ಶಕ್ತಿ ತೋರಿಸಲ್ಪಡುತ್ತಿದೆ.

ತೊಳೆಯುವುದಕ್ಕೆ ಸೋಪು, ಟೊಯಿಲ್ ಲೋಷನ್, ಮೊದಲಾದುವನ್ನುಪಯೋಗಿಸುವುದೆ ಹೊರತು ಮಣ್ಣನ್ನು ಕೈಯಲ್ಲಿಕೂಡ ಮುಟ್ಟದೆ ಯಿದ್ದವರಿಂದ ಮೃತ್ತಿಕಾಶೌಚ, ಮೃತ್ತಿಕಾಸ್ನಾನ, ಭೂಶಯನ, ದರ್ಭಾಸ್ತರಣ, ಇತ್ಯಾದಿ ವಾನಪ್ರಸ್ಥಧರ್ಮ ಬೋಧಕಗ್ರಂಥವು (ರಿಟರ್ನ ಟು, ನೇಚರ್) ಎಂದು ಜಸ್ಟ್ ಎಂಬಾತನಿಂದ ಬರೆಯಲ್ಪಟ್ಟಿರುವುದು.

ಸೂರ್ಯರಶ್ಮಿಗಳಿಂದೆಯೇ ಸರ್ವರೋಗ ನಿವೃತ್ತಿಯಾಗುವುದೆಂಬ ಹೊಸ ವಿಷಯವನ್ನು ಅನುಭವಕ್ಕೆ ತಂದುಕೊಂಡು ತರತರದ ಬಣ್ಣದ ಸೀಸೆಗಳಲ್ಲಿ

ನೀಲಿಸೀಸೆಗಳಲ್ಲಿ ಸಕ್ಕರೆಯನ್ನಾಗಲಿ ತುಂಬಿ ಬಿಸಿಲಲ್ಲಿರಿಸಿದ್ದು ಪರಿಣಾಮವನ್ನರಿತು ಕೊಡುವ ಪದ್ಧತಿಯೊಂದು (ಕ್ರೊಮೊಪೆಥಿಕ್) ರೂಢಿಗೆ ಬರುತ್ತಿದೆ.

ಬ್ರಹ್ಮಚರ್ಯ ಸ್ವರೂಪಜ್ಞಾನವೇ ಇಲ್ಲದೆ ಪಶ್ವಾದಿಗಳಂತೆ ಅಂಗನಾಲಿಂಗನಾದಿ ಸುಖವೇ ಸುಖವೆಂದಿದ್ದ ಮಹಾನುಭಾವರಿಂದ ದೀರ್ಘಾಯುಷ್ಯರಹಸ್ಯಬೋಧಕ ಗ್ರಂಥಗಳೇರ್ಪಟ್ಟಿವೆ. ಗ್ಯಾಜ್ ಎಂಬವನಿಂದ "ಹಾ ಟು ಲೀವ್ ಫಾರ್ ಎವರ್" ಎಂದು.

ಯೋಗಿಗಮ್ಯವಾದ ಜಲವಸ್ತಿಕರ್ಮರಹಸ್ಯವು, ಆಸನ ಪ್ರಾಣಾಯಾಮಾದಿಗಳ ರಹಸ್ಯಗಳು (ವ್ಯಾಯಾಮರೂಪದಿಂದಲು) ಇನ್ನೂ, ಆಯುರ್ವೇದ ಪ್ರಣೇತೃವಾದ ಅತ್ರೇಯಮಹರ್ಷಿಗಳ ವೈದ್ಯರಹಸ್ಯಸಾರವೆನಿಸಿದ ಸ್ವೇದಸೇಕೋಪನಾಹಾಸ್ಥಾಪನಾನ್ವಾಸನ ಕರ್ಮಗಳು ಸ್ಥಿರಾರೋಗ್ಯ ಚಿರಂಜೀವಿತ್ವಾರ್ಥಿಗಳಿಂದ ಅವಶ್ಯಾನುಷ್ಠೇಯಗಳೆಂದು ತಿಳಿಸುವ "ಸೈನ್ಸ್ ಆಫ್ ಏ ನ್ಯೂ ಲೈಫ್" ಎಂಬಪುಸ್ತಕವೆಂತೂ ೩೦ ವರ್ಷಗಳಿಂದ ಪ್ರಚಾರದಲ್ಲಿರುತ್ತಿದೆ.

ಒಂದಾನೊಂದುವೇಳೆ ನಾಸ್ತಿಕ್ಯದಿಂದ್ದವರಿಂದಲೂ, ಮದ್ಯಮಾಂಸಸೇವನಾದಿಗಳಿಂದ ಉದರಂಭರಿಗಳೆನಿಸಿ ಕಾಮಕ್ರೋಧಾದಿಗಳಿಂದ ನಿತ್ಯಸಂಸಾರಿಗಳಾಗಿ ಸದೈಹಿಕ ವ್ಯಾಪಾರ ನಿರತರಾಗಿದ್ದವರಿಂದಲೂ ತತ್ತ್ವಜ್ಞಾನ ಉಳ್ಳವರಾಗಲ್ಕೆ ಎಲ್ಲರೂ ಯೋಗಾಭ್ಯಾಸ ತತ್ಪರರಾಗಬೇಕೆಂದು "ಥಿಯೋಸಾಫಿಸ್ಟು" ಎಂಬ ಹೆಸರಿನಿಂದ ಮಹಾಸಂಘವೇ ಸ್ಥಾಪಿಸಲ್ಪಟ್ಟಿದೆ.

ಅಮರಿಕಾಖಂಡದಲ್ಲಿದ್ದವರನೇಕರು ಧೂಮಪಾನಾದಿಗಳಂ ಬಿಟ್ಟರೆ ನಾವು ಬದುಕುವುದು ಹೇಗೆ ಎಂದಿದ್ದವರು ಈಗೀಗ ತಮ್ಮ ಪೂರ್ವದುರಾಚಾರಗಳೆಲ್ಲವನ್ನೂ ಬಿಟ್ಟು ವೇಷಗಳನ್ನೂ ಬದಲಾಯಿಸಿಕೊಂಡು ಹಿಂದೂದೇಶದ ವೇದಾಂತಮತವೇ ಸರಿಯಾದುದೆಂದು ನಂಬುತ್ತ ತದನುಷ್ಠಾನೋದ್ಯೋಗದಲ್ಲಿರುತ್ತಿದ್ದಾರೆ.

ಈಗ ಈ ದೇಶದಲ್ಲಿ ಕೂಡ ಬ್ರಾಹ್ಮಣೇತರರು ತಮ್ಮ ತಮ್ಮ ಮಟ್ಟಿಗೆ ಬೇರೆಬೇರೆ ಸಂಘಗಳಂ ಮಾಡಿಕೊಂಡು ಸ್ವಸ್ವಾಚಾರ ಮತಂಗಳಂ ವೃದ್ಧಿಮಾಡಿಕೊಳ್ಳಬೇಕೆಂದಿರುವದು ಎಲ್ಲರಿಗೂ ಗೊತ್ತೇ ಇದೆಯಲ್ಲವೆ. ನಮ್ಮ ಬ್ರಾಹ್ಮಣರೂ ಹಾಗೆಯೇ ಐಕಮತ್ಯದಿಂದ ಸದ್ವೃತ್ತಸಮಾಜವನ್ನು ಅಭಿವೃದ್ಧಿಮಾಡಿಕೊಂಡ ಪಕ್ಷದಲ್ಲಿ ನಿತ್ಯ ಕರ್ಮಾನುಷ್ಠಾನವು ಫಲಿಸಲು ಆಗ ಬ್ರಾಹ್ಮಣಗೆ ಭೂಸುರತ್ವವು ಪುನರುಜ್ಜೀವಿತವಾಗಬಹುದೆಂದು ತೋರುತ್ತಿದ್ದೆ. ಆದರೆ ಆಸಮಾಸಜವು ಇದುವರೆಗೆ ಯಮನಿಯಮಾದ್ಯನುಷ್ಠಾನ ಭಂಜಕ

ಗಳಾಗಿ ಏರ್ಪಟ್ಟಿರುವ ಕೇವಲ ಭೋಜನೋತ್ಸವ ಸಂಘಗಳಂತೆ ಮಾತ್ರ ಆಗದೆ ಕ್ರಿಯಾಪರ್ಯವಸಾಯಿಯೆನಿಸಿ ಅನ್ವರ್ಥನಾಮವುಳ್ಳವರಾಗಬೇಕೆಂದು ಹಾರೈಸುವೆವು.

ಈಗೀಗ ನಮ್ಮದೇಶದ ಸಾಧುಗಳ ಸದಾಚಾರಗುಣವಂ ಗ್ರಹಿಸಿ ಆದ ರಂತೆ ತಮ್ಮ ಆಚಾರಗಳಂ ತಿದ್ದಿಕೊಳ್ಳುತ್ತ ವರ್ಣಾಂತರ ಖಂಡಾಂತರದವರು ಸ್ವಜಾತ್ಯಾಹಾರಾಚಾರವಿ ಹಾರಗಳನ್ನು ಕೂಡ ತ್ಯಾಗಮಾಡುತ್ತ ವೇದಮತ, ಯೋಗಮತ ವೆಂದು ಸಭೆಸೇರುತ್ತ, ಕರ್ಮಾನುಷ್ಠಾತೃಗಳಾಗುತ್ತಿದ್ದಾರೆ. ನಮ್ಮ ಚಿರಂಜೀವಿಗಳಾದ ಕುಲಪುತ್ರರಾದರೋ ಹಿತ್ತಲಗಿಡ ಮದ್ದಿಗೆ ಬಾರದೆಂಬಂತೆ ನಮ್ಮ ಪಾರಂಪರ್ಯಾಚಾರಂಗಳಂ ಬಿಟ್ಟು ಪ್ರಾಕೃತಚಿಕಿತ್ಸಾ ಪದ್ಧತಿಯವರಿಂದ ಕೂಡ ಪ್ರತ್ಯಾದಿಷ್ಟಗಳಾದ ಆಧುನಿಕಾಚಾರಗಳನ್ನು ಕಲಿಯುತ್ತಿದ್ದಾರೆ. ಆದರೆ ಇದು ಅವರ ತಪ್ಪಲ್ಲ. ನಾವು ಅವರಿಗೆ ಕಾರ್ಯಕಾರಣ ಭಾವಗಳಂ ಸನ್ಯಾಯವಾಗಿ ತಿಳಿಸಲವಕಾಶವಿಲ್ಲದುದರಿಂದಲೂ, ಇವರು ಯಾವಾಗಲೂ ಆ ಜನದಲ್ಲಿ ಗುರುತ್ವಬುದ್ಧಿಯಿಟ್ಟು ತದ್ವಿದ್ಯಾವ್ಯಾಸಕ್ತರಾಗಿರುವುದರಿಂದಲೂ, ಇವರಿಗೆ ಅವರ ಆಚಾರಾಹಾರಚೇಷ್ಟಾದಿಗಳು ತಿಳಿದಷ್ಟು ನಮ್ಮಾಚಾರಾದಿಗಳು ತಿಳಿಯದುದರಿಂದಲೂ ಹೀಗೆ ನಡೆಯುತ್ತಾಬಂದಿದೆ. ಈಗಲಾದರೂ ವಿವೇಕಿ ಗಳಾಗಿರುವ ವಿದ್ಯಾರ್ಥಿಗಳಿಗೆ ಈಗಿನ ಆಚರಣದಲ್ಲಿರುವ ಐಹಿಕ ಪಾರತ್ರಿಕ ಬಾಧಕಗಳನ್ನೂ, ಸ್ವಸ್ವವರ್ಣಾಶ್ರಮಾಚಾರಾನುಷ್ಠಾನದಲ್ಲಿರುವ ಮಹಾಫಲ ಗಳನ್ನೂ, ಸನ್ಯಾಯವಾಗಿ ತಿಳಿಸಿಕೊಡದೆ, ಈ ಸದಾಚಾರಕ್ರಮವನ್ನು ಅಭ್ಯಾ ಸವೇವಾಡಿಸದೆ, ಬಿಟ್ಟಿರುವುದು ನಮ್ಮತಪ್ಪು ಎಂಬುದೇ ಸ್ಪಷ್ಟವಾಗುತ್ತದೆ.

ಆದರೆ ಬಹುದೂರ ಮಾರ್ಗಬಿಟ್ಟು ಹೋಗಿಯೂ ಹೋಗುತ್ತಲೂ ಇರುವುದರಿಂದ ಈಗ ನಾವು ಮಾಡುವ ಹಿತೋಪದೇಶವು ಯಾರಿಗೂ ರುಚಿ ಸದೆಯೆ ಇರಬಹುದು. ಆದರೂ ಅದರಲ್ಲಿ ವಿಚಾರಪರರಾದ ಬುದ್ಧಿವಂತರು ನಿತ್ಯವೂ ತಾವು ತಾವು ಮಾಡುವ ಸರ್ವಕಾರ್ಯಗಳಲ್ಲಿಯೂ ಗುಣದೋಷ, ಗೌರವಲಾಘವಗಳೊಡನೆ ಸಕಾರಣವಿಮರ್ಶನ ಪುರಸ್ಸರವಾಗಿ ಶಾಸ್ತ್ರಮೂಲ ವನ್ನು ಹುಡುಕುತ್ತ ಬಂದರೆ ಇಹಪರಗಳೆರಡಕ್ಕೂ ಸಾಧಕವಿದು ಬಾಧಕ ವಿದು; ಇದು ನಿರಪಾಯಮಾರ್ಗವು, ಇದು ಸಾಪಾಯಮಾರ್ಗವು; ಇದು ಸಾಭಾವಿಕ ಇದು ಕೃತ್ರಿಮ; ಇದು ನಿರುಪಾಧಿಕ ಇದು ಸೋಪಾಧಿಕ; ಎಂಬೀ ವಿಷಯ ವಿಭಾಗವು ಗೊತ್ತಾಗದೆ ಇರದು.

ಮುಖ್ಯವಾಗಿ ಎಲ್ಲರೂ ನೀರೋಗಿಗಳೂ ದೀರ್ಘಾಯುಷ್ಮಂತರೂ ಆಗಿ ಸುಖಿಸಬೇಕೆಂದೇ ಯತ್ನಿಸುವರಲ್ಲದೆ ರೋಗ, ಅಲ್ಪಾಯುಸ್ಸು, ದುಃಖ, ನಮಗೆ ಇರಲಿ ಯೆಂದು ಯಾರೂ ಬಯಸರು. ಆದರೂ ಗಿಡದಮೇಲೆ ಕುಳಿತು

ಗಿಡದ ಬುಡಕ್ಕೆ ಕೊಡಲಿಯುಪೆಟ್ಟು ಹೊಡೆಯುವಂತೆ ದುರಾಚಾರಗಳಲ್ಲಿ ಪ್ರವರ್ತಿಸುವುದರಿಂದ ಅನುಭವಿಸುತ್ತಿರುವ ದಾರಿದ್ರ್ಯರೋಗಭಯಾದಿ ದುಷ್ಫಲವೇನೋ ದೇಶಕ್ಕೆ ತಪ್ಪಲಿಲ್ಲ. ಅದರಲ್ಲಿಯೂ ನಮ್ಮ ಬ್ರಾಹ್ಮಣರಲ್ಲಿ:—ಅಕಾಲಮರಣವು, ಆಡಿಗಡಿಗೆ ಆಸ್ಪತ್ರೆಗೆ ತಿರುಗುತ್ತ "ಔಷಧಕ್ಕೆ ಚಿಂತೆಯಿಲ್ಲ" ಎಂದು ಅತ್ಯಂಜಹಸ್ತದತ್ತೋಚ್ಛಿಷ್ಟೋದಕಪಾನವು, ರಸವಿಷ ಗಂಧಕಕ್ಷಾರ ಮದ್ಯಮಾಂಸರಸ ಮಿಶ್ರಿತವಾದ ಔಷಧಗಳನ್ನು ಅಮೇಧ್ಯವೆಂದು ತಿಳಿದಿದ್ದರೂ, ಬೇರೆ ಮಾರ್ಗತೋರದೆ ಅದನ್ನೇ ಸೇವಿಸುವುದು, ಎಷ್ಟು ಹಣವಂ ಸಂಪಾದಿಸಿದರೂ ಔಷಧವಂ ಕೊಳ್ಳುವುದಕ್ಕೂ ವೈದ್ಯರಿಗೆ ಕೊಡುವುದಕ್ಕೂ, ಹಿತಭ್ರಾಂತಿಯಿಂದ ಅಹಿತ ಪದಾರ್ಥ ಸೇವನಕ್ಕೂ ಸಾಲದಿರುವುದೂ; ಇಷ್ಟುಮಾಡಿದರೂ 'ಭಕ್ಷಿತೇ ಪಿ ಲಶುನೇ ನ ಶಾಂತೋ ವ್ಯಾಧಿಃ' ಎಂಬ ನ್ಯಾಯದಿಂದ ಒಂದರಿಂದ ಇನ್ನೊಂದು ವ್ಯಾಧಿ, ಅದರಿಂದ ಮತ್ತೊಂದು, ಈ ರೀತಿಯಾಗಿ ರೋಗಪರಂಪರೆಗಳನ್ನೇ ಅನುಭವಿಸುತ್ತಿರುವುದೇ ಹೊರತು ರೋಗವನ್ನು ಮೂಲೋತ್ಪಾಟನೆ ಮಾಡುವುದೂ, ಇಲ್ಲವೆ ರೋಗ ಬಾರದಂತೆ ಮುಂಜಾಗ್ರತೆಯಿಂದುಪಾಯವಾಗಿರುವುದೋ, ಈ ಭಾಗಕ್ಕೆ ಯಾರೂ ಮನಸ್ಸುಕೊಡದೆ "ಗತಾನುಗತಿಕೋಲೋಕಃ" ಎಂದು ಬ್ರಾಹ್ಮಣರೂ ಬ್ರಾಹ್ಮಣೇತರರಂತೆ ಆದರಲ್ಲಾ! ಎಂಬುದು ಎಲ್ಲರಿಗೂ ವಿದಿತವಿಷಯವೇ ಆಗಿರುವುದರಿಂದ ಅದನ್ನು ಅಧಿಕವಾಗಿ ಹೇಳುವುದನವಶ್ಯವು.

ಈ ವೈರೂಪ್ಯೌಷಧ ಪದ್ಧತಿಯಮೇಲೆ ಪ್ರಾಕೃತಚಿಕಿತ್ಸಾಪದ್ಧತಿಯವರು ಖಂಡನರೂಪವಾಗಿ ಅನೇಕ ಗ್ರಂಥಗಳಂ ಬರೆದಿರುತ್ತಾರೆ. ಅವುಗಳ ಮುಖ್ಯಾಂಶವನ್ನು ೧—೨ ಮಾತುಗಳಿಂದ ಇಲ್ಲಿ ದಿಕ್ಪ್ರದರ್ಶನಮಾಡಿ ಅದರ ಮುಂದೆ ನಮ್ಮ ನಿತ್ಯಕರ್ಮಾನುಷ್ಠಾನ ರೂಪಕರ್ಮಯೋಗ ಪದ್ಧತಿಸ್ವರೂಪವನ್ನು ತೋರಿಸುವೆನು. "ರೋಗವೆಂಬುದು ನಮ್ಮ ದುರಾಚಾರ ದುಷ್ಟಪದ್ಧತಿಗಳಿಂದ ಪ್ರಾಪ್ತವಾಗುವುವು. ಆದರಿಂದ ಮೊದಲು ಆ ದುರಭ್ಯಾಸಗಳನ್ನು (ಮದ್ಯಮಾಂಸ ಧೂಮ ನಸ್ಯ ಕಾಫಿ ಟಿ ಸೋಡಾ ಲೆಮನೆಡ್ ಪೆಪ್ಪರ್ಮೆಂಟ್, ಮುಂತಾದವು) ಪೂರ್ತಿಯಾಗಿ ಬಿಡಬೇಕು. ಔಷಧವೆಂದು ಯಾವುದೊಂದು ರಸವಿಷಾದಿವಸ್ತುವನ್ನು ಹೊಟ್ಟೆಯೊಳಗೆ ತೆಗೆದುಕೊಳ್ಳಕೂಡದು. ದೇಹಪೋಷಣಾರ್ಥವಾಗಿ ತೆಗೆದುಕೊಳ್ಳುವ ಆಹಾರಪದಾರ್ಥಗಳ ಪಾಕಗಳಲ್ಲಿ ಸಂಭಾರ ಚೂರ್ಣಸಂಯೋಗ ವೈಚಿತ್ರ್ಯದಿಂದ ನಾಲಿಗೆಗೆ ಬಗೆಬಗೆ ರುಚಿಕಲ್ಪನೆಮಾಡಿ ಹೊಟ್ಟೆತುಂಬಬಾರದು. ಮದ್ಯಮಾಂಸಗಳನ್ನು ಬಿಟ್ಟು ಸಸ್ಯಾಹಾರವನ್ನು ತೆಗೆದುಕೊಳ್ಳಬೇಕು. ಅದರಲ್ಲಿಯು ಹಾಲು ಹಣ್ಣು ಉತ್ತಮವು. ಬಾದಾಮಿ ಮುಂತಾದುದು ಆಗಬಹುದು. ಲೋಕದಲ್ಲಿ ದೈವಸೃಷ್ಟವಾದ ವಸ್ತು

ಗಳೆಲ್ಲವೂ ನನ್ನೊಬ್ಬನ ಹೊಟ್ಟೆಗೇ ಸಾಲದೆಂಬಾಶೆಯಿಂದ ಕಷ್ಟಪಟ್ಟು ಸಂಪಾದಿಸಿದ ದುಡ್ಡುಕೊಟ್ಟು ತಂದು ದೇಹಕ್ಕೆ ಹಿತವಾಗುವುದೆಂಬ ತಾತ್ಕಾಲಿಕಾನ್ಯಥಾಜ್ಞಾನದಿಂದ ಹೊಟ್ಟೆಗೆ ಭರ್ತಿ ಮಾಡಿ ದೇಹಸ್ವಭಾವವನ್ನು ಕೆಡಿಸಿಕೊಂಡು ಪರತಂತ್ರರಾಗಿ ದುಃಖಭಾಜನರಾಗಬಾರದು. ಬ್ರಹ್ಮಚರ್ಯವೇ ದೀರ್ಘಾಯುಸ್ಸಿಗೆ ಸಾಧಕವಾದುದು. ವಾರಕ್ಕೊಮ್ಮೆ ಹೊಟ್ಟೆಯನ್ನು ಬರಿದು ಮಾಡಬೇಕು. ಆಗಾಗ ವಸ್ತಿಕರ್ಮವೂ ಬೇಕು.

ಆರೋಗ್ಯ ದೀರ್ಘಸುಖಾಯುಸ್ಸು ಬೇಕೆಂದು ಬಯಸುವುದಾದರೆ ನವನಾಗರಿಕತೆಯಿಂದ ಈಗ ಪ್ರಾಪ್ತವಾಗಿರುವ ಅಹಿತಪದಾರ್ಥ ಸೇವನರೂಪವಾದ ದುರಾಚಾರಗಳೆಲ್ಲವನ್ನು ಕ್ರಮಕ್ರಮವಾಗಿ ಬಿಟ್ಟು ಸ್ವಾಭಾವಿಕ ಜೀವನದಲ್ಲಿರುತ್ತ, ಯಾವಾಗಲೂ ನಿರ್ಮಲವಾಯು ಸೇವನೆಮಾಡುತ್ತ ಪರಮದಯಾಳುವಾದ ಪರಮಾತ್ಮನಿಂದ ಆದಿಯಲ್ಲಿ ಸೃಷ್ಟವಾಗಿರುವ ಪ್ರಾಣಾಧಾರವಾದ ಜೀವನವೇ ನಮ್ಮ ಪ್ರಾಣಿವರ್ಗಕ್ಕೆಲ್ಲಾ ಜೀವನವು. ಅದೇ ಅಮೃತವು; ಅದೇ ನಮ್ಮನ್ನು ತಾಯಿಯಂತೆ ಎಲ್ಲಾ ಬೇನೆಗಳನ್ನು ಕಳೆದು ಕಾಪಾಡುವುದೆಂದು ದೃಢವಾಗಿ ನಂಬತಕ್ಕುದು. ಸರ್ವರೋಗನಿದಾನವೂ ಅಗ್ನಿವೈಷಮ್ಯವೊಂದೇ. ತತ್ಪರಿಹಾರೌಷಧವೂ ಶುದ್ಧಜಲವೊಂದೇ. ಆಹಾರಕ್ಕೆ ಅನುಗುಣವಾದ ವ್ಯಾಯಾಮವು, ವ್ಯಾಯಾಮಕ್ಕೆ ಅನುಸಾರಿಯಾದ ಆಹಾರವು ಅವಶ್ಯಕವು" ಎಂದು ಸಾರಾಂಶವು.

ಈಗ ಆಸ್ಪತ್ರೆಗಳಲ್ಲಿ ೧೦—೧೨ ವರುಷಗಳು ವಿವಿಧೌಷಧಗಳನ್ನು ಸೇವಿಸಿ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡು ಕಡೆಗಿದು ಅಪರಿಹಾರ್ಯವು ಯಾವಜ್ಜೀವವು ಅನುಭೋಗ್ಯವೇ ಸರಿ ಎಂದು ತೀರ್ಮಾನಹೊಂದಿ ಬಂದ ರೋಗಿಗಳನ್ನೂ ಈ ಪ್ರಾಕೃತಚಿಕಿತ್ಸಾ ಪದ್ಧತಿಯವರು ತೆಗೆದುಕೊಂಡು ನಿಶ್ಶೇಷಗುಣಮಾಡಿಯೂ ಮಾಡುತ್ತಲೂ ಇದ್ದಾರೆ. ಅಷ್ಟೇಕೆ? ಪ್ರಕೃತದಲ್ಲಿ ನಾವೇ ಕೆಲವರು ದೃಷ್ಟಾಂತವಾಗಿ ಪ್ರತ್ಯಕ್ಷದಲ್ಲಿಯೇ ಇದ್ದೇವೆ. ಪರೀಕ್ಷಕರು ಚೆನ್ನಾಗಿ ಪರಾಮರ್ಶಿಸಬಹುದು.

ಈ ಪ್ರಾಕೃತ ಪದ್ಧತಿಯವರಿಗೆ ರೋಗಲಕ್ಷಣ ವಿಭಾಗಸಂಖ್ಯಾದಿ ವಿಚಾರವೇ ಬೇಕಿಲ್ಲ. ಧನವ್ಯಯಮಾಡಿ ಮದ್ದು ಕೊಳ್ಳಬೇಕಾದುದು, ಸೀಮೆಯಿಂದ ತರಿಸಬೇಕಾದುದು, ವೈದ್ಯರಿಗೆ ವೇತನ ಪಾರಿತೋಷಿಕ ಕೊಡಬೇಕಾದುದು, ಕಹಿ ಒಗರು ವಿಷ ಕಾರ ಹುಳಿನೀರುಗಳನ್ನು ಕುಡಿಯುವುದು, ಕಟ್ಟು ಕಟ್ಟಿಸಿಕೊಂಡು ಶಸ್ತ್ರದಿಂದ ಕುಯಿಸಿಕೊಂಡು ನೋವು ತಡೆಯಲಾರದೆ ಮಾರ್ಫಿಯಾ ಇಂಜೆಕ್ಷನ್ ಮಾಡಿಸುವುದು, ಅಫೀಮು ಮುಂತಾದ ಮಾದಕವಸ್ತುಗಳಂ ನುಂಗಿ ಬುದ್ಧಿ ಕೆಡಿಸಿಕೊಳ್ಳುವುದು, ಇತ್ಯಾದಿ ಶ್ರಮಗಳು ಲೇಶಮಾತ್ರವೂ

ಇರುವುದಿಲ್ಲವು. ಈ ಪದ್ಧತಿಯನ್ನು ದೇಹಕ್ಕೆ ಒಡಂಬಡಿಸಿಕೊಂಡ ಬಳಿಕ ಅಂತಹ ಅಸಾಧ್ಯರೋಗಗಳೇ ಬರುವುದಿಲ್ಲವೆನ್ನಬಹುದು. ಒಂದುವೇಳೆ ಬುದ್ಧಿಲೋಪದಿಂದುಂಟಾದ ಅಹಿತಾಚರಣದಿಂದಲೂ ಇತರ ಸಂಕ್ರಮಾದಿಗಳಿಂದಲೂ ಬೇನೆಗಳು ಬಂದರೂ ಅವೇದನೆಗಳಿಗೆ ಮಾಡುವ ಈ ಪ್ರಾಕೃತ ಚಿಕಿತ್ಸಾಕ್ರಮವು ಹೊರಲಾರದ ಭಾರವನ್ನು ಹೊತ್ತು ಓಡುತ್ತಾ ಶ್ರಮಪಡುತ್ತಿರುವನಿಗೆ ಆ ಭಾರವನ್ನಿಳಿಸಿ ಗಾಳಿಬೀಸಿ ನೀರುಕೊಟ್ಟು ಕಾಲುಹಿಸಿಕಿ ಉಪಚರಿಸಿದರೆಂತಿರುವುದೊ, ಅಂತು, ಹಿತವಾಗಿರುವುದೇ ಹೊರತು ಲೇಶವಾದರೂ ಶ್ರಮತೋರದು. ಆದುದರಿಂದಲೇ ಇದು ಸ್ವಾಭಾವಿಕ ಚಿಕಿತ್ಸೆಯೆನಿಸಿಕೊಂಡಿದೆ. ಇದರಿಂದ ರೋಗವು ಕಡಮೆಯಾಗುತ್ತ ಬರುವುದೇ ಹೊರತು ರೋಗಾಂತರೋತ್ಪತ್ತಿಯಿಲ್ಲ. ಅದಕ್ಕು ಗುಣವೇ ಸರ್ವಸಮವಾದುದು.

ಈಗ ಈ ಸ್ವಾಭಾವಿಕ ಚಿಕಿತ್ಸಾಪದ್ಧತಿಯೆಂಬುದು ಶರ್ಮಣ್ಯದೇಶ ಅಂಗ್ಲದೇಶ ಕೇತುಮಾಲ(ಅಮರಿಕಖಂಡ ಮೊದಲಾದ ಸ್ಥಲಗಳಲ್ಲಿ ವ್ಯಾಪಿಸಿಕೊಂಡು ಈ ಗೀಗ ಈ ದೇಶದಲ್ಲಿಯೂ) ೧೫—೨೦ ವರುಗಳಿಂದ ಈಚೆಗೆ ಬ್ರಾಹ್ಮಣಾದಿ ಸರ್ವವರ್ಣದವರಲ್ಲಿಯೂ ಅಲ್ಲಲ್ಲಿ ದೀರ್ಘರೋಗಿಗಳಲ್ಲಿ ಮಾತ್ರ ಪ್ರಸರಿಸುತ್ತಿದೆ.ಇದು ಹೀಗೆಯೇ ಪ್ರಭುತ್ವದವರ ಮನಸ್ಸಿಗೆ ಬಂದು ಪ್ರಕಟವಾಗಿ ಪ್ರಾಕೃತ ಚಿಕಿತ್ಸಾಶಾಲೆಯೊಂದೇರ್ಪಟ್ಟಲ್ಲಿ ನಮ್ಮ ಪುಣ್ಯಕ್ಕೆಣೆಯೇ ಇಲ್ಲವೆನ್ನಬಹುದು. ಹೇಗೆಂದರೆ:—ಆರೋಗ್ಯಾರ್ಥವಾಗಿ ಇದರಲ್ಲಿ ಪ್ರವರ್ತಿಸಿದವರಿಗೆ ನಮ್ಮ ಪ್ರಾಚೀನಾಚಾರಗಳು ಅನುಭವಕ್ಕೆ ಬರುವುದರಿಂದ ವಿಶ್ವಾಸಾರ್ಹಗಳಾಗುವುವು. ಆಗ ನಮ್ಮುದ್ದೇಶವು ನೆರವೇರುವುದು. ಅದೆಂತೆಂದರೆ:—ಈಗ ಅಂತಹ ಅತ್ಯುತ್ತಮವಾದ ನಿರುಪಾಧಿಕ ಚಿಕಿತ್ಸಾಪದ್ಧತಿಯು ಅವರವರ ಬುದ್ಧಿಬಲದಿಂದ ಕಂಡು ಹಿಡಿಯಲ್ಪಟ್ಟು ಅತಿನೂತನವೆನಿಸಿ ವಿವಿಧವಾಗಿದೆಯಷ್ಟೆ. ಹೀಗೆ ಬಗೆಬಗೆಯಾಗಿರುವ ಈ ಪ್ರಾಕೃತ ಚಿಕಿತ್ಸಾ ಪದ್ಧತಿಗಳೆಲ್ಲವೂ ಒಂದೇ ಆಧಾರದ ಮೇಲೆ ಹರಡಿಕೊಂಡಿರುವುದರಿಂದ ಅವೆಲ್ಲವೂ ಸೇರಿ ನಮ್ಮ ಪ್ರಾಚೀನ ಮಹರ್ಷಿಗಳ ನಿತ್ಯಕರ್ಮಾನುಷ್ಠಾನ ಪದ್ಧತಿಯ ಏಕದೇಶದಲ್ಲಿ 'ಸರ್ವಂ ಹಸ್ತಿಪದೇ ಮಗ್ನಂ' ಎಂಬಂತೆ ಅಡಗಿದೆ ಎಂಬುದಂ ಸ್ಪಷ್ಟವಾಗಿ ಸದ್ವೃತ್ತ ರತ್ನಾವಳಿಯು ತೋರಿಸುತ್ತದೆ, ನೋಡಬಹುದು.

ಸರ್ವಮೂಲವೂ ಸರ್ವನಿದಾನವೂ ಆಗಿರುವ ಆ ಆಧಾರವು ಯಾವುದೆಂದರೆ ಅಚಿಂತ್ಯಾದ್ಭುತ ಶಕ್ತಿಯುಳ್ಳ ಸರ್ವಸ್ವತಂತ್ರನು ಸರ್ವಸತ್ತಾಪ್ರದನೂ ಸರ್ವವ್ಯಾಪಕನೂ ಆದ ನಿರ್ದೋಷಾಶೇಷ ಕಲ್ಯಾಣಗುಣಪರಿಪೂರ್ಣ ಶ್ರೀಮನ್ನಾರಾಯಣನ ವಿಭೂತಿಯೆನಿಸಿಕೊಂಡು ತದ್ವಶದಲ್ಲಿರುವ ಚಿದಚಿಲ್ಲಕ್ಷಣಪ್ರಕೃತಿಯೇ ಆ ಆಧಾರವೆಂದು ಗ್ರಹಿಸಬೇಕು. ಅದೆಂತೆಂದರೆ:—

ಗೀ॥ "ಭೂಮಿರಾಪೋ ಽನಲೋ ವಾಯುಃ ಖಂ ಮನೋ ಬುದ್ಧಿ ರೇವಚ ।
ಅಹಂಕಾರ ಇತೀಯಂ ಮೇ ಭಿನ್ನಾ ಪ್ರಕೃತಿ ರಷ್ಟಧಾ ॥
ಅಪರೇ ಯಮಿತಸ್ತ್ವನ್ಯಾಂ ಪ್ರಕೃತಿಂ ವಿದ್ಧಿಮೇ ಪರಾಂ ।
ಜೀವಭೂತಾಂ ಮಹಾಬಾಹೋ ಯಯೇದಂ ಧಾರ್ಯತೇ ಜಗತ್ ॥
ಪ್ರಕೃತಿಂ ಸ್ವಾಮಧಿಷ್ಠಾಯ ಸಂಭಾವಾ ಮ್ಯಾತ್ಮ ಮಾಯಯಾ ।
ವಿಷ್ಟಭ್ಯಾಹಮಿದಂ ಕೃತ್ಸ್ನ ಮೇಕಾಂಶೇನ ಸ್ಥಿತೋಜಗತ್ ॥
ಏತದ್ಯೋನೀನಿ ಭೂತಾನಿ ಸರ್ವಾಣೀತ್ಯುಪಧಾರಯ ॥
ತ್ರಿಭಿರ್ಗುಣ ಮಯೈರ್ಭಾ ವೈ ರೇಭಿಃ ಸರ್ವ ಮಿದಂ ಜಗತ್ ।
ಮೋ ಹಿತಂ ನಾಭಿಜಾನಾತಿ ಮಾಮೇಭ್ಯಃ ಪರಮವ್ಯಯಂ ॥

ಇತ್ಯಾದಿ ಭಗವದ್ವಾಕ್ಯದಿಂದ ಸರ್ವಪದ್ಧತಿಗಳಿಗೂ ಸರ್ವಶಕ್ತಿಗಳಿಗೂ ಮೂಲಾಧಾರವಾದ ಶ್ರೀ ಪರಮಾತ್ಮನ ಪ್ರಕೃತಿಯಲ್ಲಿ ಅಡಗದೆ ಇರುವುದು ಬೇರೆ ಯಾವುದುಂಟು ? ಸಾಕಲ್ಯವಾಗಿ ತತ್ಸ್ವರೂಪಜ್ಞಾನವೇ ನಮಗೆ ದುರ್ಲಭವಾಗಿರುವಾಗ ಈ ತ್ರಿಗುಣಾತೀತನಾದ ಆತನಂ ನಾವು ಗುಣಮೋಹಿತರಾಗಿರುತ್ತ ಕಾಣುವುದೆಂತು ?

ಅದಕ್ಕಾಗಿ ಪರಮ ಕಾರುಣಿಕನಾದ ಪರಮಾತ್ಮನು ನಮ್ಮಲ್ಲಿ ಪರಮಾನುಗ್ರಹ ಬುದ್ಧಿಯಿಂದ ನಮಗೆ ಪ್ರಾಪ್ತವಾಗಿರುವೀ ಪ್ರಕೃತಿಸಂಬಂಧವಾದ ದುಃಖಗಳನ್ನು ತಪ್ಪಿಸಿ ನಿತ್ಯಸುಖವಂ ಕೊಡಲೋಸುಗವೇ ತತ್ಪ್ರಾಪಕಮಾರ್ಗಪ್ರವೇಶಕ್ಕೆ ಅಜ್ಞರಾದ ನಮಗೆ ಆಜ್ಞೆಯಂ ಮಾಡಿ ಮೀರಿದರೆ ಕೆಡುವಿರೆಂದು ಬೋಧಿಸಿರುವನು.

ಶ್ಲೋ॥ ಶ್ರುತಿ ಸ್ಮೃತೀ ಮಮೈವಾ ಜ್ಞಾ ಯಸ್ತಾ ಮುಲ್ಲಂಘ್ಯ ವರ್ತತೇ ।
ಆಜ್ಞಾಚ್ಛೇದೀ ಮಮ ದ್ವೇಷ್ಯಃ ಸ ಮೇ ವಧ್ಯತಮೋ ಮತಃ ॥

ಎಂದು (ವೇದಧರ್ಮಶಾಸ್ತ್ರಗಳೇ ನನ್ನ ಅಜ್ಞೆ ; ಅದನ್ನು ಮೀರಿದವನು ನನಗೆ ದ್ವೇಷಿ ವಧಾರ್ಹನು. ಆ ವೇದಶಾಸ್ತ್ರಪ್ರಕಾರ ನಡೆಯುವನು ನನಗೆ ಪ್ರಿಯನೆಂದು ಭಾವ.) ಆದರಿಂದ ಆಶ್ರೌತಸ್ಮಾರ್ತಕರ್ಮವೇ ನಮ್ಮನ್ನು ಪ್ರಕೃತಿಹಿತಾಚರಣ ಮೂಲಕವಾಗಿ ಸರಿಯಾದ ದಾರಿಯಲ್ಲಿ ಪ್ರವೇಶಮಾಡಿಸುವುದರಿಂದ ಉತ್ತಾರಕವಾಗುತ್ತದೆ. ಅದು ಯಥಾವದನುಷ್ಠಿತವಾಗದೆ ದಂಭಾರ್ಥವಾದರೆ ಆಸುರವೆನಿಸಿ ಇಹಪರಸುಖಗಳೆರಡೂ ಇಲ್ಲದೆ ಅಧೋಗತಿ ಹೇತುವಾಗುವುದು. ಹಾಗಾಗದೆ ಆ ಕರ್ಮಮಾರ್ಗವು ನಮಗೆ ಫಲಕರವಾಗುವಂತೆ ಭಗವಂತನು ನಮಗೊಂದು ಉತ್ತಮೋಪಾಯವನ್ನು ತೋರಿಸಿ ಕೊಟ್ಟಿರುವನು. ಆ ಉಪಾಯವು ಸರ್ವಶಾಸ್ತ್ರಸಾರಭೂತವಾಗಿ ಸೂತ್ರಪ್ರಾಯವಾಗಿರುವುದರಿಂದ ಆಸೂತ್ರವನ್ನು ಸಾವಧಾನದಿಂದ ಮನಸ್ಸಿಗೆ ತಂದುಕೊಂಡು ಅನುಷ್ಠಿಸುತ್ತಾ

ಇರುವವನಿಗೆ ಪರಮಾಶ್ಚರ್ಯವೂ, ಅತ್ಯಂತಾನಂದವೂ, ಆ ಸೃಷ್ಟಿಕರ್ತಾರನಲ್ಲಿ ಉತ್ತಮ ಭಕ್ತಿಯೂ ಉಂಟಾಗದಿರದೆಂದು ಸುಪ್ರಸಿದ್ಧಭಗವದ್ವಾಕ್ಯವಾಗಿರುವುದರಿಂದ ಶಪಥಮಾಡಿ ಹೇಳಬಹುದು. ಆ ಸೂತ್ರವು ಅವುದೆಂದರೆ :—

ಗೀ॥ "ಮಾತ್ರಾಸ್ಪರ್ಶಾಸ್ತು ಕೌಂತೇಯ ಶೀತೋಷ್ಣಸುಖದುಃಖದಾಃ ।
ಆಗಮಾಪಾಯಿನೋಽನಿತ್ಯಾಸ್ತಾಂಸ್ತಿತಿಕ್ಷಸ್ವ ಭಾರತ ॥
ಯಂ ಹಿ ನ ವ್ಯಥಯನ್ತ್ಯೇತೇ ಪುರುಷಂ ಪುರುಷರ್ಷಭ ।
ಸಮ ದುಃಖಸುಖಂ ಧೀರಂ ಸೋಽಮೃತತ್ವಾಯ ಕಲ್ಪತೇ"॥ ಎಂದು

ಇದರ ಅರ್ಥವಿವರಣವು ಸದ್ವೃತ್ತರತ್ನಾವಳಿಯ ಇಂದ್ರಿಯಸರದಲ್ಲಿ ವ್ಯಕ್ತವಾಗುವುದು. ಅದರ ಮುಖ್ಯಾಭಿಪ್ರಾಯವಿಂತು :—ಇಂದ್ರಿಯಗಳೊಳಗೆ ಸ್ಪರ್ಶನೇಂದ್ರಿಯವು ಸರ್ವವ್ಯಾಪಕವಾದುದು. ಸರ್ವೇಂದ್ರಿಯಗಳಲ್ಲಿಯೂ ಸ್ಪರ್ಶವುಂಟು; ಅದು ಮನಸ್ಸಂಬಂಧದಿಂದಲೇ ಶಬ್ದಾದಿವಿಷಯಗಳಂ ಗ್ರಹಿಸುವುದು. ಗಾಢನಿದ್ರಾಮೂರ್ಛಾದಿಗಳಲ್ಲಿ ಶೀತೋಷ್ಣ ಸ್ಪರ್ಶಸಂಬಂಧವಿದ್ದರೂ ಇದು ಸೀತ ಇದು ಉಷ್ಣ ಎಂಬ ಮಾನಸಾನುಭವವಿಲ್ಲದುದರಿಂದ ಸುಖವೂ ತೋರದು ದುಃಖವೂ ತೋರದು. ಜಾಗ್ರದ್ದಶೆಯಲ್ಲಿಯೂ ಅಭಿಮಾನ ಸಹಿತವಾದ ಆ ಮಾತ್ರಾಸ್ಪರ್ಶಗಳೇ ತಮ್ಮತಮ್ಮ ವಿಷಯಜ್ಞಾನ ಮೂಲಕವಾಗಿ ಸುಖದುಃಖಗಳನ್ನು ಕೊಡುತ್ತವೆ. ಇವು ಎಂದಿಗೂ ಅನಿತ್ಯಗಳೇ ಆದುದರಿಂದ ಬರುತ್ತವೆ ಹೋಗುತ್ತವೆ ಎಂದು ಅವುಗಳನ್ನು ಲಕ್ಷ್ಯಮಾಡದೆ ತದಭಿಮಾನತ್ಯಾಗ ಪೂರ್ವಕವಾಗಿ ಆ ದ್ವಂದ್ವಗಳನ್ನು ಸಮಮಾಡಿಕೊಂಡು ಸಹಿಸುತ್ತ ಬರಬೇಕು. ಈ ಶೀತೋಷ್ಣವೀರ್ಯಜನ್ಯವಾದ ಇಂದ್ರಿಯಸನ್ನಿಕರ್ಷಗಳು ಯಾರನ್ನು ಬಾಧಿಸುವುದಿಲ್ಲವೋ ಅವನು ಮುಕ್ತಿಯೋಗ್ಯನಾಗುವನು. ಅವನೇ ಸಮದುಃಖಸುಖನು; ಎಂದರೆ ದುಃಖವು ಹೇಗೆ ಪುರುಷಾರ್ಥವಲ್ಲದುದರಿಂದ ಬಿಡತಕ್ಕುದೋ ವೈಷಯಿಕ ಸುಖವೂ ಹಾಗೆಯೇ ಮೋಕ್ಷಕ್ಕೆ ವಿರೋಧಿಯಾದುದರಿಂದ ಅನುಪಾದೇಯವೆಂದು ಪರಮಾರ್ಥ ತಾತ್ಪರ್ಯವು. ಆದರೆ ಅಭಿಮಾನತ್ಯಾಗವೆಂಬುದು ಉತ್ತಮಾಧಿಕಾರಿಜ್ಞಾನಿವಿಷಯಕವಾದುದರಿಂದ ನಮ್ಮಂತಹವರಿಗೇನಾಯ್ತು? ಎನ್ನಬಾರದು. ಸುಖದುಃಖಗಳಂ ಸಮಮಾಡಿಕೊಂಡು ಯುದ್ಧಮಾಡೆಂದು ಪ್ರವೃತ್ತಿಮಾರ್ಗವಂ ಮುಂದೆ ಬೋಧಿಸಿರುವುದರಿಂದ ಪ್ರಕೃತಿಹಿತಾಚರಣರೂಪಕರ್ಮಯೋಗಕ್ಕೂ ಇದೇ ಪ್ರಥಮ ಸೂತ್ರವಾಗಿದೆ. ಇನ್ನು "ಸಮದುಃಖಸುಖಃ ಕ್ಷಮೀ; ಶುಭಾಶುಭಪರಿತ್ಯಾಗೀ ಭಕ್ತಿಮಾನ್ಯಃ ಸಮೇಪ್ರಿಯಃ; ಶೀತೋಷ್ಣಸುಖದುಃಖೇಷು ಸಮಃ ಸಂಗವಿವರ್ಜಿತಃ; ಯೇ ತು ಧರ್ಮ್ಯಾಮೃತಮಿದಮುಪಾಸತೇ...ತೇತೀವಮೇ ಪ್ರಿಯಾಃ" ಇತ್ಯಾದಿ ಭಗವದ್ವಚನಗಳಿಂದ ಶೀತೋಷ್ಣ

ದಿದ್ವಂದ್ವ ಸಹನಾಭ್ಯಾಸರೂಪ ಭಕ್ತಿಯೋಗಕ್ಕೂ ಇದೇ ಸೂತ್ರಪ್ರಾಯವಾಗಿದೆ. ಹೀಗೆ ಜ್ಞಾನಯೋಗ, ಕರ್ಮಯೋಗ, ಭಕ್ತಿಯೋಗಗಳಿಗೆ ಮಾರ್ಗದರ್ಶಕವಾದ ಈ ಸೂತ್ರವು ಸ್ವಭಾವಚಿಕಿತ್ಸೆ (ಹೈಡ್ರೋಪೆಥಿಕ್, ವಾಟರ್‌ಕ್ಯೂರ್, ನೇಚರ್ ಕ್ಯೂರ್) ಎಂದು ಖಂಡಾಂತರದವರು ಕರೆಯುವ ಪ್ರಕೃತಿಹಿತಾಚರಣಕ್ಕೂ ಇದು ಮೂಲಸೂತ್ರವೆನಿಸಿದೆ. ಇದಕ್ಕೆ ಅನುಸಾರವಾಗಿಯೇ ಆಯುರ್ವೇದದಲ್ಲಿಯು ಸುಖದುಃಖನಿಮಿತ್ತಗಳಂ ಹೇಳುವ ಸಂದರ್ಭದಲ್ಲಿ ಅತ್ರೇಯ ಮುನಿ ವಚನವು ಹೀಗೆ ಇದೆ:—

ಶ್ಲೋ॥ ಧೀಧೃತಿ ಸ್ಮೃತಿ ವಿಭ್ರಂಶಃ ಸಂಪ್ರಾಪ್ತಿಃ ಕಾಲಕರ್ಮಣಾಂ ।
ಅಸಾತ್ಮ್ಯಾರ್ಥಾಗಮಶ್ಚೇತಿ ಜ್ಞಾತವ್ಯಾ ದುಃಖಹೇತವಃ ॥
ಧೀಧೃತಿಸ್ಮೃತಿವಿಭ್ರಷ್ಟಃ ಕರ್ಮ ಯತ್ಕುರುತೇ ಽಶುಭಂ ।
ಪ್ರಜ್ಞಾಪರಾಧಂ ತಂ ವಿದ್ಯಾತ್ಸರ್ವದೋಷ ಪ್ರಕೋಪಣಂ ॥
ಅಸತ್ಸ್ಯಮಿ ತಿ ತ ದ್ವಿದ್ಯಾದ್ಯನ್ನ ಯಾತಿ ಸಹಾತ್ಮತಾಂ ॥
ಹೀನಾತಿ ಮಿಥ್ಯಾಯೋಗೇಭ್ಯೋ ಯೋವ್ಯಾಧಿ ರುಪಜಾಯತೇ ॥
ಸುಖಹೇತುರ್ಮತಸ್ತ್ವೇಕಃ ಸಮಯೋಗಃ ಸುದುರ್ಲಭಃ ।
ನೇಂದ್ರಿಯಾಣಿನಚೈವಾರ್ಥಾಃ ಸುಖದುಃಖಸ್ಯ ಹೇತವಃ ।
ಹೇತುಸ್ತು ಸುಖದುಃಖಸ್ಯ ಯೋಗೋದೃಷ್ಟಶ್ಚ ತುರ್ವಿಧಃ ॥
ಸಂತೀಂದ್ರಿಯಾಣಿ ಸಂತ್ಯರ್ಥಾ ಯೋಗೋ ನ ಚ ನ ಚಾಸ್ತಿರುಕ್ ॥
ನಸುಖಂ ಕಾರಣಂ ತಸ್ಮಾದ್ಯೋಗ ಏವ ಚತುರ್ವಿಧಃ ॥
ನಾತ್ಮೇಂದ್ರಿಯಮನೋ ಬುದ್ಧಿಗೋಚರಂ ಕರ್ಮ ವಾ ವಿನಾ ।
ಸುಖಂ ದುಃಖಂ ಯಥಾ ಯಚ್ಚ ಬೋದ್ಧವ್ಯಂ ತತ್ಪ್ರಘೋಚ್ಯತೇ ॥
ಸ್ಪರ್ಶನೇಂದ್ರಿಯ ಸಂಸ್ಪರ್ಶಃ ಸ್ಪರ್ಶೋ ಮಾನಸ ಏವಚ ॥
ದ್ವಿ ವಿಧಃ ಸುಖದುಃಖಾನಾಂ ವೇದನಾನಾಂ ಪ್ರವರ್ತಕಃ ॥
ಯಸ್ತ್ವಗ್ನಿಕಲ್ಪಾ ನರ್ಥೇಭ್ಯೋ ಜ್ಞಾತ್ವಾತೇಭ್ಯೋ ನಿವರ್ತತೇ ॥
ಅನಾರಂಭಾದಸಂ ಯೋ ಗಾ ತ್ತಂದುಃಖಂನೋ ಪತಿಷ್ಠತೇ ॥

(ಬುದ್ಧಿಭ್ರಂಶ, ನಿಯಮಲೋಪ, ಕಾಲಕರ್ಮಗಳ ಸಂಯೋಗ, ಇವುಗಳಿಂದ ಯಾವ ಅಧರ್ಮವು ನಡೆಯುವುದೋ ಅದನ್ನು ಪ್ರಜ್ಞಾಪರಾಧವೆಂದು ಎಲ್ಲಾ ದೋಷಗಳನ್ನು ಕೆರಳಿಸುವುದೆಂದು ತಿಳಿಯಬೇಕು. ಶಬ್ದಾದಿವಿಷಯಗಳ ಹೀನಯೋಗ, ಅತಿಯೋಗ, ಮಿಥ್ಯಾಯೋಗಗಳಿಂದ ಒಡಲಿಗೆ ಹೊಂದದೆ ಯಾವರೋಗ ವುಂಟಾಗುವುದೋ ಅದನ್ನು ಅಸಾತ್ಮ್ಯವೆನ್ನುವರು. ಅದೇ ದುಃಖಕ್ಕೆ ಹೇತುವು. ಸುಖಕ್ಕೆ ಕಾರಣವಾದರೋ ಶಬ್ದಸ್ಪರ್ಶಾದಿಗಳ ಸಮ

ಯೋಗವೊಂದೇ ; ಅದು ದುರ್ಲಭವು. ಆದರಿಂದ ಸುಖದುಃಖಗಳಿಗೆ ಇಂದ್ರಿಯಗಳು ಇಂದ್ರಿಯಾರ್ಥಗಳು ಕಾರಣಗಳಲ್ಲ. ಮೇಲೆ ಹೇಳಿದ ಆ ನಾಲ್ಕುಬಗೆಯೋಗಗಳೇ ಸುಖದುಃಖಕಾರಣಗಳು. ಇಂದ್ರಿಯಗಳೂ ಇವೆ ಶಬ್ದಾದಿ ತದ್ವಿಷಯಗಳೂ ಇವೆ. ಇವೆರಡಕ್ಕೂ ಸಂಬಂಧವಿಲ್ಲದಮೇಲೆ ದುಃಖವೂ ಇಲ್ಲ, ಸುಖವೂ ಇಲ್ಲ. ಆತ್ಮ ಇಂದ್ರಿಯ ಮನಸ್ಸು ಬುದ್ಧಿಗಳಿಗೆ ಗೋಚರವಾದ ಕರ್ಮ ಹೊರತು ಸುಖದುಃಖಗಳಿಲ್ಲ, ಆದರಲ್ಲಿಯೂ ಸ್ಪರ್ಶನೇಂದ್ರಿಯದ ಸ್ಪರ್ಶವು ಮಾನಸ ಶಾರೀರವೆಂದು ಎರಡುಬಗೆಯಾಗಿ ಸರ್ವವೇದನೆಗಳಿಗೂ ಪ್ರವರ್ತಕವಾಗಿದೆ. ಆದುದರಿಂದ ಯಾವ ಬುದ್ಧಿವಂತನು ಶಬ್ದಾದಿವಿಷಯಗಳನ್ನು ಬೆಂಕಿಗೆ ಸಮವಾಗಿ ಭಾವಿಸಿ ಅವುಗಳಂ ಬಿಡುವನೋ ; ಇಲ್ಲವೆ ಬೆಂಕಿಯಂ ಬಳಸುವಂತೆ ಯಥೋಚಿತವಾಗಿ ಉಪಯೋಗಿಸಿಕೊಳ್ಳುವನೋ ಅವನಿಗೆ ದುಃಖವೇಬಾರದು.) ಇತ್ಯಾದಿ ತತ್ತ್ವವಂ ತಿಳಿಸಿ "ತಥಾ ಸುಖನಾಂಯೋಗಸ್ತು ಸುಖಾನಾಂ ಕಾರಣಂ ಸಮಃ" (ಸುಖವಿಷಯಗಳ ಸಮಯೋಗವೇ ಸುಖಕಾರಣವು). "ಸುಖಸಂಜ್ಞ ಕಮಾರೋಗ್ಯಂ ವಿಕಾರೋ ದುಃಖಮೇವಚ) ಮತ್ತೊಂದುಕಡೆ "ವಿಕಾರೋ ಧಾತುವೈಷಮ್ಯಂ ಸಾಮ್ಯಂ ಪ್ರಕೃತಿರುಚ್ಯತೇ" ಎಂದಿರುವುದರಿಂದ ಶೀತೋಷ್ಣಾದಿ ವೀರ್ಯವದ್ವಸ್ತುಗಳ ಸಮಯೋಗವೇ ಆರೋಗ್ಯಕ್ಕೆ ಹೇತು. ಕೇವಲ ಶೀತಸ್ಪರ್ಶವು, ಕೇವಲೋಷ್ಣಸ್ಪರ್ಶವು ರೋಗಪ್ರದವು. ಸಾಧಾರಣವಾಗಿ ವಾಸಂತಿಕ ವಾಯುವಿನಲ್ಲಿರುವ ಅನುಷ್ಣಾಶೀತಸ್ಪರ್ಶವು ಆರೋಗ್ಯ ಸುಖಸಂದಾಯಕವೆಂದು ಬಹು ಸ್ಥಲಗಳಲ್ಲಿ ಹೇಳಿರುವುದರಿಂದ ಶೀತೋಷ್ಣಸಮಯೋಗಾಭ್ಯಾಸವೇ ಶೌಚಾಚಮನ ಸ್ನಾನಸಂಧ್ಯಾಗ್ನಿ ಕಾರ್ಯಾದಿರೂಪ ನಿತ್ಯಾಕರ್ಮಯೋಗ ಪದ್ಧತಿಯೆಂಬೂ ಇದೇ ದೇಹಪ್ರಕೃತಿ ಹಿತಾಚರಣರೂಪ ಪ್ರಾಕೃತಚಿಕಿತ್ಸಾಕ್ರಮವೆಂದೂ ಸ್ಪಷ್ಟವಾಗುತ್ತದೆ.

ಪ್ರಕೃತದಲ್ಲಿ ವೈರೂಪ್ಯಚಿಕಿತ್ಸಾಪದ್ಧತಿಕ್ರಮವು ನಮ್ಮ ನಿತ್ಯಕರ್ಮಾನುಷ್ಠಾನರೂಪ ಪ್ರಕೃತಿ ಹಿತಾಚರಣಕ್ಕೆ ವಿರುದ್ಧವಾಗಿರುವುದರಿಂದ ಪ್ರಾಚೀನ ಮಹರ್ಷಿಗಳು ಸಾರೂಪ್ಯ ಚಿಕಿತ್ಸಾಕ್ರಮ ಬೋಧಕವಾದ ಸದಾರೋಗ್ಯಸಂಪಾದಕವಾದ ಶೌಚಾಚಮನ ಸ್ನಾನಸಂಧ್ಯಾವಂದನಾದಿ ನಿತ್ಯಕರ್ಮವಿಧಿಯನ್ನೂ, ತಲ್ಲೋಪದಿಂದ ಪ್ರಾಪ್ತವಾಗುವ ವ್ಯಾಧಿ ದೋಷ ಮಲಾಪರ್ಯಾಯವಾದ ಪಾಪಗಳಿಗೆ ಪರಿಹಾರಕವಾಗೆ ಚಿಕಿತ್ಸಾಪ್ರಾಯವಾದ ಪ್ರಾಯಶ್ಚಿತ್ತರೂಪ ನೈಮಿತ್ತಿಕ ಕರ್ಮವನ್ನೂ, ವಿಧಿಸಿ; ಈ ನಿತ್ಯನೈಮಿತ್ತಿಕ ಕರ್ಮದ್ವಾರದಿಂದ ಪ್ರಕೃತಿ ಹಿತಾಚರಣ ಮಾಡುತ್ತ ಇಹದಲ್ಲಿ ಆರೋಗ್ಯ ದೀರ್ಘಾಯುರ್ಜಿತೇಂದ್ರಿಯತ್ವಾದಿಗಳನ್ನು ಪಡೆದುಕೊಂಡು "ಧರ್ಮಾತುಸ್ಸುಖಂ ಚ

ಜ್ಞಾನಂಚ ಜ್ಞಾನಾನ್ಮೋಕ್ಷೋಧಿಗಮ್ಯತೇ" ಎಂದು ಪರದಲ್ಲಿ ಸ್ವರ್ಗಾದಿ ಸದ್ಗತಿಯಂ ಸಂಪಾದಿಸಿಕೊಳ್ಳಲೆಂದೇ ಸರ್ವಸ್ಮೃತಿಗಳಲ್ಲಿಯೂ ವರ್ಣಾಶ್ರಮಾಚಾರ ಕಾಂಡವೆಂದು ಪ್ರಾಯಶ್ಚಿತ್ತ ಕಾಂಡವೆಂದು ಭಾಗದ್ವಯವನ್ನು ಆಯುರ್ವೇದೋಕ್ತವಾದ ಸ್ವಸ್ಥವೃತ್ತಭಾಗ ಚಿಕಿತ್ಸಾಭಾಗಗಳಿಗೆ ವಿರೋಧವಿಲ್ಲದಂತೆ ಯೇರ್ಪಡಿಸಿರುವುದರಿಂದ ಪ್ರಾಚೀನ ಮಹರ್ಷಿಪ್ರೋಕ್ತಗಳಾದ ಧರ್ಮಶಾಸ್ತ್ರ ವೈದ್ಯಶಾಸ್ತ್ರಗಳೆರಡೂ ಸೇರಿ ಪ್ರಕೃತಿ ಹಿತಾಚರಣರೂಪವಾದ ಏಕಾರ್ಥಕ್ಕೆ ಬೋಧಕಗಳಾಗಿರುವುದರಿಂದ ಖಂಡಾಂತರದವರು ಕಂಡು ಹಿಡಿದು ಆಚರಣೆಗೆ ತರುತ್ತಿರುವ ಸರ್ವವಿಧಪ್ರಾಕೃತ ಚಿಕಿತ್ಸಾಪದ್ಧತಿಯೂ ಈ ನಿತ್ಯಕರ್ಮಾನುಷ್ಠಾನ ಪದ್ಧತಿಯಲ್ಲಿ ಅಡಗಿರುವುದಲ್ಲದೆ, ಅದರಲ್ಲಿಲ್ಲದ ಅನೇಕ ಯೋಗಸಿದ್ಧಿಗಳು ಕೂಡ ಈ ಕರ್ಮಯೋಗದಲ್ಲಿ ಅಡಗಿವೆ. ಇವೆಲ್ಲಕ್ಕೂ ಆಧಾರವಾಗಿರುವ ಆ ಪ್ರಕೃತಿಮಾತೆಯ ಮಹಿಮೆಯು ಅತ್ಯದ್ಭುತವಾಗಿದೆ ಯೆಂದು ಭಾರತ ಶಾಂತಿ ಪರ್ವದಲ್ಲಿ ೩೩೦—೩೩೧ ಅಧ್ಯಾಯಗಳಲ್ಲಿ ಉಕ್ತವಾಗಿದೆ. ಅದರ ಸಂಗ್ರಹವು ಇಲ್ಲಿ ತೋರಿಸಲ್ಪಟ್ಟಿದೆ:—

ಶ್ಲೋ॥ ವ್ಯಾಧಿ ಭಿ ರ್ಮಥ್ಯ ಮಾನಾನಾಂ ತ್ಯಜತಾಂ ವಿಪುಲಂ ಧನಂ।
ವೇದನಾಂ ನಾಪಕರ್ಷಂತಿ ಯತ್ನಮಾನಾ ಶ್ಚಿ ಕಿ ತ್ಸಕಾಃ ॥೧॥
ತೇಚಾಪಿ ನಿಪುಣಾ ವೈದ್ಯಾಃ ಕುಶಲಾಃ ಸಂಭೃತೌಷಧಾಃ ।
ವ್ಯಾಧಿಭಿಃ ಪರಿಕೃಷ್ಯಂತೇ ಮೃಗಾ ವ್ಯಾಧೈರಿವಾರ್ದಿತಾಃ ॥೨॥
ಕೇ ವಾ ಭುವಿ ಚಿಕಿತ್ಸಂತೇ ರೋಗಾರ್ತಾನ್ ಮೃಗಪಕ್ಷಿಣಃ ।
ಶ್ವಾಪದಾನಿ ದರಿದ್ರಾಂಶ್ಚ ಪ್ರಾಯೋ ನಾರ್ತಾ ಭವಂತಿ ತೇ ॥೩॥
ಘೋರಾನಪಿ ದುರಾಧರ್ಷಾನ್ ನೃಪತೀ ನುಗ್ರತೇಜಸಃ ।
ಆಕ್ರಮ್ಯಾದದತೇ ರೋಗಾಃ ಪಶೂನ್ ಮೃಗಗಣಾ ಇವ ॥೪॥
ನಧನೇನ ನರಾಜ್ಯೇನ ನೋಗ್ರೇಣ ತಪಸಾ ತಥಾ ।
ಸ್ವಭಾವಮತಿವರ್ತಂತೇ ಯೇ ನಿಯುಕ್ತಾಃ ಶರೀರಿಣಃ ॥೫॥
ಉಪರ್ಯುಪರಿ ಲೋಕಸ್ಯ ಸರ್ವೋಗಂತುಂ ಸಮೀಹತೇ ।
ಯತತೇಚ ಯಥಾಶಕ್ತಿ ನ ಚ ತದ್ವರ್ತತೇ ತಥಾ ॥೬॥
ಮಹಚ್ಚ ಫಲವೈಷಮ್ಯಂ ದೃಶ್ಯತೇ ಕರ್ಮಸಂಧಿಷು ।
ವಹನ್ತಿ ಶಿಬಿಕಾಮನ್ಯೇ ಯಾನ್ತ್ಯನ್ಯೇ ಶಿಬಿಕಾಗತಾಃ ॥೭॥
ಗರ್ಭಾಚ್ಛೋ ದ್ವಿಜಮಾನಾನಾಂ ಕ್ಷುದ್ರಾ ದಾಶೀವಿಷಾದಿವ ।
ಆಯುಷ್ಮಾನ್ ಜಾಯತೇ ಪುತ್ರಃ ಕಥಂ ಪ್ರೇತ್ಯ ಇವಾಭವತ್॥೮॥
ದೇವಾನಿಷ್ಟ್ವಾ ತಪಸ್ತಪ್ತ್ವಾ ಕೃಪಣೈಃ ಪುತ್ರ ಗೃದ್ಧಿಭಿಃ ।
ದಶಮಾಸಾನ್ ಪರಿಧೃತಾ ಜಾಯನ್ತೇ ಕುಲಪಾಂಸನಾಃ ॥೯॥

ಯೋಽಯಮಿಚ್ಛೇದ್ಯಥಾಕಾಮಂ ಕಾಮಾನಾಂ ತದವಾಪ್ನುಯಾತ್।
ಯದಿಸ್ಯಾನ್ನ ಪರಾಧೀನಂ ಪುರುಷಸ್ಯಕ್ರಿಯಾಫಲಂ ॥೧೦॥
ಅಚೇಷ್ಟಮಾನ ಮಾಸೀನಂ ಶ್ರೀಃ ಕಂಚಿದುಪತಿಷ್ಠತೇ।
ಕಶ್ಚಿತ್ಕರ್ಮಾನುಸೃತ್ಯಾನ್ಯೋ ನಾಪ್ರಾಪ್ಯ ಮಧಿಗಚ್ಛತಿ॥
ಸ್ವಭಾವಾದ್ಯತ್ನ ಮಾತಿಷ್ಠೇದ್ಯತ್ನವಾನ್ನಾವಸೀದತಿ ॥೧೧॥
ಜರಾಮರಣ ರೋಗೇಭ್ಯಃ ಪ್ರಿಯಮಾತ್ಮಾನ ಮುದ್ಧರೇತ್।
ಸುಖಾದ್ಬಹುತರಂ ದುಃಖಂ ಜೀವಿತೇ ನಾತ್ರ ಸಂಶಯಃ ॥
ಪ್ರಜ್ಞಯಾ ಮಾನಸಂ ದುಃಖಂ ಹನ್ಯಾಚ್ಛಾರೀರ ಮೌಷಧೈಃ।
ಏತದ್ವಿಜ್ಞಾನ ಸಾಮರ್ಥ್ಯಂನ ಬಾಲೈಃ ಸಮತಾ ಮಿಯಾತ್ ॥೧೨॥
ಅನಿತ್ಯಂ ಯೌವನಂ ರೂಪಂ ಜೀವಿತಂ ದ್ರವ್ಯ ಸಂಚಯಃ।
ಆರೋಗ್ಯಂ ಪ್ರಿಯಸಂವಾಸೋ ಗೃಧ್ಯೇತ್ತತ್ರ ನ ಪಂಡಿತಃ ॥೧೩॥
ಅಶೋಕಂ ಶೋಕನಾಶಾರ್ಥಂ ಶಾಸ್ತ್ರಂ ಶಾಂತಿಕರಂ ಶಿವಂ।
ನಿಶಮ್ಯ ಲಭತೇ ಬುದ್ಧಿಂ ತಾಂ ಲಬ್ಧ್ವಾ ಸುಖಮೇಧತೇ ॥೧೪॥
ಶೋಕಸ್ಥಾನ ಸಹಸ್ರಾಣಿ ಭಯಸ್ಥಾನ ಶತಾನಿಚ।
ದಿವಸೇ ದಿವಸೇ ಮೂಢ ಮಾವಿಶಂತಿ ನ ಪಂಡಿತಂ ॥೧೫॥
ನಾಸ್ತಿ ವಿದ್ಯಾಸಮಂ ಚಕ್ಷುರ್ನಾಸ್ತಿ ಸತ್ಯಸಮಂ ತಪಃ।
ನಾಸ್ತಿ ರಾಗಸಮಂ ದುಃಖಂ ನಾಸ್ತಿತ್ಯಾಗ ಸಮಂ ಸುಖಂ ॥೧೬॥
ನಿವೃತ್ತಿಃ ಕರ್ಮಣಃ ಪಾಪಾತ್ ಸತತಂ ಪುಣ್ಯ ಶೀಲತಾ।
ಸದ್ವೃತ್ತಿಃ ಸಮುದಾಚಾರಃ ಶ್ರೇಯ ಏತದನುತ್ತಮಂ ॥೧೭॥

(ರೋಗಗಳಿಂದ ಪೀಡಿತರಾಗಿ ಬೇಕಾದಷ್ಟು ಧನತ್ಯಾಗ ಮಾಡತಕ್ಕವರ ವೇದನೆಯನ್ನು ಆ ಚಿಕಿತ್ಸಕರು ಕಳೆಯಲಾರರು. ಕುಶಲರಾದ ಆ ವೈದ್ಯರು ಕೂಡ ಎಷ್ಟು ಔಷಧವುಳ್ಳವರಾದರೂ ಬೇಡರಿಂದ ಮೃಗಗಳು ಬಾಧಿಸಲ್ಪಟ್ಟಂತೆ ರೋಗಪೀಡಿತರಾಗುತ್ತಾರೆ. ಲೋಕದಲ್ಲಿ ವ್ಯಾಧಿಪೀಡಿತಗಳಾದ ಮೃಗಪಕ್ಷ್ಯಾದಿಗಳನ್ನೂ, ದರಿದ್ರರನ್ನೂ, ಯಾರು ಉಪಚರಿಸುತ್ತಾರೆ? ಬಹಳಮಟ್ಟಿಗೆ ಅವರು ಆರೋಗ್ಯದಿಂದಲೇ ಇರುತ್ತಾರೆ. ಮತ್ತು ಬಲಿಷ್ಠರೆನಿಸಿದ ರಾಜರನ್ನೇ ರೋಗಗಳಾವರಿಸುತ್ತಿವೆ. ಆದರಿಂದ ಈ ದೇಹಧಾರಿಗಳು ಯಾವೂಧನ ರಾಜ್ಯ ತಪಸ್ಸುಗಳಿಂದ ಕೂಡ ಸ್ವಭಾವವನ್ನು ಮೀರಲಾರರು. ಆದರೆ ಎಲ್ಲರೂ ಮೇಲೆಮೇಲೆ ಹೋಗಲೆಳಸಿ ಯತ್ನಿಸುತ್ತಾರೆ. ಹಾಗೆ ಇರಲು ಸಾಧ್ಯವಾಗದು. ಇನ್ನೂ ಪರ್ಯವಸಾನದಲ್ಲಿ ಫಲವ್ಯತ್ಯಾಸವೂ ಬಹಳವಾಗಿದೆ. ಕೆಲವರು ಪಾಲಕಿಯಲ್ಲಿ ಕುಳ್ಳಿರುವರು, ಕೆಲವರು ಹೊರುವರು ಕೆಲವರು

ಸರ್ಪಾದಿಗಳಂ ಕಂಡಂತೆ ಗರ್ಭಕ್ಕೆ ಹೆದರುವರು. ಅವರಿಗೇ ಆಯುಷ್ಮತ್ಪುತ್ರನು ಜನಿಸುವನು. ಮತ್ತೆ ಕೆಲವರು ಪುತ್ರಾರ್ಥಿಗಳಾಗಿ ತಪಸ್ಸುಮಾಡಿ ಹರಕೆ ಹೊತ್ತು ಹತ್ತುತಿಂಗಳು ಬಸುರಂ ಧರಿಸಿ ಕಡೆಗೆ ಕುಲದೂಷಕನನ್ನೇ ಪಡೆಯುವರು. ಅದರಿಂದ ಜನರು ತಮ್ಮ ಕೋರಿಕೆಗಳ ಪ್ರಕಾರ ಫಲವನ್ನು ಪರಾಧೀನವಿಲ್ಲದೆ ಪಡೆಯುವರಾಗಿದ್ದರೆ ಯಾವನು ಯಾವುದನ್ನು ಅಪೇಕ್ಷಿಸುವನೋ ಅವನು ಅದನ್ನು ಸುಲಭವಾಗಿ ಹೊಂದಬಹುದಲ್ಲಾ! ಕೆಲವುಕಡೆ ಸುಮ್ಮನಿರುವಗೆ ಸಂಪತ್ತು ಬರುವುದುಂಟು. ಕೆಲಸಮಾಡುವವನೂ ತಾನು ಕೋರಿದುದನ್ನು ಪಡೆಯದೆ ತಪ್ಪಿ ಹೋಗುವುದುಂಟು. ಆದುದರಿಂದ ಈ ಭಾಗದಲ್ಲಿ ಕಾರಣವಿಮರ್ಶೆಯಂ ಮಾಡಿದರೆ ಸ್ವಭಾವವನ್ನು ಚೆನ್ನಾಗಿತಿಳಿದು ಅದನ್ನು ಮೀರದೆ ಯತ್ನಿಸುವನೇ ಕೆಡದೆ ಇರುವನು. ಈ ಬಾಳಿನಲ್ಲಿ ಸುಖಕ್ಕೆ ಸಾವಿರಪಾಲು ಹೆಚ್ಚಾಗಿ ದುಃಖವುಂಟು. ಈ ವಿಷಯದಲ್ಲಿ ಸಂದೇಹಿಸಬಾರದು. ಅದರಿಂದ ರೋಗ ಮುಪ್ಪು ಮರಣ ಇತ್ಯಾದಿ ಕಷ್ಟಗಳ ದೆಸೆಯಿಂದ ಪ್ರಿಯವಾದಾತ್ಮನನ್ನು ಉದ್ಧರಿಸಬೇಕು. ಮಾನಸದುಃಖಗಳನ್ನು ಪ್ರಜ್ಞೆಯಿಂದಲೂ, ಶಾರೀರ ರೋಗಗಳನ್ನು ಔಷಧಗಳಿಂದಲೂ, ಕಳೆದುಕೊಳ್ಳುವುದೇ ವಿಜ್ಞಾನದಸಾಮರ್ಥ್ಯವು. ಈ ಭಾಗದಲ್ಲಿ ಬಾಲಕನಿಗೆ ಸಮನಾಗಬಾರದು. ಅದರಿಂದ ಪಂಡಿತನು ಪ್ರಾಯ, ರೂಪ, ಪ್ರಾಣ, ಹಣ ಆರೋಗ್ಯ, ಪ್ರಿಯರ ಸಹವಾಸ, ಇವೆಲ್ಲವೂ ಅನಿತ್ಯವೆಂದೇ ತಿಳಿದು ಈ ವಿಷಯದಲ್ಲಿ ಅತ್ಯಾಶೆ ಪಡಬಾರದು. ಮುಖ್ಯವಾಗಿ ಶೋಕನಿವೃತ್ತಿಗೋಸ್ಕರವಾಗಿ ಶೋಕಪರಿಹಾರಕವಾದ, ಶಾಂತಿಯನ್ನುಂಟುಮಾಡುವ ಶುಭಶಾಸ್ತ್ರವನ್ನುಶ್ರವಣ ಮನನಂ ಮಾಡಿ ಉತ್ತಮ ಬುದ್ಧಿಯಂ ಪಡೆಯಬೇಕು. ಆ ಬುದ್ಧಿ ಬಂದ ಮೇಲೆಯೇ ಸುಖಿಯಾಗುವನು. ಸಾಮಾನ್ಯವಾಗಿ ಚಿತ್ತಚಾಪಲ್ಯವನ್ನುಂಟುಮಾಡಿ ಸುಖವನ್ನು ಹಾಳುಮಾಡುವ ಅನೇಕಶೋಕದೆಡೆಗಳೂ ಬಗೆಬಗೆಯ ಭಯವಿಷಯಗಳೂ, ಪ್ರತಿದಿನದಲ್ಲಿಯೂ ಮೂಢಗೆ ಪ್ರಾಪ್ತವಾಗುವುದಲ್ಲದೆ ಪಂಡಿತಗೆ ಬಾರವು. ವಿದ್ಯೆಗೆ ಸಮಾನವಾದ ಕಣ್ಣು, ಸತ್ಯಕ್ಕೆ ಸಮಾನವಾದ ತಪಸ್ಸು, ಕಾಮಕ್ಕೆ ಸಮಾನವಾದ ದುಃಖವು, ತ್ಯಾಗಕ್ಕೆ ಸಮವಾದ ಸುಖವೂ ಇಲ್ಲ. ಆದುದರಿಂದ ದುರಾಚಾರ (ಪಾಪ) ನಿವೃತ್ತಿಯು, ಯಾವಾಗಲೂ ಧರ್ಮಶೀಲತ್ವವೂ ಸದ್ವರ್ತನವೂ ಸದಾಚಾರವೂ, ಇವೆಲ್ಲವು ನರಗೆ ಉತ್ತಮವಾದ ಶ್ರೇಯಸ್ಕರ ವಿಷಯಗಳು. ಅದರಿಂದ ಇವುಗಳೇ ಸದಾನುಷ್ಠೇಯಗಳೆಂದು ಭಾರತವು ಸಾರುತ್ತಿದೆ.)

ಹೀಗೆ ಸ್ವಭಾವ ಹಿತಾಚರಣರೂಪವಾದ ನಿತ್ಯಕರ್ಮವು ಸರ್ವಸಂಪ್ರತಿಪನ್ನವು ಸರ್ವಾನಿಷ್ಟನಿವರ್ತಕವು ಉಭಯಲೋಕಸಾಧಕವೂ ಆಗಿರುವುದು.

ಹೀಗಿದ್ದರೂ 'ಯತ್ರಗುಣಾ ಸ್ತತ್ರದೋಷಾಃ' ಎಂಬ ನ್ಯಾಯದಿಂದ ಇದರಲ್ಲಿ ತೋರುವ ದೋಷವೇನೆಂದರೆ:—ಇಂದ್ರಿಯಲೌಲ್ಯ ಮನಶ್ಚಾಂಚಲ್ಯಗಳನ್ನೂ, ಆಧುನಿಕ ವಿದ್ಯಾಮಹಿಮೆಯಿಂದುಂಟಾದ ವಿವೇಕಶೂನ್ಯ ಪಂಡಿತಂಮನ್ಯಾಭಿಮಾನವನ್ನೂ, ಆ ಬಾಲ್ಯಮಭ್ಯಸ್ತವಾಗಿ ಬಂದಿರುವ ಒಡಹುಟ್ಟಿದಂತಿದ್ದ ಆಲಸ್ಯಜನ್ಯ ದುರಾಚಾರವನ್ನೂ, ಸಂಸರ್ಗದಿಂದುಂಟಾದ ನಾಸ್ತಿಕ್ಯದ ಮಗುವಾದ ಮೈಗಳ್ಳತನವನ್ನೂ, ವ್ಯರ್ಥವಾಗಿ ಕಳೆದುಕೊಳ್ಳಬೇಕಾಗಿದೆಯಲ್ಲಾ ಎಂಬುದೊಂದೇ ದೊಡ್ಡದೋಷವಾಗಿಯೂ ಇಷ್ಟುದಿವಸಗಳಿಂದ ನಮ್ಮನ್ನು ಆಶ್ರಯಿಸಿರುವ ಇವರಿಂದ ನಾವು ತಪ್ಪಿಸಿಕೊಳ್ಳುವುದು ತುಂಬ ಶ್ರಮಸಾಧ್ಯವಾಗಿಯೂ ಇದೆ.

ಆದರೆ ಪ್ರಾರಂಭದಲ್ಲಿ ಸ್ವಲ್ಪಶ್ರಮಪಟ್ಟು ಕಣ್ದೆರೆದು ನೋಡಿ ಈ ಜಗನ್ನಿಯಾಮಕನು ದೇಶಕಾಲಗಳಿಂದ ಅಪರಿಚ್ಛಿನ್ನನೂ ವ್ಯಾಪಕನೂ ಆದ ಶ್ರೀಪರಮಾತ್ಮನನ್ನು ತದ್ವಿಭೂತಿಯೆನಿಸಿದ ಪ್ರಕೃತಿತತ್ತ್ವಗಳನ್ನೂ ಶಾಸ್ತ್ರವಿಚಾರಪುರಸ್ಸರವಾಗಿ ನಂಬಿ ಭಕ್ತಿಶ್ರದ್ಧಾಪೂರ್ವಕ ಗುರು ಶುಶ್ರೂಷಾದಿಗಳಿಂದ ನಿತ್ಯಕರ್ಮಾನುಷ್ಠಾನ ರಹಸ್ಯಗಳಂ ತಿಳಿದು ಕೆಲವುಕಾಲ ಇದೊಂದು ಹೊಸ ವಿಷಯವನ್ನು ಪರೀಕ್ಷಿಸಿ ನೋಡುವ (ಛಾನ್ಸು) ಎಂದು ಹಠದಿಂದಾದರೂ ಅನುಷ್ಠಿಸುತ್ತ ಬಂದವನು ಜಾತ್ಯಂಧನು ಕಣ್ಣನ್ನು ಪಡೆದಂತೆ, ಮೂಕನು ಮಾತಿನ ಜಾಣತನವನ್ನು ಹೊಂದಿದಂತೆಯೂ ತನಗೆ ತಾನೇ ಆನಂದಾಬ್ಧಿಮಗ್ನನಾಗುವನು. ಮತ್ತು ಅವನಿಗೆ ಗುರು ದೈವ ವೇದಶಾಸ್ತ್ರಗಳಲ್ಲಿ ದೃಢತರ ಪ್ರತ್ಯಯವೂ ಮಹರ್ಷಿಗಳಲ್ಲಿಯೂ ವೃದ್ಧರಾದ ಹಿರಿಯರಲ್ಲಿಯೂ ನಿರಂತರ ಭಕ್ತಿಯೂ, ಸದಾರೋಗ್ಯದಿಂದ ಇಂದ್ರಿಯಪ್ರಸಾದ ಬುದ್ಧಿವಿಕಾಸಾದಿ ನಿಜಧರ್ಮಗಳೂ, ಶಾಂತಿದಯಾದಾಕ್ಷಿಣ್ಯಾದಿ ಸದ್ಗುಣಗಳೂ ದಿನದಿನಕ್ಕೂ ಹೆಚ್ಚುತ್ತ ಬರುವುದರಿಂದ ದೀರ್ಘಾಯುಷ್ಮಂತನಾಗುವನು. ಆಲಸ್ಯಾನಾಚಾರಾದಿ ಪ್ರಾಚೀನ ದುರ್ದೋಷಗಳೆಲ್ಲವೂ ತಪನೋದಯದಲ್ಲಿ ತಮಸ್ಸಿನಂತೆ ತಾನಾಗಿಯೇ ತೊಲಗುವುವೆಂಬುದು ನಿಃಸ್ಸಂಶಯವು.

ಹೀಗೆ ಸ್ವಧರ್ಮತತ್ಪರನಾದ ವಿಪ್ರನು ದಂಭ, ದರ್ಪ, ಅಶುಚಿತ್ವ, ಅಸತ್ಯ, ಅನಾಚಾರ, ಹಿಂಸೆ, ಲೋಭ, ಅಜ್ಞಾನ, ಅಭಿಮಾನ, ಕ್ರೋಧ, ನೈಷ್ಠುರ್ಯಾದಿ ರಾಕ್ಷಸ ಸಂಪತ್ತನ್ನು ಸಾಧ್ಯವಾದಮಟ್ಟಿಗೆ ಬಿಡುತ್ತ ಮನೋವಾಕ್ಕಾಯ ಕರ್ಮಗಳಿಗೆ ಐಕರೂಪ್ಯವಿರುವಂತೆ ಋಜುತ್ವ ಶಮದಮ ಸತ್ಯ ಶೌಚಾದಿಗಳು ಬ್ರಹ್ಮಚರ್ಯ ಸ್ವಾಧ್ಯಾಯ, ಯಜ್ಞ, ದಾನ, ತಪಸ್ಸುಗಳು ಅಭಯ ಭೂತದಯಾ ಚಿತ್ತಪ್ರಸಾದಗಳು ಮೊದಲಾದ ದೈವಸಂಪತ್ತನ್ನು ಹೊಂದುತ್ತ; ಕ್ರಮವಾಗಿ ಜ್ಞಾನಾಧಿಕನಾಗುತ್ತ ಬಂದಹಾಗೆಲ್ಲಾ ಭೂದೇವತ್ವವೂ ತಾನಾಗಿಯೇ ಲಭಿಸು

ವುದು. ಆದುದರಿಂದ ಅದೈವಸಂಪದಕ್ಕೆ ದಾರಿಯಾಗಿರುವುದು ಸತ್ವಶುದ್ಧಿ; ಅದಕ್ಕೆ ರಾಜಸತಾಮಸಗಳಾದ ಆಹಾರಾಚಾರಾದಿಗಳ ತ್ಯಾಗಪೂರ್ವಕವಾದ ಆಯುರಾರೋಗ್ಯಾದಿವರ್ಧಕ ಸಾತ್ವಿಕಾಹಾರಾಚಾರಚೇಷ್ಟಾದಿಗಳು ಅವಶ್ಯಕಗಳೆಂದು ಫಲಿತವಾಗುವುದರಿಂದ ಬ್ರಾಹ್ಮಣಬಾಲಕನು ಸದಾ ಸದಾಚಾರ ತತ್ಪರನಾಗಿ ಸಮಾನರಲ್ಲಿ ಉತ್ತಮತ್ವವಂ ಪಡೆಯಲಿ ಯೆಂದೇ ಈ ಸದ್ವೃತ್ತಾನುಷ್ಠಾನ ಪ್ರಚಾರದಲ್ಲಿ ಪ್ರವರ್ತಿಸಿರುವೆನು.

ಆದುದರಿಂದ ಮಹನೀಯರು ಸದ್ವೃತ್ತವಂ ಪರಿಕಿಸಿ ಬಾಲಕರಿಗೆ ಬಾಲ್ಯದಲ್ಲಿಯೇ ಕಲಿಸಿ ಅವರಿಂದ ಯಥಾಶಕ್ತಿ ಅನುಷ್ಠಾನವನ್ನು ಮಾಡಿಸುತ್ತ ಬರಬೇಕೆಂದು ಗುಣಗ್ರಾಹಿ ಸದ್ವಿದ್ವಜನವಂ ಪ್ರಾರ್ಥಿಸುವೆನು. ಮತ್ತು ಇದರಲ್ಲಿ ನನ್ನ ಬುದ್ಧಿದೋಷದಿಂದುಂಟಾದ ನ್ಯೂನಾತಿರೇಕ ಪುನರುಕ್ತ್ಯಾದಿ ದೋಷಗಳು ತೋರಬಂದರೂ ಮುಖ್ಯ ವಿಷಯದಲ್ಲಿ ದೃಷ್ಟಿ ಇಟ್ಟು ಬಾಲಭಾಷಿತದಂತೆ ಅದನ್ನು ಮನ್ನಿಸಬೇಕೆಂದೂ ಸಹಜ ಶಾಂತಿ ಭೂಷಣರಾದ ಸಾಧು ಜನರಂ ಬೇಡುವೆನು.

ಶ್ಲೋ॥ ಯೋಗುಣಃ ಸುಜನಾಭ್ಯಾಶೇ ದೋಷೋ ಽಸಾ ದುರ್ಜನಾಂತಿಕೇ ।
ಯದಂಬು ಮೌಕ್ತಿಕಂ ಶುಕ್ತೌ ತದ್ದೂಷ್ಯಂ ಪಂಕದೂಷಿತೇ ॥

ಗ. ವೈ. ಕೃಷ್ಣಾಚಾರ್ಯ.

N. B.—ಆ ಸದ್ವೃತ್ತವು ಯಾವುದು? ಅದನ್ನು ಅನುಷ್ಠಿಸುವ ಕ್ರಮವು ಹೇಗೆ? ಅದರಿಂದಾಗುವ ಫಲವೇನು? ಅದಕ್ಕೆ ಅಧಿಕಾರಿಗಳು ಯಾರು? ಅದನ್ನಾಚರಿಸದೆ ಬಿಟ್ಟರೆ ಆಗುವ ಅನರ್ಥಗಳೇನು? ಎಂಬೀ ವಿಷಯಗಳು ಮುಂದಿನ ಭಾಗದಲ್ಲಿ ತಿಳಿಸಲ್ಪಡುವುದು.

ಸದ್ವೃತ್ತ ರತ್ನಾವಳಿಯ ಪ್ರಕಟನವು.

ಈ ಗ್ರಂಥವು ಆಯುರ್ವೇದ ಮಹಾಭಾರತ ಧರ್ಮಸೂಕ್ತ ಮನುಸ್ಮೃತಿಗಳಿಂದ ಸಾರವಚನೋದ್ಧಾರಪೂರ್ವಕವಾಗಿ ಶುದ್ಧಸಂಸ್ಕೃತಭಾಷೆಯಿಂದ ಬಾಲಬೋಧಾರ್ಥವಾಗಿ ಗ. ವೈ. ಕೃಷ್ಣಾಚಾರ್ಯರಿಂದ ರಚಿಸಲ್ಪಟ್ಟು ಮುದ್ರಿಸಲ್ಪಡುತ್ತಿದೆ.

ಈ ಗ್ರಂಥದ ವಿಷಯ ವಿಭಾಗಕ್ರಮವು:

(೧) ಸದಾಚಾರಪರದ ವಚನಭಾಗದಲ್ಲಿ:—ಬ್ರಾಹ್ಮಮುಹೂರ್ತೋತ್ಥಾನ ಶೌಚವ್ಯಾಯಾಮ ಸ್ನಾನ ಯಜನ ಲೋಕಯಾತ್ರಾನುವರ್ತನ ಹಿತಾನ್ನಪಾನ ಗುರುಸೇವಾಧ್ಯಯನ ಬ್ರಹ್ಮಚರ್ಯಶಯನ ಸದಾಚರಣಾದಿ ಸರ್ವಸ್ವಸ್ಥವೃತ್ತವು ಸೂತ್ರಪ್ರಾಯವಾಗಿ ನಿರೂಪಿಸಲ್ಪಟ್ಟಿದೆ.

ಶ್ಲೋಕರೂಪ ದ್ವಿತೀಯ ಭಾಗದಲ್ಲಿ:—ಉಷಃಕಾಲೋತ್ಥಾನ ಮೊದಲು ಸುಷುಪ್ತಿ ಪರ್ಯಂತವಾಗಿ ನಿತ್ಯವು ಆಯುರಾರೋಗ್ಯಾದಿಗಳಿಗೆ ಅತ್ಯವಶ್ಯವಾಗಿ ಅನುಷ್ಠಿಸಬೇಕಾದ ಸರ್ವಸದಾಚಾರಗಳು ಸಕಾರಣವಾಗಿ ತತ್ತತ್ಫಲದೊಡನೆ ಹೇಳಲ್ಪಟ್ಟಿವೆ.

(೨) ಹಿತಾಹಿತಪರದ ಪೂರ್ವಭಾಗದಲ್ಲಿ:—ರೋಗಾರೋಗ್ಯವಿವೇಚನ, ಪಥ್ಯಾಪಥ್ಯಪದಾರ್ಥ, ಹಿತಾಹಿತಕರ್ಮ, ಹಿತಾಹಿತಾನ್ನಪಾನ ನಿದ್ರಾದಿಗಳು, ದೇಹಪ್ರಕೃತಿಗುಣದೋಷಸ್ವರೂಪಗಳು, ಸರ್ವರೋಗನಿದಾನ ತತ್ಪ್ರತೀಕಾರೋಪಾಯಗಳು ಹೇಳಲ್ಪಟ್ಟಿವೆ.

ಉತ್ತರಭಾಗದಲ್ಲಿ:–ವಾತಪಿತ್ತಶ್ಲೇಷ್ಮಪ್ರಭಾವವು, ಹಿತಾಹಿತಗಳಾದ ಕಾಲ ದೇಶ ವಾಯು ಜಲ ಷಡ್ರಸ ಅಗ್ನಿ ಓಜಸ್ಸುಗಳ ಪ್ರಭಾವವು ನಿರೂಪಿಸಲ್ಪಟ್ಟಿವೆ.

(೩) ಇಂದ್ರಿಯಪರದ ಪೂರ್ವಭಾಗದಲ್ಲಿ:— ಇಂದ್ರಿಯಲಕ್ಷಣ ಸ್ವರೂಪ ಶಕ್ತಿ ತತ್ಕಾರ್ಯ ತತ್ಫಲ ತಜ್ಜಯೋಪಾಯಗಳು ತೋರಿಸಲ್ಪಟ್ಟಿವೆ.

ಉತ್ತರಭಾಗದಲ್ಲಿ:—ಆಯುರಾರೋಗ್ಯಾಭಿವರ್ಧಕವಾದ ಪರಾಶರೋಕ್ತ ಸದಾಚಾರಗಳು, ಆಯುರ್ಲಕ್ಷಣ, ಆಯುರ್ವೃದ್ಧಿಕ್ಷಯಕಾರಣಗಳು, ಅಪಮೃತ್ಯುಕಾಲಮೃತ್ಯು ದೀರ್ಘಾಯುರ್ಯೋಗರಹಸ್ಯಗಳು ಉಕ್ತವಾಗಿವೆ.

(೪) ನಾಯಕಮಣಿಸ್ಥಾನೀಯವಾದ ಆರ್ಯಧರ್ಮಸಾರಪಟಲದಲ್ಲಿ:—ಸಾಮಾನ್ಯವಿಶೇಷ ಪ್ರವೃತ್ತಿನಿವೃತ್ತಿ ಸ್ತ್ರೀಪುಂಧರ್ಮವಿವೇಕವು, ಮುಖ್ಯಕಲ್ಪಾನುಷ್ಠಾನಾಸಮರ್ಥರಿಗೆ ಆಯುರಾರೋಗ್ಯಾದಿ ವಿರೋಧವಿಲ್ಲದಂತೆ ವಿಪ್ರಾದಿವರ್ಣಧರ್ಮವು ಬ್ರಹ್ಮಚರ್ಯಾದ್ಯಾಶ್ರಮಧರ್ಮವು, ಇನ್ನೂ ಉಭಯಲೋಕಸಾಧಕ ಸರ್ವಧರ್ಮಗಳೂ ಆಪತ್ತಿನಲ್ಲಿ ದೇಶಕಾಲಾವಸ್ಥಾದಿಗಳಿಂದ ಸಂಕೋಚಿಸಲ್ಪಟ್ಟು, ಪಾಪರೋಗ ನಿವರ್ತಕ ಪ್ರಾಯಶ್ಚಿತ್ತಪುರಸ್ಸರವಾಗಿ ನಿರೂಪಿಸಲ್ಪಟ್ಟಿವೆ.